

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 9 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 232 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



'ಟಿಪ್ಪು ನಿಜಕನಸುಗಳು' ಪುಸ್ತಕ ಮಾರಾಟ, ಹಂಚಿಕೆ ತಡೆಯಾಜ್ಞೆ ತೆರವು

ನಾಟಕ ನಿರ್ಬಂಧಕ್ಕೂ ಕೋರ್ಟ್ ಮೊರೆ

ಬೆಂಗಳೂರು, ಡಿ.8– ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿಸಿರುವ 'ಟಿಪ್ಪು ನಿಜಕನಸುಗಳು' ಪುಸ್ತಕ ಮಾರಾಟ ಮತ್ತು ಹಂಚಿಕೆಗೆ ಬೆಂಗಳೂರು ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ ನ.21ರಂದು ನೀಡಿದ್ದ ತಾತ್ಕಾಲಿಕ ತಡೆಯಾಜ್ಞೆ ಗುರುವಾರ ತೆರವುಗೊಳಿಸಿದೆ.

ಬೆಂಗಳೂರು ಜಿಲ್ಲಾ ವಕ್ಫ್ ಮಂಡಳಿ ಮಾಜಿ ಅಧ್ಯಕ್ಷ, ಬೆಂಗಳೂರು ನಿವಾಸಿ ಬಿ.ಎಸ್.ರಫೀವುಲ್ಲಾ ಸಲ್ಲಿಸಿದ್ದ ದಾವೆಗೆ ಆಕ್ಷೇಪಿಸಿ ಪ್ರತಿವಾದಿಗಳು ಮಂಡಿಸಿದ ವಾದವನ್ನು 14ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ▶ 8ನೇ ಪುಟಕ್ಕೆ



ಪ್ರಧಾನಿ ಮೋದಿ ತವರು ಗುಜರಾತ್‌ನಲ್ಲಿ

ಬಿಜೆಪಿಗೆ ಭರ್ಜರಿ ಗೆಲುವು

ಒಟ್ಟು ಕ್ಷೇತ್ರ 182; 156ರಲ್ಲಿ ಕಮಲ, ಕಾಂಗ್ರೆಸ್ ಬರೀ 17, ಆಪ್‌ಗೆ 5 ಸ್ಥಾನ, ನಾಲ್ವರು ಇತರರ ಗೆಲುವು



ಅಹಮದಾಬಾದ್, ಡಿ.8–ಗುಜರಾತ್ ವಿಧಾನಸಭಾ ಚುನಾವಣೆಯ ಫಲಿತಾಂಶ ಹೊರ ಬಿದ್ದಿದ್ದು, ಸತತ ಏಳನೇ ಬಾರಿಗೆ ಪ್ರಧಾನಿ ಮೋದಿ ತವರಿನಲ್ಲಿ ಬಿಜೆಪಿ ಆಡಳಿತದ ಚುಕ್ಕಾಣಿ ಹಿಡಿಯುವ ಮೂಲಕ ತನ್ನ ಗೆಲುವಿನ ನಾಗಾಲೋಟವನ್ನು ಮುಂದುವರೆಸಿದೆ.

ಒಟ್ಟು 182 ಕ್ಷೇತ್ರಗಳ ಪೈಕಿ ಬಿಜೆಪಿ 156 ಸ್ಥಾನಗಳನ್ನು ಪಡೆಯುವ ಮೂಲಕ ಭರ್ಜರಿ ಗೆಲುವು ಸಾಧಿಸಿದರೆ, ಕಾಂಗ್ರೆಸ್ ಕೇವಲ 17 ಸ್ಥಾನಗಳಿಗೆ ಕುಸಿದಿದೆ. ಆಮ್ ಆದ್ಮಿ ಪಾರ್ಟಿ 5 ಸ್ಥಾನಗಳನ್ನು ತನ್ನದಾಗಿಸಿಕೊಂಡರೆ, ನಾಲ್ವರು ಇತರರು ಗೆಲುವು ಸಾಧಿಸಿದ್ದಾರೆ. ಗುಜರಾತ್ ವಿಧಾನಸಭೆ ಇತಿಹಾಸದಲ್ಲಿ ಸತತ ಏಳನೇ ಬಾರಿಗೆ ಆಡಳಿತದ ಚುಕ್ಕಾಣಿ ಹಿಡಿದ ದಾಖಲೆ ಜೊತೆಗೆ ಅತೀ ಹೆಚ್ಚು ಸ್ಥಾನಗಳನ್ನು ಪಡೆದ ದಾಖಲೆಯನ್ನೂ ಕೂಡ ಈ ಚುನಾವಣೆಯಲ್ಲಿ ಬಿಜೆಪಿ ನಿರ್ಮಿಸಿದೆ. 1985ರಲ್ಲಿ 149 ಸ್ಥಾನಗಳನ್ನು ಗೆಲ್ಲುವ ಮೂಲಕ ಕಾಂಗ್ರೆಸ್ ದಾಖಲೆ ಸೃಷ್ಟಿಸಿತ್ತು. ▶ 8ನೇ ಪುಟಕ್ಕೆ

ಭೂಪೇಂದ್ರ ಪಟೇಲ್ ಮತ್ತೆ ಮುಖ್ಯಮಂತ್ರಿ: ಡಿಸೆಂಬರ್ 12ಕ್ಕೆ ಪ್ರಮಾಣ



ಗಾಂಧಿನಗರ, ಡಿ.8– ರಾಷ್ಟ್ರದಾದ್ಯಂತ ತೀವ್ರ ಗಮನ ಸೆಳೆದಿದ್ದ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪ್ರಚಂಡ ದಿಗ್ವಿಜಯ ಸಾಧಿಸಿದ್ದು, ಡಿಸೆಂಬರ್ 12ರಂದು ನೂತನ ಮುಖ್ಯ ಮಂತ್ರಿಯ ಪದಗ್ರಹಣ ಸಮಾರಂಭ ನಡೆಯಲಿದೆ. ಸೋಮವಾರ ಮಧ್ಯಾಹ್ನ 12 ರಿಂದ 2 ಗಂಟೆಯವರೆಗೂ ನಡೆಯಲಿರುವ ಸಮಾರಂಭದಲ್ಲಿ ಭೂಪೇಂದ್ರ ಪಟೇಲ್ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ▶ 8ನೇ ಪುಟಕ್ಕೆ

ಹಿಮಾಚಲ 'ಕೈ' ವಶ

ಸಿಮ್ಲಾ, ಡಿ.8–ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯ ಫಲಿತಾಂಶ ಹೊರ ಬಿದ್ದಿದ್ದು, ಒಟ್ಟು 68 ಸ್ಥಾನಗಳ ಪೈಕಿ 40 ಸ್ಥಾನಗಳನ್ನು ಗೆಲ್ಲುವ ಮೂಲಕ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಬಿಜೆಪಿ 25 ಸ್ಥಾನಗಳನ್ನು ಪಡೆದಿದ್ದರೆ, ಇತರರು 3 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದಾರೆ.

ಅರವಿಂದ್ ಕೇಜ್ರಿವಾಲ್ ಅವರ ಆಮ್ ಆದ್ಮಿ ಪಕ್ಷ ಒಂದೇ ಒಂದು ಸ್ಥಾನವನ್ನು ಗೆಲ್ಲಲು ಸಾಧ್ಯವಾಗದೇ ಮುಖಭಂಗ ಅನುಭವಿಸಿದೆ. 1985ರ ನಂತರ ಹಿಮಾಚಲ ಪ್ರದೇಶದಲ್ಲಿ ನಡೆದ ಚುನಾವಣೆಗಳಲ್ಲಿ ಆಡಳಿತ ಪಕ್ಷ ಸತತ ಎರಡನೇ ಬಾರಿಗೆ ಗೆದ್ದ ಇತಿಹಾಸವಿಲ್ಲ. ಈ ಬಾರಿ ನಡೆದ ಚುನಾವಣೆಯಲ್ಲೂ ಕೂಡ ಅದು ಪುನರಾವರ್ತನೆಯಾಗಿದೆ.

ಆದರೂ 'ಆಪರೇಷನ್ ಕಮಲ' ಭೀತಿ

40 ಕ್ಷೇತ್ರಗಳಲ್ಲಿ ಗೆದ್ದು ಬೀಗುತ್ತಿರುವ ಕಾಂಗ್ರೆಸ್‌ಗೆ ಆಪರೇಷನ್ ಕಮಲ ಭಯ ಕಾಡುತ್ತಿರುವಂತಿದೆ. ತಮ್ಮ ಎಲ್ಲಾ ಶಾಸಕರನ್ನು ಛತ್ತೀಸ್‌ಗಡದ ರೆಸಾರ್ಟ್‌ಗೆ ರವಾನಿಸುವ ಮೂಲಕ ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ರೆಸಾರ್ಟ್ ರಾಜಕೀಯ ಆರಂಭಿಸಿದೆ. ಈ ರಾಜ್ಯದಲ್ಲಿ ಶಾಸಕಾಂಗ ಪಕ್ಷದ ನಾಯಕ ಯಾರು ಎಂಬುದನ್ನು ಈವರೆವಿಗೂ ಕಾಂಗ್ರೆಸ್ ಪ್ರಕಟಿಸಿಲ್ಲ.



ಕರ್ನಾಟಕದಲ್ಲೂ ಉತ್ತರ ಪ್ರದೇಶ, ಗುಜರಾತ್ ಮಾದರಿ ಅನುಸರಣೆ

35ಕ್ಕೂ ಅಧಿಕ ಶಾಸಕರಿಗೆ ಟಿಕೆಟ್ ಕೈ ತಪ್ಪುವ ಸಾಧ್ಯತೆ

ಬೆಂಗಳೂರು, ಡಿ.8(ಕೆಎಂಶಿ)– ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಪ್ರಚಂಡ ಗೆಲುವು ಸಾಧಿಸಿದ ಬಿಜೆಪಿ ಕರ್ನಾಟಕದಲ್ಲೂ, ಉತ್ತರ ಪ್ರದೇಶ ಹಾಗೂ ಗುಜರಾತ್ ಮಾದರಿಯ ತಂತ್ರಗಾರಿಕೆಗೆ ಇಳಿಯಲಿದ್ದು, 35ಕ್ಕೂ ಹೆಚ್ಚು ಹಾಲಿ ಶಾಸಕರಿಗೆ ಟಿಕೆಟ್ ನೀಡದಿರಲು ನಿರ್ಧರಿಸಿದೆ ಎಂದು ಬಲ್ಲಮೂಲಗಳು ತಿಳಿಸಿವೆ. ಬಿಜೆಪಿಯ ಉನ್ನತ ಮೂಲಗಳು ಈ ವಿಷಯವನ್ನು ತಿಳಿಸಿದ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದ ಕೆಲ ಸಚಿವರು ಸೇರಿದಂತೆ ಈ ಪ್ರಮಾಣದ ಶಾಸಕರಿಗೆ ಚುನಾವಣೆಯ ಟಿಕೆಟ್ ನಿರಾಕರಿಸಲು ಬಿಜೆಪಿ ವರಿಷ್ಠರು ಯೋಚಿಸಿದ್ದಾರೆ.

ಭ್ರಷ್ಟಾಚಾರದ ಆರೋಪ, ಕ್ಷೇತ್ರದ ಜನತೆಯ ಜೊತೆ ಬೆರೆಯದಿರುವುದು, ವಯೋ ಕಾರಣ ಹಾಗೂ ಪಕ್ಷದ ಸಂಘಟನೆಯಲ್ಲಿ ವಿಫಲರಾಗಿರುವ ಶಾಸಕರಿಗೆ ಈ ಬಾರಿ ಟಿಕೆಟ್ ಇಲ್ಲ. ಅಂತಹ ಕ್ಷೇತ್ರಗಳಲ್ಲಿ ಹೊಸ ಮುಖಗಳಿಗೆ ಅವಕಾಶ ನೀಡಲು ಈಗಾಗಲೇ ವೇದಿಕೆ ಸಿದ್ಧಗೊಂಡಿದೆ. ಇಂತಹ ಕ್ಷೇತ್ರಗಳಲ್ಲಿ ಎರಡನೇ, ಮೂರನೇ ಸಾಲಿನಲ್ಲಿರುವ ಕಾರ್ಯಕರ್ತರು ಇಲ್ಲವೇ ಕಾಂಗ್ರೆಸ್, ಜೆಡಿಎಸ್‌ನಲ್ಲಿರುವ ವರ್ಚಸ್ವಿ ▶ 8ನೇ ಪುಟಕ್ಕೆ

ವಿದ್ಯುತ್ ದರ ಕಡಿತಕ್ಕೆ ಸಂಪುಟ ಸಭೆ ಸಮ್ಮತಿ

● ಇದರಿಂದ ವಿದ್ಯುತ್ ಕಂಪನಿಗಳಿಗಾಗುವ 3000 ಕೋಟಿ ನಷ್ಟ ಭರಿಸಲು ನಿರ್ಧಾರ
● ಪ್ರತಿ ಯೂನಿಟ್‌ಗೆ 70 ಪೈಸೆಯಿಂದ 2 ರೂ ವಿದ್ಯುತ್ ದರ ಇಳಿಕೆಗೆ ತೀರ್ಮಾನ

ಬೆಂಗಳೂರು, ಡಿ.8(ಕೆಎಂಶಿ)– ರಾಜ್ಯ ವಿಧಾನಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡು ವಿದ್ಯುತ್ ದರ ಕಡಿತಗೊಳಿಸಲು ತೀರ್ಮಾನಿಸಿರುವ ಸರ್ಕಾರ, ಇದರಿಂದ ವಿದ್ಯುತ್ ಕಂಪನಿಗಾಗುವ 3000 ಕೋಟಿ ರೂ. ನಷ್ಟ ಭರಿಸಲು ಸಚಿವ ಸಂಪುಟ ಸಮ್ಮತಿಸಿದೆ. ವಿದ್ಯುತ್ ಸರಬರಾಜು ಕಂಪನಿಗಳ ಹಣಕಾಸಿನ ಸ್ಥಿತಿಯನ್ನು ಸುಧಾರಿಸಲು ಸರ್ಕಾರದಿಂದ ಹಣಕಾಸಿನ ನೆರವು ಒದಗಿಸುವುದರ ಜೊತೆಗೆ ಮೂರು ಸಾವಿರ ಕೋಟಿ ರೂ.ಗಳ ಸಾಲವನ್ನು ಪಡೆಯಲು ಖಾತರಿ ನೀಡಿದೆ.

ಕಳೆದ ಎರಡು ತಿಂಗಳ ಹಿಂದೆಯಷ್ಟೇ ವಿದ್ಯುತ್ ಪ್ರಸರಣ ನಿಗಮಗಳು ಪ್ರತಿ ಯುನಿಟ್‌ಗೆ 2 ರಿಂದ 3 ರೂ. ದರ ಹೆಚ್ಚಳ ಮಾಡಿದ್ದವು. ಇದರಿಂದ ಗ್ರಾಹಕರಿಗೆ ದೊಡ್ಡ ಹೊರೆಯಾಗುತ್ತಿದೆ ಎಂಬುದನ್ನು ಮನಗಂಡ



ಸರ್ಕಾರ ಇದೀಗ ಪ್ರತಿ ಯೂನಿಟ್‌ಗೆ 70 ಪೈಸೆಯಿಂದ ಎರಡು ರೂ. ಇಳಿಸಲು ಮುಂದಾಗಿದೆ. ಇದರಿಂದಾಗುವ ನಷ್ಟವನ್ನು ಸರ್ಕಾರವೇ ಅನುದಾನ ಮತ್ತು ಸಾಲದ ರೂಪದಲ್ಲಿ ಭರಿಸಲು ಸಂಪುಟ ಸಮ್ಮತಿಸಿದೆ. ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ, ವಿದ್ಯುತ್ ಇಲಾಖೆಗೆ 2008 ರಿಂದ 15290 ಕೋಟಿ ರೂ.ಗಳ ಸಬ್ಸಿಡಿ ನೀಡಬೇಕಾಗಿತ್ತು, ಅದರಲ್ಲಿ 8064 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಒಪ್ಪಿಗೆ ನೀಡಲಾಗಿದೆ ಎಂದರು. ಖಾಸಗಿ ಹೂಡಿಕೆ ಆಧಾರದ ಮೇಲೆ ಗ್ರಿಡ್ ಬೆಂಬಲಿತ ಒಂದು ಸಾವಿರ ಮೆಗಾವ್ಯಾಟ್ ಪಂಪ್ಡ್ ಹೈಡ್ರೋ ಸ್ಟೋರೇಜ್ ವಿದ್ಯುತ್ ಯೋಜನೆಯನ್ನು ಪಿಸಿಕೆಎಲ್ ಸಂಸ್ಥೆಗಳಿಂದ ನಾಲ್ಕು ಸಾವಿರ ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಅನುಷ್ಠಾನಗೊಳಿಸಲು ಸಮ್ಮತಿ ನೀಡಿದೆ.

ಮೈಸೂರು ಜಿಲ್ಲೆ ನಂಜನಗೂಡು–ಶಿರಾ ರಸ್ತೆ ಸಂಪರ್ಕಿಸಲು ಕಬಿನಿ ನದಿಗೆ ಅಡ್ಡಲಾಗಿ 27 ಕೋಟಿ ರೂ.ಅಂದಾಜು ಮೊತ್ತದಲ್ಲಿ ಸೇತುವೆ ನಿರ್ಮಾಣ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಚಿಕ್ಕಮಗಳೂರಿನಲ್ಲಿ ▶ 8ನೇ ಪುಟಕ್ಕೆ

ಗುಜರಾತ್‌ನಲ್ಲಿ ಆಮ್ ಆದ್ಮಿಯಿಂದ ಕಾಂಗ್ರೆಸ್‌ಗೆ ಹಿನ್ನಡೆ

● ರಾಹುಲ್ ಗಾಂಧಿ ಪಾದಯಾತ್ರೆಯಲ್ಲಿ ತೊಡಗಿದ್ದರಿಂದ ಪ್ರಚಾರಕ್ಕೆ ಹೋಗಲಾಗಲಿಲ್ಲ
● ಯಾವ ಕಾರಣಕ್ಕೂ ಗುಜರಾತ್ ಫಲಿತಾಂಶ ರಾಜ್ಯದ ಮೇಲೆ ಪರಿಣಾಮ ಬೀರಲ್ಲ




ಮೈಸೂರು,ಡಿ.8(ಎಂಟಿವೈ)– ಗುಜರಾತ್‌ನಲ್ಲಿ ಆಮ್ ಆದ್ಮಿ ಪಕ್ಷ ಚುನಾವಣಾ ಕಣದಲ್ಲಿ ಕಾಂಗ್ರೆಸ್ ಮತಗಳನ್ನು ವಿಭಜನೆ ಮಾಡಿದ್ದರಿಂದ ಕಾಂಗ್ರೆಸ್‌ಗೆ ಹಿನ್ನಡೆಯಾಗಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿಶ್ಲೇಷಿಸಿದ್ದಾರೆ.

ಮೈಸೂರಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಗುಜರಾತ್‌ನಲ್ಲಿ ಹಿನ್ನಡೆಯಾಗುತ್ತದೆ ಎಂಬ ಮಾಹಿತಿ ನಮಗೆ ಇತ್ತು. ಆದರೆ ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಪರ ಒಲವು ಇದೆ ಎಂಬುದು ತಿಳಿದಿತ್ತು. ನಮಗೆ ದೊರೆತ ಮಾಹಿತಿಯಂತೆ ಬಿಜೆಪಿ ಮತ ವಿಭಜನೆ ಮಾಡಲು ಆಮ್ ಆದ್ಮಿಗೆ ಫಂಡ್ ನೀಡಿದೆ. ಈ ಬಾರಿ ಕಾಂಗ್ರೆಸ್ ಪಕ್ಷಕ್ಕಿಂತಲೂ ಹೆಚ್ಚು ಹಣವನ್ನು ಆಮ್ ಆದ್ಮಿ ಗುಜರಾತ್‌ನಲ್ಲಿ ಖರ್ಚು ಮಾಡಿದೆ. ಇದರಿಂದಲೇ ಕಾಂಗ್ರೆಸ್ ಪರವಾಗಿದ್ದ ಮತಗಳನ್ನು ಆಪ್ ಪಕ್ಷ ಸೆಳೆದಿದೆ. ಇದು ಕಾಂಗ್ರೆಸ್ ▶ 2ನೇ ಪುಟಕ್ಕೆ

ಇಂದಿನಿಂದ ರಂಗಾಯಣದಲ್ಲಿ ಬಹುರೂಪಿ ರಾಷ್ಟ್ರೀಯ ರಂಗೋತ್ಸವ

ಕನ್ನಡದ 12 ನಾಟಕ ಸೇರಿದಂತೆ ಒಟ್ಟು 20 ಪ್ರದರ್ಶನ





ಮೈಸೂರು,ಡಿ.8(ಎಂಟಿವೈ)–ರಂಗಾಯಣದ ಪ್ರಸಕ್ತ ಸಾಲಿನ ಬಹುರೂಪಿ ರಾಷ್ಟ್ರೀಯ ರಂಗೋತ್ಸವವನ್ನು 'ಭಾರತೀಯತೆ' ಶೀರ್ಷಿಕೆಯಲ್ಲಿ ವಿಭಿನ್ನ ಹಾಗೂ ವಿಶಿಷ್ಟ ಕಾರ್ಯಕ್ರಮದ ಮೂಲಕ ಎಲ್ಲಾ ವರ್ಗದ ಜನರನ್ನು ತಲುಪಲು ಕ್ರಮ ಕೈಗೊಳ್ಳಲಾಗಿದ್ದು, ರಂಗಾಯಣ ಮದುವಣಗಿತ್ತಿಯಂತೆ ಶೃಂಗಾರಗೊಂಡಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದ್ದಾರೆ.

ರಂಗಾಯಣದ ಆವರಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಹುರೂಪಿ ರಾಷ್ಟ್ರೀಯ ರಂಗೋತ್ಸವದಲ್ಲಿ ಈ ಬಾರಿ ವಿಶಿಷ್ಟ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ರಂಗಉತ್ಸವದ ರಸದೌತಣ ಉಣಬಡಿಸಲು ಸಕಲ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದ್ದು, ಶುಕ್ರವಾರದಿಂದ(ಡಿ.9) ಬಹುರೂಪಿಯ ಚಲನಚಿತ್ರೋತ್ಸವ, ಪುಸ್ತಕ ಪ್ರದರ್ಶನ, ಕರಕುಶಲ ವಸ್ತುಪ್ರದರ್ಶನ, ದೇಸಿ ಆಹಾರ ಮೇಳ ಆರಂಭವಾಗಲಿದೆ. ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಮುನ್ನುಡಿಯಾಗಿ 'ಬಹುರೂಪಿ ಜಾನಪದೋತ್ಸವ' ಗುರುವಾರ ಸಂಜೆಯೇ ಆರಂಭವಾಗಿದ್ದು, ಈ ಸಾಲಿನ

ಡಿ.12ರಿಂದ 15ರವರೆಗೆ ರಸಘಳಿಗೆ

ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಪ್ರತಿ ದಿನ ಸಂಜೆ 4 ಗಂಟೆಗೆ ರಸಘಳಿಗೆಗಳು ಕಾರ್ಯಕ್ರಮ ನಡೆಯಲಿದೆ. ಡಿ.12ರಂದು ಕಿರಗಸೂರು ರಾಜಪ್ಪ ಮತ್ತು ತಂಡದಿಂದ ರಂಗಗೀತೆಗಳು, ಡಿ.13 ರಂದು ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ವತಿಯಿಂದ ದೇಸಿ ವೈಭವ ನೃತ್ಯ ರೂಪಕ, ಡಿ.14 ರಂದು ಶಾಂತಲಾ ವಟ್ಟಂ ಅವರಿಂದ ಗಝಲ್, ಡಿ.15 ರಂದು ನಿತ್ಯನಿರಂತರ ಟ್ರಸ್ಟ್–ವಿಶೇಷ ಚೇತನ ಅವರಿಂದ ಜಾನಪದ ನೃತ್ಯ ಮತ್ತು ದಿವಾಕರ ಹೆಗಡೆ ಅವರಿಂದ ತಾಳ ಮದ್ದಳೆ ಕಾರ್ಯಕ್ರಮ ನಡೆಯಲಿದೆ.

ನಾಟಕ ಪ್ರದರ್ಶನ

ಭೂಮಿಗೀತ ರಂಗ ವೇದಿಕೆಯಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಾಟಕ ಪ್ರದರ್ಶನ ನಡೆಯಲಿದೆ. ಡಿ.9 ರಂದು ಟಿಪ್ಪು ನಿಜಕನಸುಗಳು(ಕನ್ನಡ), ಡಿ.10 ರಂದು ಕರ್ಣಭಾರಂ(ಸಂಸ್ಕೃತ), ಡಿ.11 ರಂದು ಲೀಲಾವತಿ(ಕನ್ನಡ), ಡಿ.12 ರಂದು ಇಮಾ ನಂಗಿ ನತಂಬಾಕ್ತ(ಮಣಿಪುರಿ), ಡಿ.13 ರಂದು ಬೈ 2 ಕಾಫಿ(ಕನ್ನಡ), ಡಿ.14 ಬೆಟರ್ ಹಾಫ್ (ಹಿಂದಿ), ಡಿ15ರಂದು ಛಾಯಾಚಿತ್ರಂ ಮಾಯಾಚಿತ್ರಂ(ಮಲಯಾಳಂ) ನಾಟಕ ಪ್ರದರ್ಶನಗೊಳ್ಳಲಿವೆ.

ಸಂಪತ್ ರಂಗಮಂದಿರ(ಕಿರುರಂಗ ಮಂದಿರ)ದಲ್ಲಿ ಪ್ರತಿದಿನ ಸಂಜೆ 7ಕ್ಕೆ ನಾಟಕ ಪ್ರದರ್ಶನ ಆರಂಭಗೊಳ್ಳಲಿದೆ. ಡಿ.10 ರಂದು ಚಿದಂಬರ ರಹಸ್ಯ(ಕನ್ನಡ), ಡಿ.11 ರುದು ಚಂದ್ರಹಾಸ(ಕನ್ನಡ), ಡಿ.12 ರಂದು ಕಾಪ(ತುಳು), ಡಿ.13 ರಂದು ತುಕ್ಕೋಜಿ(ಕನ್ನಡ), ಡಿ.14 ರಂದು ಪಂಚಕನ್ಯಾಸ್ಮರೇನಿತ್ಯಂ (ಕನ್ನಡ), ಡಿ.15 ರಂದು ಅವನಿ (ಕನ್ನಡ) ನಾಟಕ ಪ್ರದರ್ಶನಗೊಳ್ಳಲಿದೆ.

ವನರಂಗದಲ್ಲಿ ಡಿ.13 ರಂದು ಸಂಜೆ 7.30ಕ್ಕೆ ಜೋಡಾಸ್ ದೇಸಾಂಗ್ರೆ(ಹರಿಯಾಣ್ವಿ) ನಾಟಕ ಪ್ರದರ್ಶನ ನಡೆಯಲಿದೆ.

ಕಲಾಮಂದಿರದಲ್ಲಿ ಪ್ರತಿ ದಿನ ಸಂಜೆ 7.30ಕ್ಕೆ ನಾಟಕ ಪ್ರದರ್ಶನ ನಡೆಯಲಿದೆ. ಡಿ.10 ರಂದು ಕರಿಮಾಯಿ(ಕನ್ನಡ), ಡಿ.11 ರಂದು ಇಡಕಿಣಿ ಕಥಾಯರಥಂ(ತಮಿಳು), ಡಿ.12 ರಂದು ಗೌಡ್ರ ಗದ್ಲ(ಕನ್ನಡ), ಡಿ.13 ರಂದು ಉಡಿಯೊಳಗಣ ಕಿಚ್ಚು(ಕನ್ನಡ), ಡಿ.14 ರಂದು ವಿದ್ಯಾಸುಂದರಿ ಬೆಂಗಳೂರು ನಾಗರತ್ನಮ್ಮ(ಕನ್ನಡ), ಡಿ.15 ರಂದು ಮಾಯಾಬಜಾರ್(ತೆಲುಗು) ನಾಟಕ ಪ್ರದರ್ಶನ ನಡೆಯಲಿದೆ.

ನಾಟಕೋತ್ಸವದಲ್ಲಿ 7 ರಾಜ್ಯಗಳ 7 ವಿವಿಧ ಭಾಷೆಗಳ ನಾಟಕ ಗಳು, ಕನ್ನಡದ 12 ನಾಟಕಗಳು ಮತ್ತು ತುಳು ನಾಟಕ ▶ 8ನೇ ಪುಟಕ್ಕೆ



'ಸ್ವಗ್ರಾಮ ಫೆಲೋಶಿಪ್'ಗೆ ಅರ್ಜಿ ಆಹ್ವಾನ; 75 ಹಳ್ಳಿಗಳಿಂದ 75 ತಂಡಗಳ ಆಯ್ಕೆ

20ರಿಂದ 50 ವರ್ಷದೊಳಗಿನ ಅಭ್ಯರ್ಥಿಗಳ ಮೂವರ ತಂಡ ಅರ್ಜಿ ಸಲ್ಲಿಸಬಹುದು



ಮೈಸೂರು,ಡಿ.8(ಪಿಎಂ)–ರಾಜ್ಯದ ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ಗದಗದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯದ ನೇತೃತ್ವದಲ್ಲಿ 'ಸ್ವಗ್ರಾಮ ಫೆಲೋಶಿಪ್' ಆರಂಭಿಸಲಾಗಿದೆ ಎಂದು ಸ್ವಗ್ರಾಮ ಫೆಲೋಶಿಪ್ ಯೋಜನೆಯ ಸಲಹೆಗಾರ ಡಾ.ತಿಪ್ಪೇಸ್ವಾಮಿ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಯೂತ್ ಫಾರ್ ಸೇವಾ ಟ್ರಸ್ಟ್, ಚಾಣಕ್ಯ ವಿಶ್ವವಿದ್ಯಾನಿಲಯ, ಶಿವಮೊಗ್ಗದ ಕುವೆಂಪು ವಿವಿ ಅಬ್ದುಲ್ ನಜೀರ್ ಸಾಬ್ ಅಧ್ಯಯನ ಪೀಠ, ಪ್ರಜ್ಞಾ ಕರ್ನಾಟಕ ಸಂಯುಕ್ತಾಶ್ರಯದಲ್ಲಿ ಈ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ ಎಂದರು.

ದೇಶದಲ್ಲೇ ಇದೊಂದು ವಿಶಿಷ್ಟ ಫೆಲೋಶಿಪ್ ಆಗಿದ್ದು, ತಮ್ಮ ಗ್ರಾಮ ಅಭಿವೃದ್ಧಿಗೊಳ್ಳಬೇಕೆಂಬ ಹಂಬಲ ಇರುವ ಮೂವರ ತಂಡ ಈ ಫೆಲೋಶಿಪ್ ಪಡೆಯಲು ಅರ್ಜಿ ಸಲ್ಲಿಸಬಹುದು. ರಾಜ್ಯದ 75 ಹಳ್ಳಿಗಳಿಂದ ತಲಾ 1 ತಂಡದಂತೆ 75 ತಂಡಗಳನ್ನು ಆಯ್ಕೆ ಮಾಡಲಾಗುವುದು. ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ 75 ಗ್ರಾಮಗಳಿಗೆ ಈ ಅವಕಾಶ ಕಲ್ಪಿಸಲಾಗುತ್ತಿದೆ ಎಂದರು.

ಕನಿಷ್ಠ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹೊಂದಿರುವ 20ರಿಂದ 50 ವರ್ಷದೊಳಗಿನ ಅಭ್ಯರ್ಥಿಗಳು ಮೂವರ ತಂಡ ರಚಿಸಿಕೊಂಡು ಅರ್ಜಿ ಸಲ್ಲಿಸಬಹುದು. ಮೂವರಲ್ಲಿ ಇಬ್ಬರು ತಮ್ಮ ಗ್ರಾಮದಲ್ಲಿ ವಾಸವಿರುವುದು ಕಡ್ಡಾಯ. ಉಳಿದ ಒಬ್ಬರು ಗ್ರಾಮದಿಂದ ಹೊರಗಿದ್ದರೂ ಆ ಗ್ರಾಮದ ವಿಕಾಸಕ್ಕೆ ತೊಡಗಿಸಿಕೊಳ್ಳುವ ಆಸಕ್ತಿ ಹೊಂದಿರಬೇಕು. ಮೂವರಲ್ಲಿ ಒಬ್ಬ ಮಹಿಳಾ ಅಭ್ಯರ್ಥಿ ಇದ್ದರೆ ಉತ್ತಮ. ಅರ್ಜಿಗಳನ್ನು ಆಯ್ಕೆ ಮಾಡಿದ ನಂತರ ಸಂದರ್ಶನ ನಡೆಯಲಿದೆ. ಆಯ್ಕೆಯಾದ ತಂಡಗಳಲ್ಲಿ ಆಯಾಯ ಗ್ರಾಮದಲ್ಲೇ ವಾಸವಿರುವ ಇಬ್ಬರು ಅಭ್ಯರ್ಥಿಗಳಿಗೆ ತಲಾ 5 ಸಾವಿರ ರೂ. ಮಾಸಿಕ ಗೌರವಧನ ನೀಡಲಾಗುವುದು ಎಂದು ತಿಳಿಸಿದರು.

ಗ್ರಾಮ ವಿಕಾಸದ ಚಟುವಟಿಕೆಗಳಿಗಾಗಿ ಆಯ್ಕೆಯಾದ ತಂಡಗಳಿಗೆ ತಲಾ 50 ಸಾವಿರ ರೂ.ಗಳ ಮೂಲಧನವನ್ನು ಮೊದಲ ವರ್ಷ ನೀಡಲಾಗುವುದು. ಇದು 3 ವರ್ಷಗಳ ಫೆಲೋಶಿಪ್ ಆಗಿದೆ. ಇಡೀ ರಾಜ್ಯದಿಂದ ಒಟ್ಟು 670 ತಂಡಗಳಿಂದ ಈಗಾಗಲೇ ಅರ್ಜಿ ಸಲ್ಲಿಕೆಯಾಗಿದ್ದು, ಈ ಪೈಕಿ ಮೈಸೂರು ಜಿಲ್ಲೆಯಿಂದ 38 ತಂಡಗಳಿಂದ ಅರ್ಜಿಗಳು ಬಂದಿವೆ. ಡಿ.15 ಅರ್ಜಿ ಸಲ್ಲಿಕೆಗೆ ಕಡೇ ದಿನ. ಹೆಚ್ಚಿನ ಮಾಹಿತಿಗೆ ಮೊ.ಸಂ. 92068 08889 ಅಥವಾ 80505 01377 ಅನ್ನು ಸಂಪರ್ಕಿಸಬಹುದು ಎಂದರು. ಯೂತ್ ಫಾರ್ ಸೇವಾ ಟ್ರಸ್ಟ್‌ನ ಟ್ರಸ್ಟಿ ಹರೀಶ್‌ಶೆಣೈ, ಜಿಲ್ಲಾ ಸಂಚಾಲಕ ಯಶವಂತಗೌಡ ಗೋಷ್ಠಿಯಲ್ಲಿದ್ದರು.

ಒಂದನೇ ಪುಟದಿಂದ

ಆಮ್ ಆದ್ಮಿಯಿಂದ ಕಾಂಗ್ರೆಸ್‌ಗೆ ಹಿನ್ನಡೆ

ಹಿನ್ನಡೆಯಾಗಲು ಕಾರಣ. ಕಾಂಗ್ರೆಸ್‌ಗೆ ಹೆಚ್ಚಿನ ಮತ ಚಲಾವಣೆಯಾಗುವುದನ್ನು ತಡೆಗಟ್ಟಲು ಬಿಜೆಪಿ ಕುತಂತ್ರ ನಡೆಸಿದೆ. ಆಮ್ ಆದ್ಮಿ ಶೇ.10ರಷ್ಟು ಮತ ಪಡೆದರೂ ಕಾಂಗ್ರೆಸ್‌ಗೆ ಹಿನ್ನಡೆಯಾಗುತ್ತದೆ. ರಾಹುಲ್ ಗಾಂಧೀ ಪಾದಯಾತ್ರೆಯಲ್ಲಿರುವುದರಿಂದ ಹೆಚ್ಚು ಪ್ರಚಾರಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಇದರಿಂದಲೂ ಸ್ವಲ್ಪ ಮತ ಗಳಿಕೆಗೆ ತೊಡಕಾಗಿದೆ ಎಂದರು.

ಗುಜರಾತ್ ಫಲಿತಾಂಶ ರಾಜ್ಯದಲ್ಲಿ ನಡೆಯುವ ವಿಧಾನಸಭಾ ಚುನಾವಣೆ ಮೇಲೆ ಪರಿಣಾಮ ಬೀರುವುದಿಲ್ಲ. ಒಂದು ರಾಜ್ಯದ ಫಲಿತಾಂಶ ಇನ್ನೊಂದು ರಾಜ್ಯದ ಮೇಲೆ ಪರಿಣಾಮ ಬೀರಲ್ಲ. ಆಯಾ ರಾಜ್ಯಗಳ ಚುನಾವಣೆ ಸ್ಥಳೀಯ ಸಮಸ್ಯೆ ಮೇಲೆ ನಡೆಯುತ್ತದೆ. ಬಿಜೆಪಿ ನಾಯಕರು ಗುಜರಾತ್ ಫಲಿತಾಂಶ ದಿಕ್ಸೂಚಿ ಎಂದು ಸುಳ್ಳು ಹೇಳುತ್ತಿದ್ದಾರೆ. ಹಾಗಿದ್ದರೆ ದೆಹಲಿಯ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಯಾಕೆ ಗೆಲ್ಲಲಿಲ್ಲ. ಪಶ್ಚಿಮ ಬಂಗಾಳ, ದೆಹಲಿ, ಕೇರಳ, ಮಹಾರಾಷ್ಟ್ರ ಚುನಾವಣೆ ಫಲಿತಾಂಶ ಇನ್ನೊಂದು ರಾಜ್ಯದ ಮೇಲೆ ಯಾಕೆ ಪ್ರಭಾವ ಬೀರಲಿಲ್ಲ ಎಂದು ಪ್ರಶ್ನಿಸಿದರು. ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ಮಿತಿ ಮೀರಿದ ಭ್ರಷ್ಟಾಚಾರ ನಡೆಸುತ್ತಿದೆ. ಕಮಿಷನ್, ವರ್ಗಾವಣೆ ದಂಧೆ ನಡೆಯುತ್ತಿದೆ. ಶೇ.40ರಷ್ಟು ಕಮಿಷನ್ ಸರ್ಕಾರ ಎಂದು ರಾಜ್ಯ ಸರ್ಕಾರಕ್ಕೆ ಕರೆಯಲಾಗಿತ್ತು. ಬಿಜೆಪಿಗರ ಭ್ರಷ್ಟಾಚಾರ ಕಂಡು ರಾಜ್ಯದ ಜನ ಬೇಸತ್ತಿದ್ದಾರೆ.

ಮೋದಿ ಹವಾ ಇದೆ ಎಂದು ಬಿಜೆಪಿಗರು ಬೀಗುತ್ತಿದ್ದಾರೆ. ಆದರೆ ವಾಸ್ತವವಾಗಿ ಎಲ್ಲಿಯೂ ಮೋದಿ ಹವಾ ಇಲ್ಲ. ಒಂದು ವೇಳೆ ಹವಾ ಇದ್ದಿದ್ದರೆ, ದೆಹಲಿ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಬೇಕಾಗಿತ್ತು. ದೆಹಲಿಯಲ್ಲಿಯೇ ಪ್ರಧಾನಿ ಮೋದಿ ಅವರ ನಿವಾಸವಿದೆ. ಅಲ್ಲೇ ವಾಸ ಮಾಡುತ್ತಿದ್ದಾರೆ. ಆದರೆ ಪಾಲಿಕೆ ಚುನಾವಣೆ ಯಾಕೆ ಗೆಲ್ಲಲು ಆಗಲಿಲ್ಲ. ಹಿಮಾಚಲ ಪ್ರದೇಶದಲ್ಲಿ ಅವರದ್ದೇ ಸರ್ಕಾರವಿತ್ತು. ಅಲ್ಲಿ ಕಾಂಗ್ರೆಸ್ ಗೆದ್ದಿದೆ. ಎಲ್ಲಿ ಹೋಯ್ತು ಹವಾ ಎಂದು ಪ್ರಶ್ನಿಸಿದರು. ರಾಜ್ಯದಲ್ಲಿ ಆಮ್ ಆದ್ಮಿ ಪಕ್ಷ ಮತ ಸೆಳೆಯುವಷ್ಟು ಪ್ರಬಲವಾಗಿಲ್ಲ. ಬಿಜೆಪಿ ಗುಜರಾತ್‌ನಲ್ಲಿ ಮತ ವಿಭಜನೆ ಮಾಡಲು ಫಂಡ್ ನೀಡಿದಂತೆ ರಾಜ್ಯದಲ್ಲೂ ಆಪ್ ಪಕ್ಷದೊಂದಿಗೆ ಸಂಚು ನಡೆಸುವುದಿಲ್ಲ. ಅವರ ತಂತ್ರಗಾರಿಕೆ ಏನಿದ್ದರೂ ಜೆಡಿಎಸ್‌ನೊಂದಿಗೆ ಮಾಡಬಹುದು ಎಂದರು.

ನಿಧನ

ಎಸ್.ಮಹೇಶ್



ಮೈಸೂರಿನ ಹೂಟಗಳ್ಳಿಯ ಕೆಹೆಚ್‌ಬಿ ಕಾಲೋನಿ ನಿವಾಸಿ ಹಾಗೂ ಉದ್ಯಮಿ ಎಸ್.ಮಹೇಶ್ ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ತಾಯಿ ಎಂ.ಜಯಮ್ಮ, ಸಹೋದರರಾದ ಎಸ್.ಶಂಕರ್, ವಕೀಲ ಎಸ್.ಅರುಣ್‌ಕುಮಾರ್, ಕುಟುಂಬದ ಇನ್ನಿತರ ಸದಸ್ಯರು ಹಾಗೂ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ.

ಪಾರ್ಥಿವ ಶರೀರವನ್ನು ಹೂಟಗಳ್ಳಿಯ ಅವರ ನಿವಾಸದಲ್ಲಿ ನಾಳೆ (ಡಿ.9) ಬೆಳಗ್ಗೆ 10.30ರಿಂದ 12.30ರವರೆಗೆ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಮಧ್ಯಾಹ್ನ 1 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿ.ಶ್ರೀನಿವಾಸರಾವ್



ಮೈಸೂರು ನಗರದ ಚಾಮುಂಡಿಪುರಂನ ನಿವಾಸಿ, ದಕ್ಷಿಣ ಕನ್ನಡ ಜಿಲ್ಲಾ ಸಂಘದ ಮಾಜಿ ಅಧ್ಯಕ್ಷರು, ಅಡುಗೆ ಕ್ಷೇಮಾಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷರು, ಚಂಡೆಮೇಳ ಸಾಂಸ್ಕೃತಿಕ ಸಂಘದ ಅಧ್ಯಕ್ಷರು, ತುಳು ಶಿವಳ್ಳಿ ಮಾಧವ ಮಹಾಮಂಡಲದ ಅಧ್ಯಕ್ಷರಾಗಿದ್ದ ವಿ.ಶ್ರೀನಿವಾಸರಾವ್ (64) ಗುರುವಾರ ಬೆಳಗ್ಗೆ ಅನಾರೋಗ್ಯ ನಿಮಿತ್ತ ಚಾಮುಂಡಿಪುರಂನ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಮತ್ತು ಅಪಾರ ಬಂಧು ವರ್ಗ ಹಾಗೂ ಅಪಾರ ಸಂಖ್ಯೆಯ ಅಸಂಘಟಿತ ವಲಯವಾದ ಅಡುಗೆ ಕಾರ್ಮಿಕ ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಚಾಮುಂಡಿಬೆಟ್ಟದ ಪಾದದಲ್ಲಿರುವ ಹರಿಶ್ಚಂದ್ರ ಘಾಟ್‌ನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಸಂತಾಪ: ವಿ.ಶ್ರೀನಿವಾಸ್‌ರಾವ್ ಅವರ ನಿಧನ ಮೈಸೂರು ನಗರಕ್ಕೆ ಮಾತ್ರವಲ್ಲ, ಇಡೀ ಅಸಂಘಟಿತ ವಲಯವಾದ ಅಡುಗೆ ಕ್ಷೇಮಾಭಿವೃದ್ಧಿ ಸಂಘಕ್ಕೆ ತುಂಬಲಾರದ ನಷ್ಟ ಎಂದು ಹಾರ್ದಿಕ್ ಕ್ಯಾಂಟೀನ್‌ನ ಮಾಲೀಕ ರವಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕಳೆದ 30 ವರ್ಷಗಳಿಗೂ ಮಿಗಿಲಾಗಿ ಅಡುಗೆ, ಚಂಡೆಮೇಳ, ದಕ್ಷಿಣ ಕನ್ನಡ ಸಂಘ ಹಾಗೂ ನೊಂದ ಮನಸ್ಸುಗಳಿಗೆ ಸಾಂತ್ವನವನ್ನು ಹೇಳುತ್ತಾ, ತನ್ನ ಕೈಲಾದ ಸಹಾಯ, ಸಹಕಾರ ನೀಡುತ್ತಿದ್ದ ವಿ.ಶ್ರೀನಿವಾಸ್‌ರಾವ್ ಅವರ ನಿಧನ ಸಾಂಸ್ಕೃತಿಕ ಲೋಕಕ್ಕೆ ತುಂಬಲಾರದ ನಷ್ಟ, ಇವರ ದುಃಖ ಸಹಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಭಗವಂತ ನೀಡಲೆಂದು ಶ್ರೀ ಕೇಟರರ್ಸ್ ಮಾಲೀಕ ಶ್ರೀಧರಮೂರ್ತಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಕೆ.ವೆಂಕಟೇಶ್



ಮೈಸೂರಿನ ಕುವೆಂಪುನಗರದ ಎನ್–ಬ್ಲಾಕ್ ನಿವಾಸಿ, ನಿವೃತ್ತ ಸಾರ್ವಜನಿಕ ಗ್ರಂಥಾಲಯದ ಉಪನಿರ್ದೇಶಕರಾಗಿದ್ದ ಕೆ.ವೆಂಕಟೇಶ್ (70) ಗುರುವಾರ ಹೃದಯಾಘಾತದಿಂದ ಬೆಂಗಳೂರಲ್ಲಿ ನಿಧನರಾಗಿದ್ದಾರೆ. ಇವರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶುಕ್ರವಾರ)ಬೆಳಗ್ಗೆ 10.30ಕ್ಕೆ ಅವರ ಸ್ವಗ್ರಾಮ ಶ್ರೀರಂಗಪಟ್ಟಣ ತಾಲೂಕಿನ ಮೇಳಾಪುರದಲ್ಲಿ ನಡೆಯಲಿದೆ. ಹೆಚ್ಚಿನ ವಿವರಗಳಿಗೆ ಮೊ. 80950 41292 ಸಂಪರ್ಕಿಸಬಹುದು.

ಶ್ರೀಮತಿ ಮಹಾದೇವಮ್ಮ



ಮೈಸೂರು ನಗರದ ಕುರುಬಾರಹಳ್ಳಿ ನಿವಾಸಿ ಶ್ರೀಮತಿ ಮಹಾದೇವಮ್ಮ (51) ಅವರು ಬುಧವಾರ ನಿಧನರಾದರು.

ಮೃತರು ಪತಿ ಬೀರಪ್ಪ, ಮಕ್ಕಳಾದ ರಾಜೇಶ್, ಭಾಗ್ಯ, ಮೋಹನ ಅವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಇಂದು (ಗುರುವಾರ) ಮಧ್ಯಾಹ್ನ ಜೆ.ಸಿ ಲೇಔಟ್‌ನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ನಿರ್ಮಾಣ ಸಾಮಗ್ರಿಗಳ ಪ್ರದರ್ಶನ ಮೈಬಿಲ್ಡ್ ಆರಂಭ





ಮೈಸೂರು, ಡಿ. 8 (ಆರ್‌ಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಿರ್ಮಾಣ ಸಾಮಗ್ರಿಗಳ ಐದು ದಿನಗಳ ಪ್ರದರ್ಶನ 'ಮೈಬಿಲ್ಡ್–2022' ಇಂದಿನಿಂದ ಆರಂಭವಾಗಿದೆ.

ಮೈಸೂರು–ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ಸಹಯೋಗದೊಂದಿಗೆ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ವತಿಯಿಂದ ಆಯೋಜಿಸಿದ್ದ ವಸ್ತುಪ್ರದರ್ಶನವನ್ನು ಶ್ರೀರಾಮಕೃಷ್ಣ ಆಶ್ರಮದ ಕರೆಸ್ಪಾಂಡೆಂಟ್ ಶ್ರೀ ಸ್ವಾಮಿ ಯುಕ್ತೇಶಾನಂದಜೀ ಟೇಪು ಕತ್ತರಿಸುವ ಮೂಲಕ ಉದ್ಘಾಟಿಸಿದರು.

ಒಂದೇ ಸೂರಿನಡಿ ಕಟ್ಟಡ ನಿರ್ಮಾಣ ಸಾಮಗ್ರಿಗಳು, ಸಲಕರಣೆಗಳು, ಅತ್ಯಾಧುನಿಕ ತಂತ್ರಜ್ಞಾನ ಮತ್ತು ರಿಯಲ್ ಎಸ್ಟೇಟ್ ಉದ್ದಿಮೆಯ ಬೆಳವಣಿಗೆ ಕುರಿತಂತೆ ಮೈಬಿಲ್ಡ್ 2022ರಲ್ಲಿ ಸಮಗ್ರ ಮಾಹಿತಿ ಒದಗಿಸುವ 150ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆದಿದ್ದು, ಅಲ್ಲಿಗೆ ಭೇಟಿ ನೀಡುವವರಿಗೆ ಪೂರಕ ಪ್ರಾತ್ಯಕ್ಷಿಕೆ ನೀಡಲಾಗುತ್ತಿದೆ.

ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಜಲ್ಲಿ, ಸೈಜು ಕಲ್ಲು, ಸಿಮೆಂಟ್, ಇಟ್ಟಿಗೆ, ಗ್ಲಾಸು, ನಿಲಬಾಗಿಲು, ಸ್ಯಾನಿಟರಿ ಐಟಂಗಳು, ಕಿಚನ್ ಸಾಮಗ್ರಿ, ಟೈಲ್ಸ್, ಅಲ್ಮೆರಾ, ವಾಲ್‌ಡ್ರೂಬ್, ಸೌರಶಕ್ತಿ ಯೋಜನೆ, ಛಾವಣಿ ಸಾಮಗ್ರಿ, ಪೇಂಟಿಂಗ್ ಸೇರಿದಂತೆ ಕನಸಿನ ಮನೆಯನ್ನು ಕಡಿಮೆ ಖರ್ಚು ಹಾಗೂ ಸಮಯದಲ್ಲಿ ನಿರ್ಮಿಸಬಹುದಾದ ಪ್ರೀಫಿಕ್ಸೆಡ್ ಸಾಮಗ್ರಿಗಳನ್ನು ಮೈಬಿಲ್ಡ್ ವಸ್ತುಪ್ರದರ್ಶನದಲ್ಲಿ ಪ್ರದರ್ಶಿಸಲಾಗಿದೆ.

ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಸಾಯಿ ಇಂಡಸ್ಟ್ರೀಸ್‌ನವರು ಇದೇ ಪ್ರಥಮ ಬಾರಿ ಮೈಸೂರಿನಲ್ಲಿ ಶೇ. 100ರಷ್ಟು ಅಲ್ಯೂಮಿನಿಯಂನಿಂದ ತಯಾರಿಸಿದ ಆಧುನಿಕ ಮಾದರಿಯ ಕಿಚನ್ ಮೆಟೀರಿಯಲ್‌ಗಳನ್ನು ಇಲ್ಲಿ ಪ್ರದರ್ಶಿಸಿದ್ದಾರೆ.

ಜನರೇಟರ್‌ಗಳು, ಪಾವ್‌ಮೆಂಟ್ಸ್, ಪ್ಲಂಬಿಂಗ್ ಮೆಟೀರಿಯಲ್‌ಗಳು, ಬಾತ್ ರೂಂ ಫಿಟ್ಟಿಂಗ್, ಫ್ಲೋರ್ ಅಂಡ್ ವಾಲ್ ಟೈಲ್ಸ್, ಎಲಿನೇಟರ್‌ಗಳು, ಲೈಟಿಂಗ್ ಪ್ರಾಡಕ್ಟ್ಸ್, ರೇನ್ ವಾಟರ್ ಹಾರ್ವೆಸ್ಟಿಂಗ್ ಪದ್ಧತಿ, ಗೃಹೋಪಯೋಗಿ ಪೀಠೋಪಕರಣಗಳು, ಸರಳ ಹಾಗೂ ಸುಂದರವಾಗಿ ಕಡಿಮೆ ವೆಚ್ಚದಲ್ಲಿ ಮನೆ ನಿರ್ಮಿಸುವ ವಿಧಾನಗಳ ಬಗ್ಗೆಯೂ ಅಲ್ಲಿ ಸಮಗ್ರ ಮಾಹಿತಿ ದೊರೆಯಲಿದೆ.

ಪ್ರತೀದಿನ ಬೆಳಗ್ಗೆ 10ರಿಂದ ರಾತ್ರಿ 9 ಗಂಟೆಯವರೆಗೆ ತೆರೆದಿರುವ ಮೈಬಿಲ್ಡ್ ವಸ್ತು ಪ್ರದರ್ಶನವು ಡಿಸೆಂಬರ್ 12ಕ್ಕೆ ಅಂತ್ಯಗೊಳ್ಳಲಿದೆ. ಮೊದಲ ದಿನವಾದ ಇಂದೇ ವಸ್ತುಪ್ರದರ್ಶನಕ್ಕೆ ಉತ್ತಮ ಪ್ರತಿಕ್ರಿಯೆ ಬಂದಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ತಮ್ಮ ಕನಸಿನ ಮನೆಗೆ ಮೆಟೀರಿಯಲ್ ಆಯ್ಕೆ ಮಾಡಿಕೊಂಡು ಖರೀದಿಸಲು ಮುಗಿಬೀಳುತ್ತಿದ್ದಾರೆ. ಬಿಎಐ ಅಧ್ಯಕ್ಷ ಆರ್. ರಘುನಾಥ್, ಕಾರ್ಯದರ್ಶಿ ವಿ.ಶ್ರೀನಾಥ್, ಮೈಬಿಲ್ಡ್ 22 ಅಧ್ಯಕ್ಷ ಮಹಾಬಲೇಶ್ವರ ಭೈರಿ, ಕಾರ್ಯದರ್ಶಿ ಕೆ.ಟಿ.ಗೋವಿಂದರಾಜು, ಮೈಸೂರು ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್ ಮತ್ತು ಸ್ಫೂರ್ತಿ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಪ್ರತೀ ದಿನ ಸಂಜೆ 6.30ರಿಂದ 9 ಗಂಟೆಯವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಯುವ ಗಾಯಕರಿಗೆ ಪ್ರೋತ್ಸಾಹ ನೀಡಲು 'ವಾಯ್ಸ್ ಆಫ್ ಮೈಬಿಲ್ಡ್–2022' ಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ನಾಳೆಯಿಂದ ಮೈಸೂರಲ್ಲಿ ಎಎಫ್‌ಪಿಐ 3ನೇ ರಾಜ್ಯ ಸಮ್ಮೇಳನ



ಮೈಸೂರು,ಡಿ.8(ಪಿಎಂ)– ಅಕಾಡೆಮಿ ಆಫ್ ಫ್ಯಾಮಿಲಿ ಫಿಸಿಶಿಯನ್ಸ್ ಆಫ್ ಇಂಡಿಯಾದ (ಎಎಫ್‌ಪಿಐ) 3ನೇ ಕರ್ನಾಟಕ ರಾಜ್ಯ ಸಮ್ಮೇಳನ ಡಿ.10 ಮತ್ತು 11ರಂದು ಮೈಸೂರಿನಲ್ಲಿ ನಡೆಯಲಿದೆ ಎಂದು ಸಮ್ಮೇಳನದ ಸಂಘಟನಾ ಸಮಿತಿ ಅಧ್ಯಕ್ಷ ಡಾ.ರವಿಕುಮಾರ್ ಕುಲಕರ್ಣಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಸಮ್ಮೇಳನ ನಡೆಯಲಿದೆ. ಫ್ಯಾಮಿಲಿ ಫಿಸಿಶಿಯನ್ಸ್ (ಕುಟುಂಬ ವೈದ್ಯರು) ಕುಟುಂಬದ ಆರೋಗ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ಅಂತಹ ವೈದ್ಯರ ಸಂಘಟಿತ ವ್ಯವಸ್ಥೆಯೇ ಎಎಫ್‌ಪಿಐ ಆಗಿದೆ ಎಂದರು.

ಈ ಸಮ್ಮೇಳನವು ಫ್ಯಾಮಿಲಿ ಮೆಡಿಸಿನ್ ಕ್ಷೇತ್ರದ ಇತ್ತೀಚಿನ ಬೆಳವಣಿಗೆ ಅರ್ಥ ಮಾಡಿಕೊಳ್ಳಲು ಫ್ಯಾಮಿಲಿ ಫಿಸಿಶಿಯನ್ಸ್‌ಗೆ ಸಹಕಾರಿಯಾಗಲಿದೆ. ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಅರೆ ವೈದ್ಯಕೀಯ ಸಿಬ್ಬಂದಿಯೂ ನಿಗದಿತ ನೋಂದಣಿ ಶುಲ್ಕ ಪಾವತಿಸಿ ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಮೊ.ಸಂ. 93534 25411 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ಡಿ.10ರಂದು ಮಧ್ಯಾಹ್ನ 12ಕ್ಕೆ ಬೆಂಗಳೂರು ವೈದ್ಯಕೀಯ ಕಾಲೇಜಿನ ನಿರ್ದೇಶಕ ಮತ್ತು ಡೀನ್ ಡಾ.ಕೆ.ರವಿ ಯುವ ವೈದ್ಯರ ಸಮಾವೇಶ ಉದ್ಘಾಟಿಸಲಿದ್ದಾರೆ. ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ, ಮೈಸೂರು ವೈದ್ಯಕೀಯ ಕಾಲೇಜಿನ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ, ಎಎಫ್‌ಪಿಐ ರಾಷ್ಟ್ರೀಯ ಅಧ್ಯಕ್ಷ ಡಾ.ರಾಮನ್‌ಕುಮಾರ್, ಚುನಾಯಿತ ರಾಷ್ಟ್ರೀಯ ಅಧ್ಯಕ್ಷ ಕರ್ನಲ್ ಡಾ.ಮೋಹನ್ ಕುಬೇಂದ್ರ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಡಿ.11ರಂದು ಮಧ್ಯಾಹ್ನ 12ಕ್ಕೆ ಫ್ಯಾಮಿಲಿ ಮೆಡಿಸಿನ್ ಅಪ್‌ಡೇಟ್ ವಿಚಾರ ಗೋಷ್ಠಿ ನಡೆಯಲಿದೆ. ಮುಖ್ಯ ಅತಿಥಿಯಾಗಿ ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ. ಮಧು ಭಾಗವಹಿಸಲಿದ್ದಾರೆ ಎಂದರು.

ಸಿಹೆಚ್‌ಸಿಗಳಿಗೆ ಫ್ಯಾಮಿಲಿ ಫಿಸಿಶಿಯನ್ಸ್: ಫ್ಯಾಮಿಲಿ ಫಿಸಿಶಿಯನ್ಸ್ ಎಲ್ಲಾ ರೀತಿಯ ಅನಾರೋಗ್ಯ ಸಮಸ್ಯೆಗಳಿಗೆ ಪ್ರಾಥಮಿಕ ಹಂತದ ಚಿಕಿತ್ಸೆ ನೀಡಬಹುದು. ಹಾಗಾಗಿ ರಾಜ್ಯದ ಎಲ್ಲಾ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ (ಸಿಹೆಚ್‌ಸಿ) ಒಬ್ಬರು ಫ್ಯಾಮಿಲಿ ಫಿಸಿಶಿಯನ್ ನಿಯೋಜಿಸಬೇಕೆಂಬ ವಿಚಾರ ಸರ್ಕಾರದಲ್ಲಿ ಪ್ರಸ್ತಾವನೆ ಹಂತದಲ್ಲಿದೆ ಎಂದರು. ಫ್ಯಾಮಿಲಿ ಫಿಸಿಶಿಯನ್‌ಗಳಾದ ಡಾ.ವೀಣಾ, ಡಾ.ಜಿ.ಎನ್.ಇಂಪನಾ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಉಪನ್ಯಾಸಕರ ಮಧ್ಯಂತರ ವರ್ಗಾವಣೆ ಸ್ಥಗಿತಗೊಳಿಸಲು ಮರಿತಿಬ್ಬೇಗೌಡ ಆಗ್ರಹ



ಮೈಸೂರು,ಡಿ.8(ಆರ್‌ಕೆಬಿ)–ಪ್ರಸಕ್ತ ಸಾಲಿನಲ್ಲಿ ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಕಾಲೇಜು ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಸಹಾಯಕ ಪ್ರಾಧ್ಯಾಪಕರ ವರ್ಗಾವಣೆಯನ್ನು ಮಧ್ಯಂತರ ಅವಧಿಯ ಡಿಸೆಂಬರ್ ತಿಂಗಳಲ್ಲಿ ನಡೆಸಲು ನೀಡಿರುವ ಪ್ರಕಟಣೆಯನ್ನು ಕೂಡಲೇ ಹಿಂಪಡೆದು ನ್ಯಾಯಾಲಯದ ತೀರ್ಪಿನಂತೆ, ನಿಯಮ ರೂಪಿಸಿ, ಲೋಪದೋಷಗಳನ್ನು ಸರಿಪಡಿಸಿ, ಶೈಕ್ಷಣಿಕ ಚಟುವಟಿಕೆಗೆ ತೊಂದರೆಯಾಗದಂತೆ ನಿಗದಿತ ಅವಧಿಯಲ್ಲಿ ವರ್ಗಾವಣೆಗೆ ಆದೇಶಿಸುವಂತೆ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಒತ್ತಾಯಿಸಿದ್ದಾರೆ.

ವರ್ಗಾವಣೆ ಕಾಯ್ದೆಯನ್ನು ರದ್ದುಪಡಿಸಿ, ವರ್ಗಾವಣೆ ಮಾಡಲು 2021ನೇ ಸಾಲಿನಲ್ಲಿ ರೂಪಿಸಲಾಗಿರುವ ಹೊಸ ನಿಯಮದಲ್ಲಿರುವ ಲೋಪದೋಷಗಳನ್ನು ಪ್ರಶ್ನಿಸಿ, ತಾಂತ್ರಿಕ ಇಲಾಖೆಯಲ್ಲಿನ ಕೆಲವು ಸಹಾಯಕ ಪ್ರಾಧ್ಯಾಪಕರು ಕೆಎಟಿಯಲ್ಲಿ ತಕರಾರು ಅರ್ಜಿ ಸಲ್ಲಿಸಿದರು. ಕೆಎಟಿ ಆದೇಶವನ್ನು ಪ್ರಶ್ನಿಸಿ, ಸರ್ಕಾರ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಬಂಧ ಮಧ್ಯಂತರ ತಡೆಯಾಜ್ಞೆ ನೀಡಿದೆ. ನಿಯಮಗಳಲ್ಲಿನ ಲೋಪದೋಷಗಳ ಬಗ್ಗೆ ಈ ಹಿಂದೆ ತಾವು ಎರಡು ಪತ್ರ ಬರೆದಿದ್ದಾಗಿ ಎಂಎಲ್‌ಸಿ ತಿಳಿಸಿದ್ದಾರೆ.

ಹೆಚ್.ಎ.ಸುಮಿತಗೆ ಕನ್ನಡ ವಿಕಾಸ ರತ್ನ ಪ್ರಶಸ್ತಿ



ಮೈಸೂರು,ಡಿ.8–ಮೈಸೂರಿನ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯಿಂದ ನೀಡುತ್ತಿರುವ ಕನ್ನಡ ವಿಕಾಸ ರತ್ನ ಪ್ರಶಸ್ತಿಗೆ ಈ ಬಾರಿ ಮೈಸೂರು ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷೆ ಹೆಚ್.ಎ.ಸುಮಿತ ಅವರು ಭಾಜನರಾಗಿದ್ದಾರೆ. ಮೈಸೂರಿನಲ್ಲಿ ಡಿ.10ರಂದು ನಡೆಯುವ ಕನ್ನಡ ಹಬ್ಬ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.


ಪದವಿ ಫಲಿತಾಂಶ, ವಿದ್ಯಾರ್ಥಿವೇತನ, ಅಧಿಕ ಹಾಸ್ಟೆಲ್ ಸೌಲಭ್ಯಕ್ಕೆ ಆಗ್ರಹಿಸಿ ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು,ಡಿ.8(ಆರ್‌ಕೆಬಿ)–ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯ ಮುಂಭಾಗ ನೂರಾರು ವಿದ್ಯಾರ್ಥಿಗಳು ಜಮಾಯಿಸಿ ಎನ್‌ಇಪಿ–2020ರ ಬ್ಯಾಚ್‌ನ ಪದವಿ ವಿದ್ಯಾರ್ಥಿಗಳ ಫಲಿತಾಂಶ ಕೂಡಲೇ ಪ್ರಕಟಿಸಬೇಕು. ತಕ್ಷಣ ವಿದ್ಯಾರ್ಥಿ ವೇತನ ಪಾವತಿಸಬೇಕು. ಬೇಡಿಕೆ ಇರುವಷ್ಟು ಹಾಸ್ಟೆಲ್ ಸಂಖ್ಯೆ ಹಾಗೂ ದಾಖಲಾತಿ ಹೆಚ್ಚಿಸಬೇಕು ಎಂದು ಆಗ್ರಹಿಸಿ, ಎಐಡಿಎಸ್‌ಓ ಆಶ್ರಯದಲ್ಲಿ ವಿದ್ಯಾರ್ಥಿಗಳು ಗುರುವಾರ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ವಿವಿಧ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದ ಪ್ರತಿಭಟನೆಯಲ್ಲಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಘೋಷಣೆ ಕೂಗಿದರು. ಬೇಡಿಕೆಗೆ ಸ್ಪಂದಿಸದಿದ್ದರೆ ಪ್ರತಿಭಟನೆ ತೀವ್ರಗೊಳಿಸುವ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಸುಭಾಷ್, ಈಗಾಗಲೇ ರಾಜ್ಯದಲ್ಲಿ ಎನ್‌ಇಪಿ ಮೊದಲ ಬ್ಯಾಚ್‌ನ ವಿದ್ಯಾರ್ಥಿಗಳು ಮುಂದಿನ ಹಂತಕ್ಕೆ ತಲುಪಿದ್ದಾರೆ. ಆದರೂ ಅವರ ಮೊದಲ ವರ್ಷದ ಫಲಿತಾಂಶ ಪ್ರಕಟಿಸಿಲ್ಲ. ಕೂಡಲೇ ಆ ಫಲಿತಾಂಶ ಬಿಡುಗಡೆ ಮಾಡಬೇಕು. ಅಲ್ಲದೆ ಇನ್ನೂ ವಿದ್ಯಾರ್ಥಿವೇತನ ವಿತರಣೆಯಾಗದೆ ವಿದ್ಯಾರ್ಥಿಗಳಲ್ಲಿ ಆತಂಕ ಉಂಟು ಮಾಡಿದೆ. ನೂರಾರು ಬಡ ಕುಟುಂಬದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪೂರೈಸಲು ವಿದ್ಯಾರ್ಥಿ ವೇತನವನ್ನೇ ಅವಲಂಬಿಸಿದ್ದು, ಇದರಿಂದ ಸಾಕಷ್ಟು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅಡ್ಡಿಯಾಗಿದೆ. ಕೂಡಲೇ ವಿದ್ಯಾರ್ಥಿವೇತನ ವಿತರಿಸಬೇಕು ಎಂದು ಆಗ್ರಹಿಸಿದರು. ಸ್ವಾತಿ ಮಾತನಾಡಿ, ವಿದ್ಯಾರ್ಥಿಗಳ ಮೂಲಭೂತ ಅವಶ್ಯಕತೆಯಾದ ಹಾಸ್ಟೆಲ್ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇಲ್ಲ. ಹಾಗಾಗಿ ಹಾಸ್ಟೆಲ್ ಮತ್ತು ದಾಖಲಾತಿ ಸಂಖ್ಯೆ ಹೆಚ್ಚಬೇಕು ಎಂದು ಒತ್ತಾಯಿಸಿದರು. ಎಐಡಿಎಸ್‌ಓ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯ ನಿತಿನ್, ಜಿಲ್ಲಾ ಕಾರ್ಯದರ್ಶಿ ಚಂದ್ರಕಲಾ, ಸದಸ್ಯರಾದ ಚಂದ್ರಿಕಾ, ಬಿ.ಆರ್.ಚಂದನಾ, ಹೇಮಲತಾ, ಜೀವನ್, ಪ್ರಜ್ವಲ್, ತೇಜು, ಮೇಘನಾ, ಶಿವು, ಪ್ರಶಾಂತಿ, ಕೋಮಲ, ಶ್ರೇಯಸ್ ಸೇರಿದಂತೆ ಇನ್ನಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.12.2022 ಶುಕ್ರವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022 ರಿಂದ 15.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಕೃಷ್ಣ ಪಕ್ಷ, ತಿಥಿ: ಪ್ರತಿಪತ್, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ




■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ:** 22ನೇ ವರ್ಷದ ಹನುಮ ಜಯಂತಿ ಮಹೋತ್ಸವ, ನಿತ್ಯಾರಾಧನೆ, ಬೆಳಗ್ಗೆ 9ಕ್ಕೆ ಶ್ರೀ ದುರ್ಗಾಹೋಮ, ಶ್ರೀ ಸೂಕ್ತ ಮಂತ್ರ ಹೋಮ, ಕದಳಿಫಲ ಅಲಂಕಾರ, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಇರ್ವಿನ್ ರಸ್ತೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗ್ಯಾಸ್ಟ್ರಿಕ್ ತೊಂದರೆ ಹಾಗೂ ಮಹಿಳೆಯರಲ್ಲಿ ಅತಿ ಋತುಸ್ರಾವದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಗೆ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು, ಸಾಂಸ್ಕೃತಿಕ ವೇದಿಕೆ:** ಪ್ರತಿಭಾನ್ವೇಷಣೆ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಸಿಂಡಿಕೇಟ್ ಸದಸ್ಯ ಡಾ.ನಿಂಗರಾಜಗೌಡ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಶ್ರೀನಿವಾಸ, ಉಪಸ್ಥಿತರು: ಡಾ.ಜಯರಾಜು, ಡಾ. ಸವಿತಾ, ಸ್ಥಳ: ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ, ಬೆಳಗ್ಗೆ 10ಕ್ಕೆ.

■ **ರೋಟರಿ ಮೈಸೂರು ಉತ್ತರ, ರೋಟರಿ ಇನ್ನರ್‌ವ್ಹೀಲ್, ಮೈಸೂರು ಉತ್ತರ:** ಮಹಿಳೆಯರ ಸುಸ್ಥಿರ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ವಾಸವಿ ವೃಂದ ಮೈಸೂರು ಪಶ್ಚಿಮ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ.



■ **ಮೈಸೂರು ವಿಶ್ವವಿದ್ಯಾನಿಲಯ:** ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸ್ಪರ್ಧೆ, ಸ್ಥಳ: ಮಾನಸಗಂಗೋತ್ರಿಯ ಮಾನವಿಕ ಸಭಾಂಗಣ, ಬೆಳಗ್ಗೆ 10.30ಕ್ಕೆ

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಕೇಂದ್ರ :** ಮೈಬಿಲ್ಡ್ ವಸ್ತುಪ್ರದರ್ಶನ, ಉದ್ಘಾಟನೆ: ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಶ್ರೀ ಸ್ವಾಮಿ ಯುಕ್ತೇಶಾನಂದ ಸ್ವಾಮೀಜಿ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿ, ಮೈಸೂರು ಸ್ತ್ರೀ ಶಕ್ತಿ ಮಹಿಳಾ ವೇದಿಕೆ :** ವಿಶ್ವ ವಿಶೇಷಚೇತನರ ದಿನಾಚರಣೆ ಅಂಗವಾಗಿ ಉಚಿತ ಕೃತಕ ಕಾಲು ಜೋಡಣಾ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಉಪಸ್ಥಿತರು: ಮೇಯರ್ ಶಿವಕುಮಾರ್, ಶಾಸಕ ಎಲ್. ನಾಗೇಂದ್ರ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಡಾ.ನಾಗರಾಜ್ ವಿ.ಬೈರಿ, ಮಹಾವೀರ ಚಂದ್ ಬನ್ಸಾಲಿ, ಟಿ. ಸುರೇಶ್, ಶ್ರೀಮತಿ ಶೋಭಾ ಬಾಲು, ಲಯನ್ ವೆಂಕಟೇಶ್, ಡಾ. ಶ್ರೀವಿದ್ಯಾ, ಲಯನ್ ಜಯಪ್ರಕಾಶ್, ಲಯನ್ ಸಿರಿ ಬಾಲು, ಸ್ಥಳ: ನಟರಾಜ ಕಲ್ಯಾಣ ಮಂಟಪ, ಹೊಸಮಠ ಬೀದಿ, ಬೆಳಗ್ಗೆ 11ಕ್ಕೆ.

■ **ಶ್ರೀ ನಾಗಾನಂದ ದತ್ತಾತ್ರೇಯ ಮಠ:** ಭಗವಾನ್ ಶ್ರೀ ದತ್ತಾತ್ರೇಯ ಸ್ವಾಮಿಯವರ 47ನೇ ವರ್ಷದ ಸಪ್ತಾಹ, ಕಳಸ ಸ್ಥಾಪನೆ, ಗಣಪತಿ ಪೂಜೆ, ವರುಣ ಪೂಜೆ, ಕಂಕಣ ಬಂಧನ, ಅಭಿಷೇಕ, ವಿಷ್ಣು ಸಹಸ್ರನಾಮ, ದತ್ತ ಸಹಸ್ರನಾಮ, ಶ್ರೀ ಗುರುಚರಿತ್ರೆ ಪಾರಾಯಣ, ಬೆಳಗ್ಗೆ 11ರಿಂದ ಭಜನೆ, ಶ್ರೀ ದತ್ತಾತ್ರೇಯ ಉತ್ಸವ, ಔದುಂಬರ ಪೂಜೆ, ಮ. 1.30ಕ್ಕೆ ಮಹಾಮಂಗಳಾರತಿ, ಶ್ರೀಯವರಿಂದ ಪ್ರವಚನ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಭಜನೆ, ರಾತ್ರಿ 8ಕ್ಕೆ ಪ್ರಸಾದ ವಿನಿಯೋಗ, ಸ್ಥಳ: ಮಠದ ಆವರಣ, ಬೆಲವತ್ತ ಗ್ರಾಮ.

■ **ದಸರಾ ವಸ್ತುಪ್ರದರ್ಶನ :** ಸಂಜೆ 6.30 ರಿಂದ ಬನ್ನೂರು ಮಾರಗೌಡನಹಳ್ಳಿಯ ಪಾರ್ವತಮ್ಮ ಮತ್ತು ನಿಂಗಮ್ಮ ಅವರಿಂದ ಸೋಬಾನೆ ಪದ, 7 ರಿಂದ ಕನಕಪುರ ತಾಲೂಕಿನ ಹಾರೋಹಳ್ಳಿ ಗಾಯನ ಕಲಾನಿಕೇತನದ ಹೇಮ ಮಂಜುನಾಥ್ ಅವರಿಂದ ಸುಗಮ ಸಂಗೀತ, ರಾತ್ರಿ 8 ರಿಂದ ಮೈಸೂರಿನ ಸುನಿತಾ ಅವರಿಂದ ನೃತ್ಯ, ಸ್ಥಳ: ಪಿ. ಕಾಳಿಂಗರಾವ್ ಕಲಾ ಮಂಟಪ.

■ **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್ :** 88ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30ಕ್ಕೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಶ್ರೀ ವಿದ್ಯಾ ವಿಷ್ಣುಸಭಾ ಟ್ರಸ್ಟ್ ಅವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30 ರಿಂದ ಡಾ. ಬೆ.ನಾ. ವಿಜಯೇಂದ್ರಾಚಾರ್ಯ ಅವರಿಂದ ಶ್ರೀಮತ್ ಭಾಗವತ ಸಪ್ತಾಹ ಪ್ರವಚನ, ಸ್ಥಳ: ಟ್ರಸ್ಟ್ ಆವರಣ, ಶ್ರೀ ಗೀತಾ ಮಂದಿರ ರಸ್ತೆ, ಅಶೋಕ ರಸ್ತೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ, ರಾಘವೇಂದ್ರ ಚಿತ್ರ ತಂಡ :** ಡಾ. ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಸಂಗೀತ ಸಂಜೆ, ಉದ್ಘಾಟನೆ : ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ : ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ, ಸಂಜೆ 4ಕ್ಕೆ.

■ **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಡಾ. ಎಸ್. ರಮೇಶ್‌ಬಾಬು, ಅಧ್ಯಕ್ಷತೆ : ಎನ್‌ಐಇ ಕಾರ್ಯದರ್ಶಿ ಎಸ್.ಬಿ. ಉದಯ್ ಶಂಕರ್, ಸ್ಥಳ: ಎನ್‌ಐಇ ಡೈಮಂಡ್ ಜ್ಯೂಬಿಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಮಾನಂದವಾಡಿ ರಸ್ತೆ, ಸಂಜೆ 4ಕ್ಕೆ.

■ **ದಕ್ಷಿಣ ಭಾರತದ ಅತೀ ದೊಡ್ಡ ಫ್ಯಾಷನ್ ವೀಕ್ :** ಮೈಸೂರು ಫ್ಯಾಷನ್ ವೀಕ್ ಸೀಸನ್–6, ಸ್ಥಳ: ಮೈಸೂರು ಯೂನಿಯನ್, ಸಂಜೆ 4ರಿಂದ.

■ **ಗಾನಭಾರತೀ :** ವಿದುಷಿ ಚೊಕ್ಕಮ್ಮ ಸಂಸ್ಮರಣ ದಿನದ ಅಂಗವಾಗಿ ವಿದ್ವಾನ್ ಪ್ರಜ್ವಲ್ ರಂಗರಾಜು ಅವರಿಂದ ವೀಣಾವಾದನ, ವಿದ್ವಾನ್ ವಿಕ್ರಂ ಭಾರದ್ವಾಜ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ರಿಂದ.

■ **ನೃತ್ಯ ವಿದ್ಯಾಪೀಠ :** ಅಜಯ್ ಅವರಿಂದ ವಿಶೇಷ ಭರತನಾಟ್ಯ ಕಾರ್ಯಕ್ರಮ, ಅಧ್ಯಕ್ಷತೆ : ಕ್ಲೀಯರ್ ಮೆಡಿ ರೇಡಿಯೆಂಟ್ ಆಸ್ಪತ್ರೆ ವೈದ್ಯ ಡಾ.ಎ.ಜಿ.ರಾಜೀವ್, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಸಿ. ಸುದರ್ಶನ್, ಶೋಭಾ ಬಾಲಕೃಷ್ಣ, ಜಿ.ಕೆ. ಕಮಲ, ಎನ್.ಮೀರಾ, ಸ್ಥಳ: ರಮಾಗೋವಿಂದ ಸಭಾಂಗಣ, ರಾಮಕೃಷ್ಣನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ– ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.30 ಗಾಂಧೀ ಸ್ಮೃತಿ, 10.00 ಆರ್.ಕೆ.ಪದ್ಮನಾಭ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ: ಉಮೇಶ್, 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಗಾನ ರಸೋತ್ತುಂಗ ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ ಸಾಹಿತ್ಯ ಮತ್ತು ನಿರೂಪಣೆ–ಪ್ರೊ.ವಿಶ್ವೇಶ್ವರನ್, ನಿರ್ಮಾಣ–ಗೀತಾ ರಮಾನಂದ್, 4.00 ಮಹಿಳಾರಂಗ–ಸಖೀಪದ, 4.30 ವೃತ್ತಿ ಮಾರ್ಗದರ್ಶನ–ಭೌತಚಿಕಿತ್ಸೆ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ತೇಜಸ್ವಿನಿ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ–ಮಿಶ್ರ ಕೃಷಿಯಲ್ಲಿನ ಅನುಭವ ಕುರಿತು ಟಿ.ಮರೀಗೌಡ ಅವರೊಂದಿಗೆ ಸಂದರ್ಶನ, 8.00 ಕನ್ನಡ ಭಾರತಿ, ಕಥಾ ವಿಹಾರ–ಅದೀಬ್ ಅಖ್ತರ್ ಅವರಿಂದ ಸಣ್ಣಕಥೆ, ಕಾವ್ಯಧಾರೆ–ಅನಿಲ್‌ಕುಮಾರ್ ಅವರಿಂದ ಸ್ವರಚಿತ ಕವನಗಳ ವಾಚನ, 10.00 ವಾದ್ಯವೃಂದ–ನಾದಲಹರಿ, ನಿರ್ದೇಶನ ತುಮಕೂರು ರವಿಶಂಕರ್, 10.30 ಸವಿನೆನಪು



'ಚಾಮುಂಡೇಶ್ವರಿ' ಒಲಿಸಿಕೊಳ್ಳಲು ಮೂರೂ ಪಕ್ಷಗಳ ಪೈಪೋಟಿ





■ ಎಸ್.ಬಿ.ದೇವರಾಜ

ಮೈಸೂರು, ಡಿ.8– ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ಮುಂದಿನ ಚುನಾವಣೆಯಲ್ಲೂ ರಾಜ್ಯದ ಗಮನ ಸೆಳೆಯುವುದು ಸ್ಪಷ್ಟವಾಗಿದೆ.

ಕಳೆದ 2018ರ ಸಾರ್ವತ್ರಿಕ ಚುನಾವಣೆಯಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿ.ಟಿ.ದೇವೇಗೌಡರ ನೇರ ಹಣಾಹಣಿ ಕುತೂಹಲ ಸೃಷ್ಟಿಸಿತ್ತು. ಕಾಂಗ್ರೆಸ್ ಹಾಗೂ ಜೆಡಿಎಸ್ ಜಿದ್ದಾಜಿದ್ದಿಯಲ್ಲಿ ಗೆದ್ದು ಬೀಗುವ ಪಕ್ಷ ಯಾವುದೆಂಬ ಚರ್ಚೆ ವ್ಯಾಪಕವಾಗಿತ್ತು. ಅತ್ತ ಸಿದ್ದರಾಮಯ್ಯನವರು ಬಾದಾಮಿ ಕ್ಷೇತ್ರದಲ್ಲೂ ಸ್ಪರ್ಧಿಸಿದ್ದರಿಂದ ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆ ಮತ್ತಷ್ಟು ರೋಚಕವಾಗಲು ಕಾರಣವಾಯಿತು. ಅಂತಿಮವಾಗಿ ಜಿ.ಟಿ.ದೇವೇಗೌಡರು 36 ಸಾವಿರ ಮತಗಳ ಅಂತರದಲ್ಲಿ ಸಿದ್ದರಾಮಯ್ಯನವರನ್ನು ಮಣಿಸಿದರು. ಅತ್ತ ಬಾದಾಮಿಯಲ್ಲಿ ಗೆಲ್ಲುವ ಮೂಲಕ ಸಿದ್ದರಾಮಯ್ಯನವರು ರಾಜಕೀಯ ಹಿನ್ನಡೆಯಿಂದ ಪಾರಾದರು.

ಮುಂದಿನ 2023ರ ವಿಧಾನಸಭಾ ಚುನಾವಣೆಯಲ್ಲೂ ಚಾಮುಂಡೇಶ್ವರಿ ಕ್ಷೇತ್ರ ರಣಕಣವಾಗುವ ಸಾಧ್ಯತೆ ದಟ್ಟವಾಗಿದೆ. 2013 ಹಾಗೂ 2018ರಲ್ಲಿ ಶಾಸಕರಾಗಿ ಆಯ್ಕೆಯಾಗಿರುವ ಜಿ.ಟಿ.ದೇವೇಗೌಡರಿಗೆ 2023ರ ಚುನಾವಣೆ ಮಹತ್ವದ್ದಾಗಿದೆ. ಪಕ್ಷದ ನಾಯಕರೊಂದಿಗಿನ ಭಿನ್ನಾಭಿಪ್ರಾಯ ಶಮನವಾಗಿ ಜೆಡಿಎಸ್‌ನಲ್ಲೇ ಮುಂದುವರೆಯಲು ಜಿಟಿಡಿ ನಿರ್ಧರಿಸಿದ ಪರಿಣಾಮ ಚಾಮುಂಡೇಶ್ವರಿ ಕ್ಷೇತ್ರದ ರಾಜಕೀಯ ಚಟುವಟಿಕೆ ಇನ್ನೂ ಚುರುಕುಗೊಂಡಿದೆ. ಪಕ್ಷದ ನಾಯಕರ ಅನುಮತಿಯೊಂದಿಗೆ ಮುಂದಿನ ಚುನಾವಣೆಯಲ್ಲೂ ಸ್ಪರ್ಧೆಗಿಳಿಯಲಿರುವ ಜಿಟಿಡಿ, ಹ್ಯಾಟ್ರಿಕ್ ಗೆಲುವಿನ ವಿಶ್ವಾಸ ಹೊಂದಿದ್ದಾರೆ. ಆದರೆ ಹಿಂದಿನ ಚುನಾವಣೆಗಳಲ್ಲಿ ಜೊತೆಯಲ್ಲಿದ್ದ ಹಲವು ಮುಖಂಡರು ಜಿಟಿಡಿ ಸ್ಪರ್ಧೆಗೆ ಆಕ್ಷೇಪ ವ್ಯಕ್ತಪಡಿಸಿ, ಅವರಲ್ಲಿ ನಾಲ್ವರು ಪಕ್ಷ ತೊರೆದಿದ್ದಾರೆ. ಅವರೊಂದಿಗೆ ಗುರುತಿಸಿಕೊಂಡಿದ್ದ ಬೆಳವಾಡಿ ಶಿವಮೂರ್ತಿ ಮತ್ತೆ ಜಿಟಿಡಿ ಬೆಂಬಲಕ್ಕೆ ನಿಂತಿದ್ದಾರೆ. ಜಿಟಿಡಿ ತಟಸ್ಥರಾಗಿದ್ದ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಪಕ್ಷ ಸಂಘಟನೆಗೆ ಸೂಚಿಸಿದ್ದು ನಿಜ. ಆದರೆ ಸದ್ಯ ಎಲ್ಲವೂ ತಿಳಿಯಾಗಿದ್ದು, ಜಿ.ಟಿ.ದೇವೇಗೌಡರ ಸ್ಪರ್ಧೆ ಖಚಿತವಾಗಿದೆ. ಇವರ ಹ್ಯಾಟ್ರಿಕ್ ಗೆಲುವಿಗೆ ಎಲ್ಲರೂ ಶ್ರಮಿಸಬೇಕೆಂದು ಹೇಳುವ ಮೂಲಕ ಬಂಡಾಯ ಮುಖಂಡರ ಸಹಕಾರವನ್ನೂ ಕೋರಿದ್ದಾರೆ.



'ಕೈ' ಬಲ ಪ್ರದರ್ಶನ: ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜಿ.ಟಿ.ದೇವೇಗೌಡರೇ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದು ಖಚಿತವೆನಿಸಿದ ಬಳಿಕ ಕಾಂಗ್ರೆಸ್ ಬಲ ಪ್ರದರ್ಶನಕ್ಕೆ ಸಜ್ಜಾಗುತ್ತಿದೆ. ಆದರೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿರುವುದರಿಂದ ಕಾಂಗ್ರೆಸ್ ಪಾಳಯದ ಸಾಕಷ್ಟು ಆಕಾಂಕ್ಷಿಗಳು ಮುಂದೆ ಬಂದಿದ್ದಾರೆ. ಸಿದ್ದರಾಮಯ್ಯರ ಆಪ್ತರೂ ಆಗಿರುವ ಜಿಪಂ ಮಾಜಿ ಅಧ್ಯಕ್ಷರಾದ ಕೆ.ಮರೀಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವ್, ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಮಾಜಿ ಶಾಸಕ ದಿ.ಸತ್ಯನಾರಾಯಣ್ ಪುತ್ರ ಅರುಣ್‌ಕುಮಾರ್, ಕೃಷ್ಣಕುಮಾರ್ ಸಾಗರ್, ಬೆಳ್ಳೂಳ್ಳಿ ಬಸವರಾಜ್, ಲೇಖಾ ವೆಂಕಟೇಶ್, ಮೆಲ್ಲಹಳ್ಳಿ ಮಹದೇವಸ್ವಾಮಿ ಟಿಕೆಟ್ ಬಯಸಿ ಕೆಪಿಸಿಸಿ ಕಚೇರಿಗೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಸಲ್ಲಿಸದ ಅನೇಕ ಮುಖಂಡರು ಅವಕಾಶ ಬಯಸಿದ್ದಾರೆ. ಕಳೆದ ಚುನಾವಣೆಯಲ್ಲಿ ಸಿದ್ದರಾಮಯ್ಯನವರನ್ನು ಮಣಿಸಿದ ಜಿ.ಟಿ.ದೇವೇಗೌಡರ ವಿರುದ್ಧ ಇವರಲ್ಲಿ ಯಾರನ್ನು ಕಣಕ್ಕಿಳಿಸಬೇಕೆಂಬ ಲೆಕ್ಕಾಚಾರ ಶುರುವಾಗಿದೆ. ಜಿಟಿಡಿ ಅವರ ವಿರುದ್ಧ ಅರ್ಜಿ ಹಾಕದ ಪ್ರಬಲ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಚಿಂತನೆಯೂ ಕಾಂಗ್ರೆಸ್‌ನಲ್ಲಿದೆ ಎನ್ನಲಾಗುತ್ತಿದೆ.


ಸಿದ್ದು ಪುತ್ರನ ಪರೀಕ್ಷೆ?: ಸಿದ್ದರಾಮಯ್ಯನವರು ಚಾಮುಂಡೇಶ್ವರಿಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದು, ಮತ್ಯಾವ ಕ್ಷೇತ್ರ ಆಯ್ಕೆ ಮಾಡಿಕೊಳ್ಳುತ್ತಾರೆ ಎನ್ನುವುದು ನಿಗೂಢವಾಗಿದೆ. ಈ ನಡುವೆ ತಂದೆಗಾಗಿ ಕ್ಷೇತ್ರ ಬಿಟ್ಟುಕೊಡಲು ಸಿದ್ಧ ಎಂದು ಸಿದ್ದರಾಮಯ್ಯ ಪುತ್ರ, ವರುಣಾ ಹಾಲಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಹಲವು ಬಾರಿ ಹೇಳಿದ್ದಾರೆ. ಕಡೇ ಕ್ಷಣದಲ್ಲಿ ಸಿದ್ದರಾಮಯ್ಯನವರು ವರುಣಾ ಕ್ಷೇತ್ರದಲ್ಲೇ ಸ್ಪರ್ಧಿಸಿದರೆ ಪುತ್ರ ಡಾ.ಯತೀಂದ್ರ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಣಕ್ಕಿಳಿಸಬಹುದೇ? ಎಂಬ ಮಾತುಗಳು ಕೇಳಿಬರುತ್ತಿವೆ. ಆದರೆ ಪಕ್ಷದ ಆಯಾಯ ಲೆಕ್ಕಾಚಾರದ ಮೇಲೆ ನಿರ್ಧಾರವಾಗಲಿದೆ

ಲಾಭದ ತವಕದಲ್ಲಿ ಬಿಜೆಪಿ: ಕಾಂಗ್ರೆಸ್ ತಂತ್ರಗಾರಿಕೆ ನಡುವೆ ಬಿಜೆಪಿ ಲಾಭ ಪಡೆಯಲು ಹವಣಿಸುತ್ತಿದೆ. ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ ಹೇಗೆ ಎಂಬ ಲೆಕ್ಕಾಚಾರದಲ್ಲಿ ತೊಡಗಿದೆ. 2018ರ ಚುನಾವಣೆಯಲ್ಲಿ ಪರಾಜಿತರಾದ ಎಸ್.ಆರ್. ಗೋಪಾಲರಾವ್, 2013ರ ಚುನಾವಣೆಯಲ್ಲಿ ಸೋತಿದ್ದ ಹೇಮಂತ್ ಕುಮಾರ್ ಗೌಡ, ಪಕ್ಷದ ವಿವಿಧ ಜವಾಬ್ದಾರಿ ನಿರ್ವಹಣೆ ಮೂಲಕ ಪಕ್ಷ ಸಂಘಟಿಸುತ್ತಿರುವ ಯುವ ಮುಖಂಡ ಅರುಣ್‌ಕುಮಾರ್ ಗೌಡ, ಜಗದೀಶ್ ಗೌಡ ಸೇರಿದಂತೆ ಅನೇಕ ಮುಖಂಡರು ಸ್ಪರ್ಧಾಕಾಂಕ್ಷಿಗಳಾಗಿದ್ದಾರೆ. ಆದರೆ ಚುನಾವಣಾ ಸಂದರ್ಭದಲ್ಲಿ ಅಂದಿನ ರಾಜಕೀಯ ವಿದ್ಯಮಾನಗಳನ್ನು ಅವಲೋಕಿಸಿ ಅಭ್ಯರ್ಥಿ ಘೋಷಿಸಬಹುದು ಎಂದು ಪಕ್ಷದ ಮುಖಂಡರು ಅಭಿಪ್ರಾಯಿಸಿದ್ದಾರೆ.

ಲೆಕ್ಕಾಚಾರ ಸುಲಭವಲ್ಲ: 2023ರ ಚುನಾವಣೆ ಲೆಕ್ಕಾಚಾರ ಕಳೆದ 2018ರ ಚುನಾವಣೆಗಿಂತಲೂ ಕ್ಲಿಷ್ಟ, ಕಳೆದ ಐದು ವರ್ಷಗಳಲ್ಲಿ ಎಲ್ಲಾ ಪಕ್ಷಗಳಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಕ್ಷೇತ್ರದಲ್ಲೂ ಹಲವು ರೀತಿಯಲ್ಲಿ ರಾಜಕೀಯ ಬೆಳವಣಿಗೆಯಾಗಿದೆ. ಜಿಲ್ಲೆಯ ದೊಡ್ಡ ಕ್ಷೇತ್ರವಾದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಎಲ್ಲಾ ಸಮುದಾಯದ ಮತದಾರರೂ ಇದ್ದಾರೆ. ಅಂದಾಜು 75 ಸಾವಿರಕ್ಕಿಂತ ಹೆಚ್ಚು ಒಕ್ಕಲಿಗರು, 48 ಸಾವಿರಕ್ಕೂ ಹೆಚ್ಚು ಪರಿಶಿಷ್ಟ ಜಾತಿಯವರು, ಲಿಂಗಾಯತ ಹಾಗೂ ಕುರುಬರು ತಲಾ 35 ಸಾವಿರ, ಪರಿಶಿಷ್ಟ ಪಂಗಡದವರು 30 ಸಾವಿರ, 14 ಸಾವಿರಕ್ಕಿಂತ ಹೆಚ್ಚು ವಿಶ್ವಕರ್ಮ, 13 ಸಾವಿರಕ್ಕೂ ಹೆಚ್ಚು ಬ್ರಾಹ್ಮಣರು, 6 ಸಾವಿರಕ್ಕೂ ಹೆಚ್ಚು ಮುಸ್ಲಿಂರು, 40 ಸಾವಿರ ಇತರೆ ಜಾತಿಯವರು ಸೇರಿ ಒಟ್ಟು 3 ಲಕ್ಷಕ್ಕೂ ಹೆಚ್ಚು ಮತದಾರರಿರಬಹುದು. ಆದರೆ ಮುಂದಿನ ಚುನಾವಣೆಯನ್ನು ಜಾತಿ ಲೆಕ್ಕಾಚಾರದಲ್ಲಿ ಎದುರಿಸುವುದು ಕಷ್ಟ. ಸಣ್ಣ–ಪುಟ್ಟ ಸಮುದಾಯಗಳೂ ನಿರ್ಣಾಯಕವಾಗಬಹುದು. ಹಾಗಾಗಿ ಅಭ್ಯರ್ಥಿಗಳ ಸ್ವಜಾತಿ ಸಮೀಕರಣ, ನಿರೀಕ್ಷಿತ ಫಲ ನೀಡುವುದಿಲ್ಲ. ಹಾಗಾಗಿ ಎಲ್ಲಾ ಸಮುದಾಯದ ಮತದಾರರ ಮನವೊಲಿಸುವುದು ಅಭ್ಯರ್ಥಿಗಳಿಗೆ ಅನಿವಾರ್ಯವಾಗಲಿದೆ.

ಕಾಂಗ್ರೆಸ್-ಬಿಜೆಪಿಯಲ್ಲಿ ನಾನಾ ಲೆಕ್ಕಾಚಾರ


ಅರುಣ್‌ಕುಮಾರ್



ಹೇಮಂತ್ ಕುಮಾರ್


ಗೋಪಾಲರಾವ್


ಜಗದೀಶ್ ಗೌಡ


ಕೆ.ಮರೀಗೌಡ


ವಿಜಯ್‌ಕುಮಾರ್


ಮಹದೇವ್


ರಾಕೇಶ್ ಪಾಪಣ್ಣ


ಕೃಷ್ಣಕುಮಾರ್


ಅರುಣ್‌ಕುಮಾರ್


ಲೇಖಾ ವೆಂಕಟೇಶ್


ಬಸವರಾಜ್

ಈವರೆಗೆ ಗೆಲುವು ಸಾಧಿಸಿದವರು...

ಮೈಸೂರು ತಾಲೂಕು ಕ್ಷೇತ್ರವಾಗಿದ್ದಾಗ 1952ರಲ್ಲಿ ಶಿವನಂಜೇಗೌಡರು(ಕಾಂಗ್ರೆಸ್), 1957ರಲ್ಲಿ ಕೆ.ಪುಟ್ಟಸ್ವಾಮಿ(ಕಾಂಗ್ರೆಸ್), 1962ರಲ್ಲಿ ಕೆ.ಪುಟ್ಟಸ್ವಾಮಿ(ಕಾಂಗ್ರೆಸ್), 1967ರಲ್ಲಿ ಕೆ.ಪುಟ್ಟಸ್ವಾಮಿ (ಕಾಂಗ್ರೆಸ್), 1972ರಲ್ಲಿ ಕೆ.ಪುಟ್ಟಸ್ವಾಮಿ(ಕಾಂಗ್ರೆಸ್) ಶಾಸಕರಾಗಿ ಆಯ್ಕೆಯಾಗಿದ್ದರು. ಚಾಮುಂಡೇಶ್ವರಿ ಕ್ಷೇತ್ರವಾಗಿ ಮರು ವಿಂಗಡಣೆಯಾದ ಬಳಿಕ 1978ರಲ್ಲಿ ಡಿ.ಜಯದೇವರಾಜ ಅರಸು(ಇಂದಿರಾ ಕಾಂಗ್ರೆಸ್), 1983ರಲ್ಲಿ ಸಿದ್ದರಾಮಯ್ಯ(ಪಕ್ಷೇತರ), 1985ರಲ್ಲಿ ಸಿದ್ದರಾಮಯ್ಯ(ಜನತಾಪಕ್ಷ), 1989ರಲ್ಲಿ ಎಂ.ರಾಜಶೇಖರಮೂರ್ತಿ(ಕಾಂಗ್ರೆಸ್), 1994ರಲ್ಲಿ ಸಿದ್ದರಾಮಯ್ಯ(ಜನತಾದಳ), 1999ರಲ್ಲಿ ಎ.ಎಸ್.ಗುರುಸ್ವಾಮಿ(ಕಾಂಗ್ರೆಸ್), 2004ರಲ್ಲಿ ಸಿದ್ದರಾಮಯ್ಯ(ಜೆಡಿಎಸ್), 2006ರಲ್ಲಿ ಸಿದ್ದರಾಮಯ್ಯ(ಕಾಂಗ್ರೆಸ್), 2008ರಲ್ಲಿ ಎಂ.ಸತ್ಯನಾರಾಯಣ(ಕಾಂಗ್ರೆಸ್), 2013– ಜಿ.ಟಿ.ದೇವೇಗೌಡ(ಜೆಡಿಎಸ್) ಹಾಗೂ 2018ರಲ್ಲಿ ಜಿ.ಟಿ.ದೇವೇಗೌಡ(ಜೆಡಿಎಸ್) ಆಯ್ಕೆಯಾಗಿದ್ದಾರೆ.

ಜೆಡಿಎಸ್ ಭದ್ರಕೋಟೆ...

ಚಾಮುಂಡೇಶ್ವರಿ ಕ್ಷೇತ್ರ ಸದ್ಯ ಜೆಡಿಎಸ್ ಭದ್ರಕೋಟೆಯಾಗಿದೆ. 2013 ಹಾಗೂ 2018ರ ಚುನಾವಣೆಯಲ್ಲಿ ಶೇಖಡವಾರು ಅತೀ ಹೆಚ್ಚು ಮತಗಳು ಜೆಡಿಎಸ್‌ಗೆ ದಕ್ಕಿವೆ. 2008ರಲ್ಲಿ ಕಾಂಗ್ರೆಸ್‌ನ ತೆಕ್ಕೆ ಸೇರಿದ್ದ ಕ್ಷೇತ್ರವನ್ನು 2013ರಲ್ಲಿ ಜಿ.ಟಿ.ದೇವೇಗೌಡರ ಗೆಲುವಿನೊಂದಿಗೆ ಮತ್ತೆ ಜೆಡಿಎಸ್ ಮರಳಿ ಪಡೆಯಿತು. ಸತತ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಜಿಟಿಡಿ, ಮೊದಲ ಬಾರಿ ಶೇ.42.87 ಹಾಗೂ 2ನೇ ಬಾರಿ ಶೇ.53.62 ಮತ ಗಳಿಸಿಕೊಳ್ಳುವ ಮೂಲಕ ಪ್ರಾಬಲ್ಯ ಮೆರೆದಿದ್ದಾರೆ. ಅಂದರೆ ಎಲ್ಲಾ ಸಮುದಾಯದ ಮತ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಉಂಡುವಾಡಿ ಕುಡಿಯುವ ನೀರಿನ ಯೋಜನೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳ ಮೂಲಕ ಜನತೆಯ ವಿಶ್ವಾಸ ಉಳಿಸಿಕೊಂಡಿದ್ದಾರೆ. ಜಿಟಿಡಿ ಅವರ ಪತ್ನಿ ಲಲಿತಾ ಜಿ.ಟಿ.ದೇವೇಗೌಡ, ಪುತ್ರ ಜಿ.ಡಿ.ಹರೀಶ್ ಗೌಡ ಸಹಕಾರ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದು ತಮ್ಮದೇ ಮಾರ್ಗದಲ್ಲಿ ಜನಪ್ರೀತಿ ಗಳಿಸಿದ್ದಾರೆ. ಹಾಗಾಗಿ ಜೆಡಿಎಸ್ ವರಿಷ್ಠರಾದ ಹೆಚ್.ಡಿ.ದೇವೇಗೌಡರು, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಈ ಬಾರಿಯೂ ಜಿಟಿಡಿ ಗೆಲುವು ಸಾಧಿಸುವ ಅತೀವ ವಿಶ್ವಾಸದಲ್ಲಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗೆಳೆಯ : (ಮಂಜುಗಡ್ಡೆ ಕೈಯ್ಯಲ್ಲಿ ಹಿಡಿದುಕೊಂಡು ಅದನ್ನೇ ನೋಡ್ತಾ ಇದ್ದ) ಅವಾಗಲಿಂದ ಏನ್ ನೋಡ್ತಾ ಇದ್ದೀಯಾ?

ಆತ : ಇದರಲ್ಲಿ ಎಲ್ಲೋ ನೀರು ಸೋರ್ತಾ ಇದೆ. ಎಲ್ಲಿ ಅಂತ ಗೊತ್ತಾಗ್ತಾ ಇಲ್ಲ!

ಮೈಸೂರು ಮಿತ್ರ

ಶುಕ್ರವಾರ, 9 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಬೇಸರಿಸದ ಎಚ್ಚರದ ದುಡಿಮೆಯಿಂದ ಯಾವುದೇ ವೃತ್ತಿಯಲ್ಲಿ ಖಂಡಿತಾ ಯಶಸ್ಸು ಸಾಧ್ಯ –ವೆಬ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಡೀತಾ ಇದ್ರೆ ನಂಟು, ಬೆಳಗ್ತಾ ಇದ್ರೆ ಕಂಚು

ನಿಮ್ಮ ಪತ್ರಗಳು

ಬಸ್ ಸಂಚಾರ ಮತ್ತೆ ಆರಂಭವಾಗಲಿ

ಮಾನ್ಯರೆ,

ನಾನು ನಗರ ಸಾರಿಗೆ ಬಸ್ಸಿನ ನಿತ್ಯ ಪ್ರಯಾಣಿಕ. ಮೈಸೂರು ನಗರದಲ್ಲಿ ನಗರ ಸಾರಿಗೆ ಬಸ್ಸುಗಳ ಸಮಸ್ಯೆಯಿಂದಾಗಿ ಪ್ರಯಾಣಿಕರಿಗೆ ತಮ್ಮ ಕಾರ್ಯಸ್ಥಳಗಳಿಗೆ ತಲುಪಲು ಪ್ರತಿನಿತ್ಯ ಕಷ್ಟವಾಗುತ್ತಿದೆ. ನಗರದ ಹಲವು ಪ್ರದೇಶಗಳಲ್ಲಿ ಬೆಳಗ್ಗೆ 8.30 ರಿಂದ 9.30ರವರೆಗೆ ಬಸ್ಸುಗಳ ಅಭಾವವಿದೆ. ಬೆಳಗಿನ ಸಮಯ ಮೈಸೂರಿನ ಜೆ.ಪಿ.ನಗರದ ಗೊಬ್ಬಳಿಮರ ತಂಗುದಾಣದಲ್ಲಿ ಬಹಳಷ್ಟು ಪ್ರಯಾಣಿಕರು ಬಸ್ಸಿಗಾಗಿ ಕಾಯುತ್ತ ನಿಲ್ಲುವುದರಿಂದ ಜನದಟ್ಟಣೆ ತುಂಬಿರುತ್ತದೆ.

ಕೊರೊನಾದಿಂದಾಗಿ ಎರಡು ವರ್ಷಗಳ ಹಿಂದೆ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ ಕುವೆಂಪುನಗರ ಘಟಕಕ್ಕೆ ಸೇರಿದ ಮಾರ್ಗಸಂಖ್ಯೆ 10ಎ, 11ಆರ್, 11ಆರ್‌ಜಿ, 62 ಆರ್‌ಜೆ, 72 ಮತ್ತು 135 ಬಸ್ಸುಗಳ ಸಂಚಾರ ಇನ್ನೂ ಆರಂಭಗೊಂಡಿಲ್ಲ. ಇದುವರೆವಿಗೂ ಕಾರ್ಯಾಚರಣೆಗೊಂಡಿಲ್ಲ. ಮೈಸೂರು ನಗರದಲ್ಲಿ ನಗರ ಸಾರಿಗೆ ಬಸ್ಸುಗಳನ್ನು ತಮ್ಮ ದೈನಂದಿನ ಚಟುವಟಿಕೆಗಳಿಗಾಗಿ ನಂಬಿಕೊಂಡಿರುವ ಬಹಳಷ್ಟು ಸಂಖ್ಯೆಯ ಪ್ರಯಾಣಿಕರು ಮತ್ತು ಮಾಸಿಕ ಬಸ್ ಪಾಸ್ ಹೊಂದಿರುವವರು ಇದ್ದಾರೆ. ನಿಗಧಿತ ಸಮಯಕ್ಕೆ ಬಸ್ಸುಗಳು ಬರದಿದ್ದಾಗ ಪ್ರಯಾಣಿಕರು ಅನಿವಾರ್ಯವಾಗಿ ದುಬಾರಿ ಹಣ ತೆತ್ತು ಆಟೋದಲ್ಲಿ ತಮ್ಮ ಕಾರ್ಯಸ್ಥಳಗಳಿಗೆ ತಲುಪಬೇಕಾದ ಪರಿಸ್ಥಿತಿ ಇದೆ.

ಬಸ್ಸುಗಳ ಆಗಮನದ ಬಗ್ಗೆ ಮಾಹಿತಿ ನೀಡುವ ಐಟಿಎಸ್ (INTELLIGENT TRANSPORT SYSTEM) ಫಲಕವನ್ನು ಮರು ಚಾಲನೆಗೊಳಿಸಬೇಕು. ಸಂಖ್ಯೆ 161ಕ್ಕೆ ನಿಲ್ದಾಣದ ಕೋಡ್‌ನ್ನು ಎಸ್‌ಎಂಎಸ್ ಮಾಡುವ ಮೂಲಕ ಪ್ರಯಾಣಿಕರು ಬಸ್ಸುಗಳ ಆಗಮನದ ಬಗ್ಗೆ ಮಾಹಿತಿ ಪಡೆದುಕೊಳ್ಳುವ ವ್ಯವಸ್ಥೆಯನ್ನು ಮರು ಜಾರಿ ಗೊಳಿಸಬೇಕು. ಈ ಬಗ್ಗೆ ಅನೇಕ ಬಾರಿ ಪತ್ರಿಕೆಗಳ ಮೂಲಕ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳ ಗಮನ ಸೆಳೆದಿದ್ದರೂ, ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದ್ದರೂ ಫಲಿತಾಂಶ ಶೂನ್ಯವಾಗಿದೆ. ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ದಯಮಾಡಿ ಇತ್ತ ಗಮನಹರಿಸಿ ಆದಷ್ಟು ಶೀಘ್ರ ಸ್ಥಗಿತವಾಗಿರುವ ಎಲ್ಲಾ ನಗರ ಸಾರಿಗೆ ಬಸ್ಸುಗಳನ್ನು ಕೂಡಲೇ ಮರುಕಾರ್ಯಾಚರಣೆಗೊಳಿಸಬೇಕು ಹಾಗೂ ಐಟಿಎಸ್ ಫಲಕವನ್ನು ಮರುಚಾಲನೆಗೊಳಿಸಬೇಕೆಂದು ಕಳಕಳಿಯ ಮನವಿ.

–ಪರಶಿವಮೂರ್ತಿ, ಪೊಲೀಸ್ ಬೂತ್ ಹತ್ತಿರ ಜೆ.ಪಿ.ನಗರ, ಮೈಸೂರು

ಚಿಕ್ಕಕೆರೆ ಸಂರಕ್ಷಣೆಗೆ ಕೈಜೋಡಿಸಿ...!



ಮಾನ್ಯರೆ,

ಗುಂಡ್ಲುಪೇಟೆ ತಾಲೂಕಿನ ಅಸ್ಮಿತೆಯಂತಿದ್ದ ನಮ್ಮ ಹೆಮ್ಮೆಯ "ಗುಂಡ್ಲು ಹೊಳೆ"ಯು ಹಲವು ದಶಕಗಳ ನಂತರ ಈಗ ಮತ್ತೊಮ್ಮೆ ಮೈದುಂಬಿ ಹರಿಯುತ್ತಿರುವುದರಿಂದಾಗಿ ತಾಲೂಕಿನ ದೊಡ್ಡಕೆರೆಯೂ ತುಂಬಿ (ಅಮಾನಿಕೆರೆ) ಪಟ್ಟಣಕ್ಕೆ ಹೊಂದಿಕೊಂಡಂತೆ ಇರುವ "ಚಿಕ್ಕಕೆರೆ"ಗೂ ಆ ನೀರು ಹರಿದು ಬರುತ್ತಿದೆ. ಆದರೆ ಹೂಳು ತುಂಬಿದ್ದರಿಂದ ನೀರು ಸರಾಗವಾಗಿ ಹರಿದು ಚಿಕ್ಕಕೆರೆಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ಇದನ್ನು ಅರಿತ ನಮ್ಮ "ಗುಂಡ್ಲು ಪರಿಸರ ಬಳಗದ" ಗೆಳೆಯರು ಶ್ರಮದಾನದ ಮೂಲಕ 30 ಅಡಿಗಳಷ್ಟು ಉದ್ದದ ಕಾಲುವೆಯನ್ನು ಸ್ವಚ್ಛಗೊಳಿಸಿ ಮತ್ತೆ ಸ್ವಲ್ಪ ದೂರದವರೆಗೆ ಕಾಲುವೆಯನ್ನು ನಿರ್ಮಿಸಿ ನೀರು ಸರಾಗವಾಗಿ ಹರಿಯುವಂತೆ ಮಾಡಿದ್ದಾರೆ.ಹಾಗೆಯೇ ಸುಮಾರು ದಶಕಗಳಿಂದ ನೀರು ತುಂಬದೆ ಬರಿದಾಗಿದ್ದರಿಂದ ಚಿಕ್ಕಕೆರೆಯ ಅಂಗಳ ಮತ್ತು ಕೆರೆಯ ಏರಿ ಮೇಲೆ ಈಗ ಮುಳ್ಳಿನ ಗಿಡಗಳು ಬೆಳೆದು ತಿರುಗಾಡಲು ಕಷ್ಟವಾಗಿತ್ತು. ಜೊತೆಗೆ ಕೆರೆ ಅಂಗಳದಿಂದ ಏರಿಗೆ ಹಾಕಲಾಗಿರುವ ಹಾಸುಗಲ್ಲಿನ ಮೇಲೆ ವಿಪರೀತವಾದ ಮುಳ್ಳಿನ ಗಿಡಗಳು ಬೆಳೆದು ಕುರುಚಲು ಕಾಡಿನಂತೆ ಮಾರ್ಪಾಡಾಗಿತ್ತು.

ಹೀಗೆ ದಟ್ಟವಾಗಿ ಬೆಳೆದಿದ್ದ ಮುಳ್ಳಿನ ಪೊದೆಗಳನ್ನು ನಮ್ಮ ಪರಿಸರ ಬಳಗದ ಗೆಳೆಯರು ಅವೆಲ್ಲವನ್ನೂ ಕಡಿದು ತೆರವುಗೊಳಿಸಿ ಸ್ವಚ್ಛಗೊಳಿಸಿದ್ದಾರೆ.

ಹನಿ ಹನಿಗೂಡಿದರೆ ಹಳ್ಳ, ತೆನೆ ತೆನೆಗೂಡಿದರೆ ಬಳ್ಳ ಎನ್ನುವ ಹಾಗೆ ಮುಂದಿನ ದಿನಗಳಲ್ಲಿ ತಾಲೂಕಿನ ಎಲ್ಲಾ ಜನಪರ ಸಂಘಟನೆಗಳು, ನಾಗರಿಕರು, ರೈತರು, ಯುವಕರು, ವಿದ್ಯಾರ್ಥಿಗಳು, ರಾಜಕಾರಣಿಗಳು ಹೀಗೆ ಪ್ರತಿಯೊಬ್ಬರೂ ಸಹ ಪಕ್ಷ ಭೇದ, ಜಾತಿ ಭೇದ ಮರೆತು ನಮ್ಮ "ಚಿಕ್ಕಕೆರೆ" ಸಂರಕ್ಷಣೆಗಾಗಿ ಹಮ್ಮಿಕೊಂಡಿರುವ ಶ್ರಮದಾನ ಕಾರ್ಯಕ್ಕೆ ಎಲ್ಲರೂ ಕೈ ಜೋಡಿಸಬೇಕಾಗಿ ಮನವಿ.

–ಅಪುರಾ, ಗುಂಡ್ಲು ಪರಿಸರ ಬಳಗ, ಗುಂಡ್ಲುಪೇಟೆ ತಾ.

ರೋಹಿಣಿ ಸಿಂಧೂರಿಯವರ ಪ್ರಾಮಾಣಿಕ, ಪಾರದರ್ಶಕ ಆಡಳಿತವೆಲ್ಲಿ?

ಮಾನ್ಯರೆ,

ಮೈಸೂರಿನ ಜಿಲ್ಲಾಧಿಕಾರಿಯಾಗಿದ್ದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿಯವರು, ತಾತ್ಕಾಲಿಕವಾಗಿ ಉಳಿದುಕೊಂಡಿದ್ದ ಮೈಸೂರಿನ ಆಡಳಿತ ಮತ್ತು ತರಬೇತಿ ಸಂಸ್ಥೆ (ಎಟಿಐ)ಯಲ್ಲಿ ಬೆಲೆ ಬಾಳುವ ಬೆತ್ತದ ಚೇರ್‌ಗಳು, ಟೆಲಿಫೋನ್ ಟೇಬಲ್, ಮೈಕ್ರೋ ಓವನ್, ಮಂಚ, ಹಾಸಿಗೆ, ದಿಂಬು, ಯೋಗ ಮ್ಯಾಟ್, ಹೀಗೆ ಸುಮಾರು 15 ವಸ್ತುಗಳನ್ನು ತೆಗೆದುಕೊಂಡು ಹೋಗಿ 2 ವರ್ಷಗಳಾಗಿದ್ದು, ಆಡಳಿತ ಸಂಸ್ಥೆಯವರು ಮೂರು ಬಾರಿ ಪತ್ರ ಬರೆದರೂ ಅವನ್ನು ಇನ್ನೂ ಹಿಂತಿರುಗಿಸಲಾರದಷ್ಟು ಬಡತನ ಅವರಿಗೆ ಬಂದಿದೆಯೇ? ಇವೆಲ್ಲಾ "ದೊಡ್ಡವರ ಸಣ್ಣತನಗಳು". ನಾನೊಬ್ಬಳೆ ಪ್ರಾಮಾಣಿಕ ಅಧಿಕಾರಿಯಂತೆ ಪೋಸು ಕೊಡುವ ಇವರ ಪಾರದರ್ಶಕ ಆಡಳಿತ ಎಲ್ಲಿ ಹೋಯಿತು. ಆದರ್ಶವಾಗಿರ ಬೇಕಾದ ಮೇಲಾಧಿಕಾರಿಗಳೇ ಈ ಮಟ್ಟಕ್ಕೆ ಇಳಿದರೆ ಇನ್ನು ಕೆಳಮಟ್ಟದ ಅಧಿಕಾರಿಗಳು ಯಾವ ಮಟ್ಟದ ಭ್ರಷ್ಟಾಚಾರಕ್ಕೆ ಇಳಿಯಬಹುದು.


–ಬೂಕನಕೆರೆ ವಿಜೇಂದ್ರ, ಮೈಸೂರು.

ತಿದ್ದುಪಡಿ ಹಾಗೂ ಸ್ಪಷ್ಟೀಕರಣ

ಮೈಸೂರು ಕೊಡವ ಸಮಾಜದ ವತಿಯಿಂದ ಮೈಸೂರಿನ ವಿಜಯನಗರ ಒಂದನೇ ಹಂತದಲ್ಲಿರುವ ಕೊಡವ ಸಮುದಾಯ ಭವನದಲ್ಲಿ ಬುಧವಾರ ರಾತ್ರಿ ಹುತ್ತರಿ ಹಬ್ಬವನ್ನು ಸಾಂಪ್ರದಾಯಿಕ ರೀತಿ ಆಚರಿಸಲಾಗಿದೆ. ಈ ವೇಳೆ ವಿಶೇಷ ಖಾದ್ಯಗಳಾದ ತಂಬಿಟ್ಟು, ಅಡಕೆ ಹಿಟ್ಟು, ಬೇಯಿಸಿದ ಹುತ್ತರಿ ಗೆಣಸು ಸೇರಿದಂತೆ ಯಾವ ಸಸ್ಯಾಹಾರ ಇಲ್ಲವೇ ಮಾಂಸಾಹಾರವನ್ನು ತಯಾರಿಸಿಯೂ ಇಲ್ಲ, ಅದನ್ನು ಯಾರಿಗೂ ಉಣಬಡಿಸಿಯೂ ಇಲ್ಲ. ವಾಸ್ತವವಾಗಿ ಕಾವೇರಿ ಸಂಕ್ರಮಣ ಹಾಗೂ ಹುತ್ತರಿ ಹಬ್ಬದಲ್ಲಿ ಮಾಂಸಾಹಾರ ಸೇವಿಸುವ ಪದ್ಧತಿಯೇ ತಮ್ಮಲ್ಲಿಲ್ಲ ಎಂದು ಮೈಸೂರು ಕೊಡವ ಸಮಾಜದ ಗೌರವ ಕಾರ್ಯದರ್ಶಿ ಮುಕ್ಕಾಟ್ಟಿರಾ ಬಿ. ಜೀವನ್ ಸ್ಪಷ್ಟಪಡಿಸಿದ್ದಾರೆ. ಆದರೆ 'ಮೈಸೂರು ಮಿತ್ರ'ನ ಗುರುವಾರದ ಸಂಚಿಕೆಯಲ್ಲಿ ತಪ್ಪಾಗಿ ವರದಿಯಾಗಿದ್ದು, ಅದಕ್ಕಾಗಿ ವಿಷಾದಿಸುತ್ತೇವೆ. – ಸಂಪಾದಕ

ರಂಗಸಂಸ್ಕಾರ ನೀಡುವ ಬಹುರೂಪಿ

●ಗಣೇಶ್ ಅಮೀನಗಡ



ಅಡ್ಡಂಡ ಕಾರ್ಯಪ್ಪ

ಮೈಸೂರು: ನಗರದ ರಂಗಾಯಣದ ಆವರಣದಲ್ಲಿ ಈಗ ಹಬ್ಬದ ಸಡಗರ. ಅದು ರಂಗಹಬ್ಬ ಜೊತೆಗೆ ರಂಗಸಂಸ್ಕಾರ ನೀಡುವ ನಾಟಕಗಳ 'ಬಹುರೂಪಿ' ಇಂದಿನಿಂದ (ಡಿ.9) ಆರಂಭ. 'ಬಹುರೂಪಿ' ಎನ್ನುವುದೊಂದು ನೆಪ. ಈ ನೆಪದಲ್ಲಿ ವಿವಿಧ ರಾಜ್ಯಗಳ ನಾಟಕಗಳ ತಂಡಗಳ ಸಮ್ಮಿಲನ ಆಗಲಿದೆ. ಅವುಗಳ ಕಲಾವಿದರು ಪರಸ್ಪರ ಭೇಟಿಯಾಗುತ್ತಾರೆ. ಇತರ ತಂಡಗಳ ನಾಟಕ ನೋಡುತ್ತ, ಚರ್ಚಿಸುತ್ತಾರೆ. ಮುಖ್ಯವಾಗಿ ಮೈಸೂರಿಗರು ಅಂದರೆ ಪ್ರೇಕ್ಷಕರು ನಾಟಕಗಳನ್ನು ನೋಡಲು ಮುಗಿಬೀಳುತ್ತಾರೆ. ವನರಂಗದ ಪಕ್ಕದಲ್ಲಿ ಪ್ರಾತ್ಯಕ್ಷಿಕೆಯ ಮಳಿಗೆಗಳಲ್ಲಿ ನೇಕಾರಿಕೆ, ಬುಟ್ಟಿ ಹೆಣೆಯುವುದು, ಮಡಕೆ ಮಾಡುವುದನ್ನು ನೋಡುತ್ತ ಬೆರಗಾಗುತ್ತಾರೆ.

ಹೀಗೆ ಸುತ್ತಾಡುತ್ತ ತಮಗಿಷ್ಟವಾದ ಕರಕುಶಲ ವಸ್ತುಗಳನ್ನು ಕೊಳ್ಳುತ್ತ, ಜೋಳದ ರೊಟ್ಟಿ, ಎಣಗಾಯಿ ಅಲ್ಲದೆ ಗಿರ್ಮಿಟ್ ಜೊತೆಗೆ ಮಿರ್ಚಿ, ಭಜ್ಜಿ ಭಜಿಸುತ್ತ ಕುಕ್ಕರಹಳ್ಳಿ ಕೆರೆಯಿಂದ ಸುಳಿವ ತಣ್ಣನೆಯ ಗಾಳಿಯನ್ನು ಅದರೊಂದಿಗೆ ಕಾಡುವ ಮಾಗಿಯ ಚಳಿಯನ್ನು ಓಡಿಸುತ್ತಾರೆ. ಹೀಗೆ ಹೊಟ್ಟೆಯನ್ನು ತುಂಬಿಸಿಕೊಂಡ ನಂತರ ನೆತ್ತಿಯನ್ನು ತುಂಬಿಸಿಕೊಳ್ಳಲು ಇಷ್ಟವಾದ ಪುಸ್ತಕಗಳನ್ನು ಕೊಳ್ಳುತ್ತ, ಯಾವ ನಾಟಕ ಚೆನ್ನಾಗಿದೆ ಎಂದು ಚರ್ಚಿಸುತ್ತ ಭೂಮಿಗೀತ, ವನರಂಗ ಇಲ್ಲವೆ ಕಲಾಮಂದಿರದತ್ತ ಹೆಜ್ಜೆ ಹಾಕುತ್ತಾರೆ. ಇಂಥ ದೃಶ್ಯಗಳು ಇಂದಿನಿಂದ ಸಾಮಾನ್ಯ. ಈಗಾಗಲೇ ಗುರುವಾರ (ಡಿಸೆಂಬರ್ 8) ಜಾನಪದ ಉತ್ಸವ ಉದ್ಘಾಟನೆ ಮೂಲಕ 'ಬಹುರೂಪಿ'ಗೆ ಚಾಲನೆ ಸಿಕ್ಕಿದೆ. 'ಇದನ್ನು ನಾವು ಚಪ್ಪರ ಅಂತ ಕರೀತೇವೆ. ಯಾವುದೇ ಸಮಾರಂಭಕ್ಕೆ ಮುನ್ನ ಚಪ್ಪರ ಹಾಕುತ್ತೇವೆ. ಹೀಗಾಗಿ ಜಾನಪದ ಉತ್ಸವ ಉದ್ಘಾಟನೆ ಮೂಲಕ ಚಪ್ಪರ ಶುರುವಾಗಿದೆ. ಜಾನಪದರು ಎಂದರೆ ಭಾರತೀಯತೆಯ ಮೂಲ ಬೇರು. ಅವರಿಂದಲೇ ಸಂಸ್ಕೃತಿ, ಅವರಿಂದಲೇ ಸಂಸ್ಕಾರ. ಈ ನಿಟ್ಟಿನಲ್ಲಿ ಭಾರತೀಯತೆ ರೀತಿ ಬೆಳಗುವ ಮೂಲಕ ಬಹುರೂಪಿ ಶುರುವಾಗಿದೆ' ಎಂದು ಖುಷಿ ಹಂಚಿಕೊಂಡರು ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ.

ಜಾನಪದ ಉತ್ಸವ ಉದ್ಘಾಟನೆ ನಂತರ ಕೆರೆಮನೆ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯ ಶಿವಾನಂದ ಹೆಗಡೆ ಅವರ ತಂಡ ರಾಮಾಯಣದ 'ಪಂಚವಟಿ' ಯಕ್ಷಗಾನವನ್ನು ಪ್ರಸ್ತುತಪಡಿಸಿತು. 'ಸಂತೋಷವೇ ಬಹುರೂಪಿ. ಹೆಸರೇ ಹೇಳುವ ಹಾಗೆ



ನಮ್ಮ ದೇಶದ ವೈವಿಧ್ಯ ಬಹುರೂಪಿ. ಬೇರೆ ಬೇರೆ ಪ್ರಕಾರದ ಕಲಾವಿದರನ್ನು ಆಹ್ವಾನಿಸುವ ಮೂಲಕ ಬಹುರೂಪಿ ಯಶಸ್ವಿಯಾಗುತ್ತದೆ. ಜಾನಪದಕ್ಕೆ, ಯಕ್ಷಗಾನಕ್ಕೆ ಅವಕಾಶ ನೀಡುವ ಮೂಲಕ ಬಹುರೂಪತೆ ಸಿಕ್ಕಿದೆ' ಎಂದು ಶಿವಾನಂದ ಹೆಗಡೆ ಹರ್ಷ ವ್ಯಕ್ತಪಡಿಸಿದರು.

'ಕನ್ನಡ ನಾಟಕಗಳಲ್ಲದೆ ವಿವಿಧ ಭಾಷೆಗಳ ನಾಟಕಗಳನ್ನು ನೋಡಲು ಸಾಧ್ಯವಾಗುತ್ತದೆ. ಬೇರೆ ಬೇರೆ ರಾಜ್ಯಗಳ ನಾಟಕಗಳನ್ನು ನೋಡುವ ಮೂಲಕ ಅಲ್ಲಿನ ಸಂಗೀತ, ಸಂಸ್ಕೃತಿ ಪರಿಚಯ ಆಗಲಿದೆ' ಎನ್ನುವ ಹಂಬಲ ವ್ಯಕ್ತಪಡಿಸಿದವರು ಕಂಪನಿ ನಾಟಕ ಕಲಾವಿದರಾದ ಹರೀಶ್. ಇವರ ಹಾಗೆ ಸುತ್ತಾಡುತ್ತಿದ್ದ ನಿವೃತ್ತ ಬ್ಯಾಂಕ್ ಉದ್ಯೋಗಿ ಕೃಷ್ಣಪ್ರಸಾದ್ ಹಾಗೂ ಸಾಧನಾ ದಂಪತಿ ಇಪ್ಪತ್ತು ವರ್ಷಗಳಿಂದ ಮೈಸೂರಲ್ಲಿ ನೆಲೆ ನಿಂತಿದ್ದು, ಬಹುರೂಪಿಗಾಗಿ ಕಾಯುತ್ತಾರೆ.

'ದಸರಾ ನಂತರ ನಡೆಯುವ ಹಬ್ಬ ಎಂದರೆ ಬಹುರೂಪಿ' ಎಂದು ಮಾತಿಗೆ ನಿಂತವರು ರಂಗಾಯಣ ರೆಪರ್ಟರಿ ಕಲಾವಿದ ಶರೀಫ್ ಅಂದಪ್ಪನವರ. 'ನಮ್ಮಂಥ ರಂಗಭೂಮಿ ಕಲಾವಿದರಿಗೆ ಭಾಳ ಸಹಾಯ ಆಗ್ತದ. ಹೆಂಗಂದ್ರ ಬೇರೆ ಬೇರೆ ತಂಡಗಳ ಕಲಾವಿದರ ಅಭಿನಯ ನೋಡಲು ಸಾಧ್ಯವಾಗ್ತದ. ಆಂಧ್ರದ ಸುರಭಿ ತಂಡದ ಮಾಯಾಬಜಾರ್ ನಾಟಕ ನೋಡುವುದರಿಂದ ಅವರ ಭಾಷೆ, ಅಭಿನಯ ಗಮನಿಸಿ ದಂತಾಗುತ್ತದೆ. ಹೀಗೆಯೇ ಗೌಡ್ರ ಗದ್ಲ ನಾಟಕದಿಂದ ಉತ್ತರ ಕರ್ನಾಟಕದ ಭಾಷೆಯ ಸೊಗಡು ಕೇಳಿದಂತಾಗುತ್ತದೆ' ಎನ್ನುವ ಸಂತಸ ಅವರದು.

ರೇಖಾಚಿತ್ರ ಕಲಾವಿದೆ ಪ್ರೊ.ಎ.ಶಶಿಕಲಾ ಅವರು 'ಬಹುರೂಪಿ ಎಂದರೆ ಸಂಭ್ರಮ, ಸಂತೋಷ. ಸಂತೋಷದ ಸಂತೆ ಇದು. ಎಲ್ಲ ರೀತಿಯ ಜನರಿಗೆ ಸಂತೋಷ ಸಿಗಲಿದೆ' ಎಂದು ಅವರು ಆಶಯ ವ್ಯಕ್ತಪಡಿಸಿದರು.

ಜನಪದೋತ್ಸವ: ವನರಂಗದಲ್ಲಿ ಪ್ರತಿದಿನ ಸಂಜೆ 5 ಗಂಟೆಗೆ ಜನಪದೋತ್ಸವ ನಡೆಯಲಿದೆ. ಡಿ.9ರಂದು ಚಾಮರಾಜನಗರದ ಶಿವಮಲ್ಲೇಗೌಡ ಮತ್ತು ತಂಡದಿಂದ ಗೊರವರ ನೃತ್ಯ, ಡಾ. ಮನೋನ್ಮಣಿ ಮತ್ತು ತಂಡದಿಂದ ಸಂಪ್ರದಾಯದ ಹಾಡು, ಡಿ.10 ರಂದು ಮೈಸೂರಿನ ಸುಂದರೇಶ್ ಮತ್ತು ತಂಡದಿಂದ ಡೊಳ್ಳು ಕುಣಿತ, ಯದುಕುಮಾರ್ ಮತ್ತು ತಂಡದಿಂದ ನಾದಸ್ವರ, ಡಿ.11 ಮಂಡ್ಯದ ಸವಿತಾ ಚಿರಕುನ್ನಯ್ಯ ತಂಡದಿಂದ ಪೂಜಾ ಕುಣಿತ, ಮೈಸೂರಿನ ಡಾ.ಮೈಸೂರು ಗುರು ರಾಜ್ ಮತ್ತು ತಂಡದಿಂದ ನೀಲಗಾರರ ಮೇಳ, ಡಿ.12ರಂದು ಚಿಕ್ಕಮಗಳೂರಿನ ರಂಗ ನಾಥ ಮತ್ತು ತಂಡದಿಂದ ಸೋಮನ ಕುಣಿತ, ಉಡುಪಿಯ ಶ್ರೀರಾಮ ಜನಪದ ಕಲಾ ತಂಡದಿಂದ ಕರಗ ಕೋಲಾಟ, ಡಿ.13ರಂದು ದಕ್ಷಿಣ ಕನ್ನಡದ ಮಂಜುನಾಥ ಮತ್ತು ತಂಡದಿಂದ ಕಂಗೀಲು, ಡಾ.ಮಳವಳ್ಳಿ ಮಹದೇವಸ್ವಾಮಿ ಅವರಿಂದ ಮಂಟೇ ಸ್ವಾಮಿ ಹಾಡು, ಡಿ.14 ರಂದು ಹಾಸನದ ಓಂಕಾರ್ ಮೂರ್ತಿ ತಂಡದಿಂದ ಚಿಟ್ ಮೇಳ, ಶುಭಾ ರಾಘವೇಂದ್ರ ತಂಡದಿಂದ ಜಾನಪದ ಗೀತೆ, ಡಿ.15 ರಂದು ಕೆ.ಎನ್. ಮಹೇಶ್ ಅವರಿಂದ ವೀರಗಾಸೆ, ಕೊಡಗಿನ ಸೂರಜ್ ಮತ್ತು ತಂಡದಿಂದ ಬೊಳಕಾಟ್ ನಡೆಯಲಿದೆ.



ಚಲನಚಿತ್ರೋತ್ಸವ: ಚಲನಚಿತ್ರೋತ್ಸವದಲ್ಲಿ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರಿಗೆ ಗೌರವ ಸಮರ್ಪಿಸುವ ನಿಟ್ಟಿನಲ್ಲಿ ಶ್ರೀರಂಗ ಮಂದಿರಕ್ಕೆ ಡಾ.ಪುನೀತ್‌ರಾಜ್ ಕುಮಾರ್ ಚಿತ್ರ ಮಂದಿರ ಎಂದು ಹೆಸರಿಡಲಾಗಿದೆ. ಈ ಮಂದಿರದಲ್ಲಿ ಪ್ರತಿದಿನ ಬೆಳಗ್ಗೆ 10.30 ರಿಂದ ಮ.12, ಮ.12ರಿಂದ 1.30 ಹಾಗೂ ಮ.2 ರಿಂದ ಸಂಜೆ 4.30ರ ಸಮಯದಲ್ಲಿ ಮೂರು ಚಿತ್ರಗಳ ಪ್ರದರ್ಶನ ನಡೆಯಲಿವೆ. ಮೊದಲ ದಿನ ಮ.12ರಿಂದ 1.30 ಹಾಗೂ ಮ.2 ರಿಂದ ಸಂಜೆ 4.30ರ ಪ್ರದರ್ಶನ ಮಾತ್ರ ಇರಲಿದೆ. ಡಿ.9ರಂದು 11 ಗಂಟೆಗೆ ಭೂಮಿಗೀತೆಯಲ್ಲಿ ಚಿತ್ರನಟ ದೊಡ್ಡಣ್ಣ ಬಹುರೂಪಿ ಚಲನಚಿತ್ರೋತ್ಸವವನ್ನು ಉದ್ಘಾಟಿಸಲಿದ್ದಾರೆ. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಅಶೋಕ್ ಕಶ್ಯಪ್ ಅಧ್ಯಕ್ಷತೆ ವಹಿಸಲಿದ್ದಾರೆ. ಡಿ.9ರಂದು ಜೈ ಹೋ–ಎ ಫಿಲ್ಮ್ ಆನ್ ಎ.ಆರ್.ರೆಹಮಾನ್, ಕರ್ಮ(ನೇಪಾಳಿ), ಡಿ.10 ರಂದು ಹಿಮಾಲಯ ವಿತ್ ಮೈಕಲ್ ಪಾಲಿನ್–ಲೀಪಿಂಗ್ ಟೈಗರ್ಸ್ ಅಂಡ್ ನೇಕೆಡ್ ನಾಗಾಸ್(ಇಂಗ್ಲಿಷ್), ಇಂಡೋ–ಪಾಕ್ ಕಾನ್‌ಫ್ಲಿಕ್ಟ್–1971, ಮುಕ್ತಿ(ಇಂಗ್ಲಿಷ್), 1971(ಹಿಂದಿ), ಡಿ.11 ರಂದು ರಾಂಚಿ ಪಖಾರ(ಹಿಂದಿ), ದಿ ಪ್ರೆಸ್ ಆಫ್ ಫ್ರೀ(ಇಂಗ್ಲಿಷ್), ಟೇಕ್ ಆಫ್(ಮಲಯಾಳಂ), ಡಿ.12 ರಂದು ಕಾವಿ(ಹಿಂದಿ), ಮಿಟ್ಟೀ ಮಾನಸ್(ಹಿಂದಿ), ಉಲ್ಗುಲನ್ ಏಕ್ ಕ್ರಾಂತಿ(ಹಿಂದಿ), ಡಿ.13 ರಂದು ಗೌರ್ ಇನ್ ಮೈ ಗಾರ್ಡನ್(ಇಂಗ್ಲಿಷ್), ಝುರಿಯಾ (ಹಿಂದಿ), ದಿ ಸ್ಟೋರಿ ಆಫ್ ಜೆಲ್ಲಿ ಕಟ್ಟು(ಇಂಗ್ಲಿಷ್), ಸೀಡ್ಸ್ ಆಫ್ ಲೈಫ್(ಇಂಗ್ಲಿಷ್), ಮೆರ್ಕು ತೊಡರ್ಚಿ ಮಲೈ(ತಮಿಳು), ಡಿ.14 ರಂದು ಫಿಡ್ಲರ್ ಆನ್ ದಿ ತ್ಯಾಚ್(ಇಂಗ್ಲಿಷ್), ಮೈಸೂರು ಮಂಜುನಾಥ್(ಕನ್ನಡ), ರಾಷ್ಟ್ರಕವಿ ಕುವೆಂಪು: ಬದುಕು ಬರಹ(ಕನ್ನಡ), ಉಸ್ತಾದ್ ಬಿಸ್ಮಿಲ್ಲಾ ಖಾನ್ (ಹಿಂದಿ), ದೋ ಆಂಖೇ ಬಾರಾ ಹಾತ್(ಹಿಂದಿ), ಡಿ.15 ರಂದು ಕೊರಲ್ ವುಮೆನ್(ಇಂಗ್ಲಿಸ್), ದಿ ಸ್ಪಾರ್ಕ್ ಸೇವಿಯರ್ಸ್(ಇಂಗ್ಲಿಷ್), ಟಿಂಬಕ್ಟು(ಇಂಗ್ಲಿಷ್), ಗಂಧಗುಡಿ(ಕನ್ನಡ) ಸಿನಿಮಾ ಪ್ರದರ್ಶನವಾಗಲಿದೆ.



ಬುಲೆಟಿನ್: ಪ್ರತಿ ಬಹುರೂಪಿಯಲ್ಲಿ ಹೊರತರುವ ಬುಲೆಟಿನ್ ಎಂಬ ನಾಲ್ಕಾರು ಪುಟಗಳ ಪತ್ರಿಕೆ ಈ ಬಾರಿಯ ಉತ್ಸವದಲ್ಲೂ ಪ್ರಕಟವಾಗಲಿದೆ. ಇದಕ್ಕಾಗಿ ಕಾವಾ ವಿದ್ಯಾರ್ಥಿಗಳಾದ ಮನಸ್ವಿ, ಸುರಭಿ, ಶಿವರಾಜ್, ಜನನಿ ಹಾಗೂ ಸಾಕ್ಷಿ ದುಡಿಯುತ್ತಿದ್ದಾರೆ. ಇವರಿಗೆ ರಂಗಾಯಣದ ರೆಪರ್ಟರಿ ಕಲಾವಿದರಾದ ಮಹೇಂದ್ರ, ತೀರ್ಥೇಶ್, ಅನಿಲ್, ಅಮಿತ್ ಹಾಗೂ ನಂದನ್ ಕೈಜೋಡಿಸಲಿದ್ದಾರೆ. ಅವರು ಹೊರತರುವ ಬುಲೆಟಿನ್ ಡಿ.10ರಂದು ಬಿಡುಗಡೆಗೊಳ್ಳಲಿದ್ದು, ಬಹುರೂಪಿ ಮುಗಿಯುವವರೆಗೂ ನಿತ್ಯ ಪ್ರಕಟವಾಗಲಿದೆ.

ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಅಡಿಗಲ್ಲಾದ 'ಜನಪದ ಉತ್ಸವ'ಕ್ಕೆ ಸಂಭ್ರಮದ ಚಾಲನೆ

●ಭಾರತೀಯತೆ ಬಿಂಬಿಸುವ ಕಲಾ ಪ್ರಕಾರಗಳಿಗೆ ಪುಷ್ಪಾರ್ಚನೆ ●ಡಾ.ಪಿ.ಕೆ.ರಾಜಶೇಖರ್ ಉದ್ಘಾಟನೆ



ಮನಸ್ಸಿಗೆ ಪುಳಕ ನೀಡಿದ ಕಂಸಾಳೆ–ಯಕ್ಷಗಾನ...

'ಬಹುರೂಪಿ ರಂಗೋತ್ಸವ'ದ 'ಜನಪದೋತ್ಸವ'ದಲ್ಲಿ ಮೊದಲ ದಿನ ಜಾನಪದ ಕಲಾಪ್ರಕಾರವಾದ ಕಂಸಾಳೆ ನೃತ್ಯ ಹಾಗೂ ಯಕ್ಷಗಾನ ನೃತ್ಯ ಪ್ರದರ್ಶನ ರಂಗಪ್ರೇಕ್ಷಕರ ಮನಸ್ಸಿಗೆ ಪುಳಕ ಭಾವ ನೀಡಿತು.

ಕಂಸಾಳೆ ಮಹದೇವ್ ಮತ್ತು ತಂಡ ಮಲೆ ಮಹದೇಶ್ವರನ ಭಕ್ತರಾದ ದೇವರಗುಡ್ಡರು ಬಳಸುವಂತಹ ವಿಶಿಷ್ಟ ಬಗೆಯ ಬೀಸು ಕಂಸಾಳೆ ನೃತ್ಯ ಪ್ರದರ್ಶನ ನೀಡಿದರು. ಕಂಸಾಳೆ ಬಾರಿಸುತ್ತಲೇ ಸಾಹಸ ಪ್ರದರ್ಶನ ನೀಡಿದ ಕಲಾವಿದರು ಅಪಾರ ಮೆಚ್ಚುಗೆಗೆ ಪಾತ್ರರಾದರು. ನಂತರ ಯಕ್ಷಗಾನ ಕಲಾವಿದ ಕೆರೆಮನೆ ಶಿವಾನಂದ ಹೆಗಡೆ ಮತ್ತು ತಂಡದವರಿಂದ 'ಪಂಚವಟಿ' ಯಕ್ಷಗಾನ ಪ್ರದರ್ಶನಗೊಂಡಿತು.





ಡಿ.10ಕ್ಕೆ ಅಧಿಕೃತ ಉದ್ಘಾಟನೆ..

'ಬಹುರೂಪಿ ರಾಷ್ಟ್ರೀಯ ರಂಗೋತ್ಸವ'ವನ್ನು ಡಿ.10 ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕೃತವಾಗಿ ಉದ್ಘಾಟಿಸಲಿದ್ದಾರೆ. ಅಂದು ಸಂಜೆ 5.30ಕ್ಕೆ ರಂಗಾಯಣದ ವನರಂಗದಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ರಂಗೋತ್ಸವದ ಪುಸ್ತಿಕೆ ಬಿಡುಗಡೆ ಮಾಡಿದರೆ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್‌ಕುಮಾರ್ ಬುಲೆಟಿನ್ ಬಿಡುಗಡೆ ಮಾಡಲಿದ್ದಾರೆ.

ಅರಿತವರನ್ನು ಮರೆತ ಫಲವೇ ನಕ್ಸಲಿಸಂ...

ಬಿ.ವಿ.ಕಾರಂತರು, ಗುಬ್ಬಿ ವೀರಣ್ಣ ಅವರ ಬಗ್ಗೆ ಮಾತನಾಡುವಾಗ ಗುಬ್ಬಿ ವೀರಣ್ಣ ಅರಿತವರು, ನಾವು ನುರಿತವರು ಎಂದಿದ್ದಾರೆ. ನುರಿತವರು ಹಾಗೂ ಅರಿತವರು ಎಂಬುದರ ನಡುವೆ ಬಹಳ ವ್ಯತ್ಯಾಸವಿದೆ. ನುರಿತವರು ಎಂದರೆ ಸ್ಕಾಲರ್‌ಗಳು. ಡಾಕ್ಟರೇಟ್ ಪಡೆದುಕೊಂಡು ಚೆನ್ನಾಗಿ ಸಂಪಾದನೆ ಮಾಡುವವರು. ಅರಿತವರೆಂದರೆ ಶಂಭುಹೆಗಡೆ, ಕೆರೆಮನೆ ಶಿವಾನಂದ ಹೆಗಡೆಯಂತಹ ಜಾನಪದ ಕಲಾವಿದರು. ಅರಿಯುವುದು ಮತ್ತು ನುರಿಯುವುದರ ನಡುವೆ ಜಾನಪದವಿದೆ. ಅರಿತವರು ಇಲ್ಲದಿದ್ದರೇ ನುರಿತವರು ಏನೂ ಅಲ್ಲ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅಭಿಪ್ರಾಯಿಸಿದರು.

ಸ್ವಾತಂತ್ರ್ಯ ಬಂದ ನಂತರ ಈ ನುರಿತವರ ಹಾವಳಿ ಶುರುವಾಯಿತು. ಅವರನ್ನು ಬುದ್ಧಿಜೀವಿಗಳು ಎಂತಲೂ ಕರೆಯಲಾಯಿತು. ಅವರು ತಮ್ಮನ್ನು ತಾವೇ ಪ್ರಗತಿಪರರು ಎಂದು ಕರೆದುಕೊಂಡರು. ಅವರೆಲ್ಲಾ ಸಾರಸಗಟಾಗಿ ಅಂದರೆ ಸ್ವಾತಂತ್ರ್ಯ ಬಂದ ನಂತರ ಯುನಿವರ್ಸಿಟಿಗಳಲ್ಲಿ ಅಮರಿಕೊಂಡು(ಸೇರಿಕೊಂಡು) ಅರಿತವರನ್ನು ಮರೆತರು. ಅರಿತವರನ್ನು ಮರೆತ ಫಲವೇ ಇವತ್ತು ನಕ್ಸಲಿಸಂ ಎಂಬುದು ಜಾಸ್ತಿಯಾಗಲು ಕಾರಣ. ಜೆಎನ್‌ಯು ವಿವಿಯಲ್ಲಿ ಆಜಾದಿ.. ಆಜಾದಿ... ತುಕುಡೆ.. ತುಕುಡೆ.. ಎಂಬುದು ಬಂತು ಎಂದು ವಿಷಾದಿಸಿದರು.

ಯುನಿವರ್ಸಿಟಿಗಳಲ್ಲಿ ಡಾಕ್ಟರೇಟ್‌ಗಾಗಿ 30 ವರ್ಷದಿಂದ ಇರುವವರಿದ್ದಾರಂತೆ. ಒಬ್ಬ ಇದ್ದರೆ ಅವನ ಜೊತೆ ಹತ್ತು ಮಂದಿ ಊಟ ಮಾಡುವವರಿರುತ್ತಾರೆ. ಕೇಳಿದರೆ ಬೇರೆ ಬೇರೆ ಅಸ್ತ್ರಗಳನ್ನು ಪ್ರಯೋಗಿಸುತ್ತಾರೆ. ಎಲ್ಲರೂ ಅಲ್ಲ. ಆದರೆ ಅಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಭಾರತೀಯ ಪರಂಪರೆಯನ್ನು ನಾಶಮಾಡಿ, ವಿದೇಶಿ ಪರಂಪರೆಯೇ ಶ್ರೇಷ್ಠ ಎಂದು ನೆಚ್ಚಿಕೊಂಡು ಅದನ್ನೇ ಪಾಠಮಾಡಿ, ಅಸತ್ಯವನ್ನು ಸತ್ಯವೆಂದು ಬೋಧಿಸಿ ನಮ್ಮ ವೀರ ಭಾರತೀಯ ಪರಂಪರೆಯನ್ನು ನಾಶಗೊಳಿಸಿ ನಮ್ಮನ್ನು ಏಡಿಗಳನ್ನಾಗಿ ಮಾಡಿದ್ದಾರಲ್ಲಾ... ಅದಕ್ಕೆ ದುಃಖವಾಗುತ್ತದೆ. ಅದಕ್ಕಾಗಿಯೇ ನಾವು 'ಭಾರತೀಯತೆ' ಎಂಬ ಪರಿಕಲ್ಪನೆ ಕಟ್ಟಿದ್ದೇವೆ. ನಮ್ಮ ಮಕ್ಕಳಿಗೆ ಪದೇ ಪದೇ ನಮ್ಮ ಇತಿಹಾಸ ನೆನಪಾಗಬೇಕು. ನಮ್ಮ ಸಂಸ್ಕೃತಿ, ಪರಂಪರೆ, ಜನಪದರು ನೆನಪಾಗಬೇಕು ಎಂದು ಹೇಳಿದರು.

ಮೈಸೂರು,ಡಿ.8(ಎಂಕೆ)–'ಭಾರತೀಯತೆ' ಪ್ರತಿಬಿಂಬಿಸಲು ಸಜ್ಜಾಗಿರುವ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ'ದ ಮೊದಲ ಅಡಿಗಲ್ಲಾದ 'ಜನಪದೋತ್ಸವ'ಕ್ಕೆ ಗುರುವಾರ ಚಾಲನೆ ದೊರೆಯಿತು.

ರಂಗಾಯಣದ ವನರಂಗದಲ್ಲಿ ರಾಷ್ಟ್ರಪಕ್ಷಿ ನವಿಲಿನಂತೆಯೇ ವಸ್ತ್ರತೊಟ್ಟು, ಕುಣಿದು ಭಾರತೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಅನಾವರಣಗೊಳಿಸಿದ ಕಲಾವಿದನ(ನವಿಲು)ಗರಿಗಳಲ್ಲಿದ್ದ 'ಭಾರತೀಯತೆ'ಯ ವಿವಿಧ ಕಲೆಗಳಿಗೆ ಬಣ್ಣ ಬಣ್ಣದ ಹೂಗಳಿಂದ ಪುಷ್ಪಾರ್ಚನೆ ಮಾಡುವ ಮೂಲಕ ಜಾನಪದ ವಿದ್ವಾಂಸ ಡಾ.ಪಿ.ಕೆ. ರಾಜಶೇಖರ್ 'ಜನಪದೋತ್ಸವ'ಕ್ಕೆ ಚಾಲನೆ ನೀಡಿದರು.

ಬಳಿಕ ನೆರೆದಿದ್ದ ನೂರಾರು ಕಲಾಸಕ್ತರನ್ನುದ್ದೇಶಿಸಿ ಮಾತನಾಡಿದ ಅವರು, ಗ್ರಾಮೀಣ ಸೊಗಡಿನ ಸತ್ವವಿರುವ ಜಾನಪದ ಕಲಾ ಪ್ರಕಾರಗಳು ಉಳಿದು–ಬೆಳೆಯಬೇಕಾದರೆ ನಮ್ಮ ಯುವಕ–ಯುವತಿಯರಿಗೆ ಕಡ್ಡಾಯವಾಗಿ ಕಲಿಸಬೇಕು. ಜಾನಪದ ಕೂಡು ಕುಟುಂಬದಂತೆ. ಕೂಡು ಕುಟುಂಬದಲ್ಲಿ ಎಲ್ಲರೂ ಒಟ್ಟಾಗಿ, ಪ್ರೀತಿ ಹಂಚುವಂತೆ ಜನಪದ ಕಲೆ ಎಲ್ಲರನ್ನು ಒಂದಾಗಿಸುತ್ತದೆ ಎಂದರು.

ದೇಶದ ಎಲ್ಲ ಸಂಸ್ಕೃತಿಯ ಮೂಲ ಜಾನಪದ. ಈ ಮಾತೃ ಸಂಸ್ಕೃತಿಯು ಸಾವಿರಾರು ವರ್ಷಗಳಿಂದ ನಮಗೆ ಕೊಡುಗೆಯಾಗಿ ಬಂದಿದೆ. ಪರಂಪರೆಯ ಅದ್ಭುತ ಸಾಹಿತ್ಯವನ್ನು ಜನಪದರು ಹೃದಯದಲ್ಲಿ ಇಟ್ಟುಕೊಂಡಿದ್ದಾರೆ. ಜನಪದರು ಅನಕ್ಷರಸ್ಥರಾದರು ಹಾಡುಗಳ ಮೂಲಕ ಮಹಾ ಕಾವ್ಯಗಳನ್ನು ನೆನಪಿನಲ್ಲಿರಿಸಿಕೊಂಡಿದ್ದಾರೆ ಎಂದು ನುಡಿದರು.

ಆಧುನಿಕ ಕಾಲಘಟ್ಟದಲ್ಲಿರುವ ನಾವು ಮೂಲಧಾಟಿಯಲ್ಲೇ ಜಾನಪದ ಕಾವ್ಯಗಳನ್ನು ಹಾಡಬೇಕು. ಜನಪದ ನಾಡಪದ ಹಳ್ಳಿಯಲ್ಲಿ ಮಾತ್ರವಿದೆ ಎಂದುಕೊಳ್ಳುವುದು ತಪ್ಪು. ನಗರದಲ್ಲೂ ಇದೆ ಎಂದ ಅವರು, ಹಳ್ಳಿಗಳಲ್ಲಿ ಮಾತ್ರ ಕಜ್ಜಾಯ ಮಾಡುತ್ತಾರೆಯೇ ಎಂದು ಹಾಸ್ಯ ಚಟಾಕಿ ಹಾರಿಸಿದರಲ್ಲದೆ ಜಾನಪದ ಕಲೆಯನ್ನು ಕಲಿಯಿರಿ, ನಿಮ್ಮ ಊರಿಗೆ ತೆಗೆದುಕೊಂಡು ಹೋಗಿ ನಿಮ್ಮವರಿಗೂ ಕಲಿಸಿರಿ ಎಂದು ಮನವಿ ಮಾಡಿದರು.

ಮಕ್ಕಳು ಉನ್ನತ ವಿದ್ಯಾಭ್ಯಾಸ ಮಾಡಿ, ಹಲವು ಭಾಷೆಗಳನ್ನು ಕಲಿತಿದ್ದರೂ ನಮ್ಮ ಕಲೆಗಳನ್ನು ಕಲಿಯದೆ ಬೇರೆ ದೇಶದ ವಿಚಾರಗಳನ್ನೇ ಗಮನಿಸುತ್ತಿದ್ದರೆ ಅವರು, ಪರಕೀಯರಾಗಿ ಪರದೇಶಿಯರಾಗುತ್ತಾರೆ. ಅವರು ನಮ್ಮ ಜನರೇ ಆಗಿರಬೇಕು, ನಮ್ಮ ಸಂಸ್ಕೃತಿಯನ್ನೆ ಉಳಿಸಿಕೊಳ್ಳಬೇಕು ಎಂಬ ಪರಂಪರೆಯನ್ನು ಜಾನಪದ ಕೊಡುವ ರೀತಿಯಲ್ಲಿ ಬೇರೆ ಯಾವ ನಾಗರಿಕ ಸಂಸ್ಕೃತಿಯೂ ನೀಡುವುದಿಲ್ಲ.

ಭಾರತವೆಂದರೆ ನಮ್ಮ ತಾಯಿ: ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮಾತನಾಡಿ, ಭಾರತವೆಂದರೆ ಬರೀ ನೆಲವಲ್ಲ. 60X40 ಸೈಟಲ್ಲಾ. ಇದು ನಮ್ಮ ತಾಯಿ. ನಮ್ಮ ದೇಶವನ್ನು ಸ್ವಚ್ಛವಾಗಿಡುವುದು, ಸಂಸ್ಕೃತಿ ಪರಂಪರೆಯನ್ನು ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದ ಅವರು, ನವಿಲು ನಮ್ಮ ರಾಷ್ಟ್ರಪಕ್ಷಿ. ನವಿಲು ನೃತ್ಯದ ಸಂಕೇತ. ನೃತ್ಯವೆಂದರೆ ನಾಟ್ಯ. ನಾಟ್ಯವೆಂದರೆ ನಾಟಕ–ರಂಗಭೂಮಿ. ನವಿಲಿಗೂ ರಂಗಾಯಣಕ್ಕೂ ಅವಿನಾಭಾವ ಸಂಬಂಧವಿದೆ. ನವಿಲಿನೊಳಗೆ ಭಾರತೀಯ ಪರಂಪರೆ ತುಂಬಿಕೊಂಡಿದೆ ಎಂಬ ಪರಿಕಲ್ಪನೆಯಲ್ಲಿ ಬಹುರೂಪಿಯಲ್ಲಿ ಭಾರತೀಯತೆ ಪರಿಕಲ್ಪನೆಯನ್ನು ನವಿಲಿನಂತೆ ವಿನ್ಯಾಸಗೊಳಿಸಿದ್ದೇವೆ ಎಂದರು. ಯಕ್ಷಗಾನ ಹಿರಿಯ ಕಲಾವಿದ ಕೆರೆಮನೆ ಶಿವಾನಂದ ಹೆಗಡೆ, ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ, ಜನಪದೋತ್ಸವದ ಸಂಚಾಲಕಿ ಗೀತಾ ಮೋಂಟಡ್ಕ, ರಂಗೋತ್ಸವದ ಸಂಚಾಲಕ ಜಗದೀಶ್ ಮನೆವಾರ್ತೆ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ
ಶುಕ್ರವಾರ 9-12-2022
ಬೆಳ್ಳಿ ಬೆಳಕು

ಈ ವಾರ 'ಹೊಸ ದಿನಚರಿ' ಬರೆಯುವವರು

ಕೀರ್ತಿಶೇಖರ್ ಹಾಗೂ ವೈಶಾಖ್ ಪುಷ್ಪಲತಾ ಅವರ ನಿರ್ದೇಶನದ 'ಹೊಸ ದಿನಚರಿ' ಈ ವಾರ ತೆರೆ ಕಾಣುತ್ತಿದೆ. ಗಂಗಾಧರ ಸಾಲಿಮಠ್, ಮೃತ್ಯುಂಜಯ ಶುಕ್ಲ ಹಾಗೂ ಅಲೋಕ್ ಚೌರಾಸಿಯಾ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಬಾಬು ಹಿರಣ್ಣಯ್ಯ, ಅರುಣಾ ಬಾಲರಾಜ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರದಲ್ಲಿ ಮನುಷ್ಯನ ಜೀವನದಲ್ಲಿ ಬರುವ ಪ್ರೀತಿ ಮತ್ತು ಅದರ ಆಯಾಮಗಳ ಪ್ರಾಮುಖ್ಯತೆಯನ್ನು ಹೇಳುವ ಪ್ರಯತ್ನ ಮಾಡಲಾಗಿದೆ. ವಿವಿಧ ವಯೋಮಾನಗಳಲ್ಲಿ ಹುಟ್ಟುವ ಪ್ರೀತಿಯನ್ನು ಹೇಳುವ ಈ ಚಿತ್ರದಲ್ಲಿ 4 ವಿಭಿನ್ನ ಕಥಾಹಂದರಗಳಿವೆ. ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರ ತಂಡ ಕೆಲ ವಿಷಯಗಳನ್ನು ಹಂಚಿಕೊಂಡಿತು. ನಿರ್ಮಾಪಕ ಗಂಗಾಧರ್ ಸಾಲಿಮಠ ಮಾತನಾಡಿ ಹಿಂದೆ 'ಆಯನ್' ಎಂಬ ಚಿತ್ರ ನಿರ್ದೇಶಿಸಿದ್ದೆ. ಈ ಕಥೆಯ ಬಗ್ಗೆ ಉಳಿದಿಬ್ಬರು ನಿರ್ಮಾಪಕರ ಬಳಿ ಹೇಳಿದಾಗ, ಅವರು ಹಣ ಹಾಕಲು ಮುಂದೆ ಬಂದರು. ಹೀಗೆ ಪ್ರಾರಂಭವಾದ ಚಿತ್ರವೀಗ ಬಿಡುಗಡೆಯ ಹಂತ ತಲುಪಿದೆ ಎಂದರು.

ನಿರ್ದೇಶಕರಾದ ಕೀರ್ತಿಶೇಖರ್ ಹಾಗೂ ವೈಶಾಖ್ ಪುಷ್ಪಲತಾ ಮಾತನಾಡುತ್ತಾ, ನಮ್ಮ ಚಿತ್ರದಲ್ಲಿ ಪ್ರೀತಿಯ ನಾಲ್ಕು ಆಯಾಮಗಳನ್ನು ತೋರಿಸಿದ್ದೇವೆ. ಎಲ್ಲರ ಜೀವನದಲ್ಲೂ ಪ್ರೀತಿ ಅನ್ನೋದು ಇದ್ದೇ ಇರುತ್ತದೆ. ಆದರೆ ಅದು ಕೊನೆಯತನಕ ಉಳಿಯುತ್ತಾ? ಹಾಗಾದರೆ ಕೊನೆಯವರೆಗೆ ನಮ್ಮ ಜೊತೆ ಇರುವವರು ಯಾರು? ಎಂಬುದನ್ನು ಹೊಸ ದಿನಚರಿಯಲ್ಲಿ ಹೇಳಿದ್ದೇವೆ ಎಂದು ಹೇಳಿದರು. ಉಳಿದ ನಿರ್ಮಾಪಕರಾದ ಮೃತ್ಯುಂಜಯ ಶುಕ್ಲ ಹಾಗೂ ಅಲೋಹ ಚೌರಾಸಿಯಾ ಮಾತನಾಡಿ ಈಗಾಗಲೇ ನಾವು ಹಿಂದಿಯಲ್ಲಿ ವೆಬ್‌ಸೀರಿಸ್ ನಿರ್ಮಿಸುತ್ತಿದ್ದೇವೆ. ಮುಂದಿನ ವರ್ಷ ಕನ್ನಡ ಹಾಗೂ ಹಿಂದಿಯಲ್ಲಿ ಮತ್ತೊಂದು ಚಿತ್ರವನ್ನು ನಿರ್ಮಿಸುತ್ತೇವೆ ಎಂದು ಹೇಳಿದರು. ಹೊಸ ತಂಡದ ಜೊತೆ ಸಿನಿಮಾ ಮಾಡಿದ್ದು ಖುಷಿಯಾಗಿದೆ. ಹೊಸ ದಿನಚರಿ ಚಿತ್ರದ ನಿರೂಪಣೆಯೇ ತುಂಬಾ ಚೆನ್ನಾಗಿದೆ ಎಂದರು.





'ಮಾಂಕ್ ದಿ ಯಂಗ್' ಕಣ್ಗಳ ಹಾಡು

ಮಾಸ್ಚಿತ್ ಸೂರ್ಯ ಅವರ ನಿರ್ದೇಶನದ ವಿಂಟೇಜ್, ಫ್ಯಾಂಟಸಿ ಥ್ರಿಲ್ಲರ್ "ಮಾಂಕ್ ದಿ ಯಂಗ್" ಚಿತ್ರದ ಕಣ್ ಗಳೆ ಸೋತು ಎಂಬ ಹಾಡನ್ನು ಫಿಲಂ ಚೇಂಬರ್ ಅಧ್ಯಕ್ಷ ಭಾ.ಮಾ.ಹರೀಶ್ ಬಿಡುಗಡೆ ಮಾಡಿ ಶುಭ ಹಾರೈಸಿದರು.

ಸುಪ್ರೀತ್ ಫಾಲ್ಗುಣ ಅವರ ಸಂಗೀತ ನಿರ್ದೇಶನವಿರುವ ಈ ಹಾಡಿಗೆ ಐಶ್ವರ್ಯ ರಂಗರಾಜನ್ ದನಿಯಾಗಿದ್ದಾರೆ. ನಮ್ಮ ಚಿತ್ರದಲ್ಲಿ ಎರಡು ಹಾಡುಗಳಿದ್ದು, ಅಶ್ವಿನ್ ಶಾನ್ ಭಾಗ್ ಬರೆದಿದ್ದಾರೆ. ಗಾಯಕಿಯರಾದ ಐಶ್ವರ್ಯ ರಂಗರಾಜನ್ ಹಾಗೂ ಸಾದ್ವಿನಿ ಕೊಪ್ಪ ಈ ಹಾಡುಗಳನ್ನು ಹಾಡಿದ್ದಾರೆ ಎಂದು ಸಂಗೀತ ನಿರ್ದೇಶಕ ಸುಪ್ರೀತ್ ಫಾಲ್ಗುಣ ಮಾಹಿತಿ ನೀಡಿದರು. ಕನ್ನಡದಲ್ಲಿ ಹಾಲಿವುಡ್ ಶೈಲಿಯ ಚಿತ್ರವೊಂದನ್ನು ಮಾಡಬೇಕೆಂದು ವಿಂಟೇಜ್, ಫ್ಯಾಂಟಸಿ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರ ನಿರ್ಮಿಸಿದ್ದೇವೆ. ಸಿನಿಮಾ ತುಂಬಾ ಚೆನ್ನಾಗಿ ಮೂಡಿಬಂದಿದೆ ಹಾಡುಗಳಂತೂ ಅದ್ಭುತವಾಗಿದೆ ಎಂದು ನಿರ್ದೇಶಕ ಮಾಸ್ಚಿತ್ ಸೂರ್ಯ ಹೇಳಿದರು. ನಾಯಕ ಸರೋವರ್, ನಾಯಕಿ ಸೌಂದರ್ಯ ಗೌಡ, ನಟಿ ಉಷಾ ಭಂಡಾರಿ ತಮ್ಮ ಪಾತ್ರದ ಬಗ್ಗೆ ಮಾತನಾಡಿದರು.

ನಿವೃತ್ತ ಆರ್ಮಿ ಆಫೀಸರ್ ರಾಜೇಂದ್ರನ್, ವಿನಯ್ ಬಾಬು ರೆಡ್ಡಿ ಶೆಟ್ಟಿಹಳ್ಳಿ, ಸರೋವರ್, ಗೋಪಿಚಂದ್, ಲಾಲ್ ಚಂದ್ ಖತಾರ್ ಐದು ಜನ ಸೇರಿ "ಮಾಂಕ್ ದಿ ಯಂಗ್" ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಛಾಯಾಗ್ರಾಹಕ ಕಾರ್ತಿಕ್ ಶರ್ಮ, ನೃತ್ಯ ನಿರ್ದೇಶಕ ಹರ್ಷವರ್ಧನ್ ಸೇರಿದಂತೆ ಅನೇಕ ಚಿತ್ರತಂಡದ ಸದಸ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಕ್ಷೇಮಗಿರಿಯಲ್ಲಿ 'ಕರ್‌ನಾಟಕ' ಮಾನವನ ಅಂತರಾಳ ಹೇಳುವ ಚಿತ್ರ

ಫ್ಯಾಂಟಸಿ ಡ್ರಾಮಾ ಜೊತೆಗೆ ವಿಭಿನ್ನ ನಿರೂಪಣೆ ಇರುವ ಚಿತ್ರ ಕ್ಷೇಮಗಿರಿಯಲ್ಲಿ 'ಕರ್‌ನಾಟಕ' ಇಂದು ರಾಜ್ಯಾದ್ಯಂತ ಬಿಡುಗಡೆಯಾಗಿದೆ. ಈ ಚಿತ್ರದ ಟ್ರೈಲರ್ ಬಿಡುಗಡೆ ಹಾಗೂ ಪತ್ರಿಕಾಗೋಷ್ಠಿ ಇತ್ತೀಚೆಗೆ ನೆರವೇರಿತು. ಈ ಚಿತ್ರದ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಜಾನ್‌ಪೀಟರ್ ರಾಜಣ್ಣ ಅವರು ಸೈಕಾಲಜಿಯಲ್ಲಿ ಮಾಸ್ಟರ್ ಮುಗಿಸಿ, ಯೂರೋಪ್‌ನ ಪ್ರಾಗ್ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆದು ಮೊದಲ ಬಾರಿಗೆ ಆಕ್ಷನ್‌ಕಟ್ ಹೇಳಿರುವ ಚಿತ್ರವಿದು. ಈ ಚಿತ್ರಕ್ಕೆ ಶ್ರೀಮತಿ ಮೈಕಲ್‌ರಾಣಿ ಅವರು ಬಂಡವಾಳ ಹೂಡಿದ್ದಾರೆ.

ಈ ಸಂದರ್ಭದಲ್ಲಿ ಕ್ಷೇಮಗಿರಿಯಲ್ಲಿ 'ಕರ್‌ನಾಟಕ' ಚಿತ್ರದ ಶೀರ್ಷಿಕೆ ಹಾಗೂ ಕಥೆಯ ವಿಶೇಷತೆ ಕುರಿತು ಮಾತನಾಡಿದ ನಿರ್ದೇಶಕ ಜಾನ್ ಪೀಟರ್ ರಾಜಣ್ಣ, ನಮ್ಮ ಚಿತ್ರದಲ್ಲಿ ಕ್ಷೇಮಗಿರಿ ಎನ್ನುವುದು ಒಂದು ಊರಿನ ಹೆಸರು. ಅಲ್ಲದೆ ಚಿತ್ರದ ಟೀಸರ್‌ನಲ್ಲಿ ಆರು ಜನ ಅಸುರರನ್ನು ತೋರಿಸಿದ್ದೇವೆ, ಅದು ಯಾರು ಏಕೆ ಎನ್ನುವುದು ಚಿತ್ರದಲ್ಲಿ ಅನಾವರಣವಾಗುತ್ತದೆ. ಈ ಚಿತ್ರದ ಮೂಲಕ ಒಬ್ಬ ಮನುಷ್ಯನ ಅಂತರಾಳವನ್ನು ಎಕ್ಸ್‌ಪ್ಲೋರ್ ಮಾಡಿದ್ದೇವೆ. ಉಡುಪಿಯ ಎಂವಿಜೆ ಕಾಲೇಜ್ ಹಾಗೂ ಕರಾವಳಿಯ ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಾಗಿದ್ದು, ಒಬ್ಬ ಮನುಷ್ಯನನ್ನು ನಾವು ಹೇಗೇಗೆಲ್ಲ ಅರ್ಥಮಾಡಿಕೊಳ್ಳಬಹುದು ಎಂಬುದನ್ನು ಕೂಡ ಚಿತ್ರದಲ್ಲಿ ಹೇಳಲಾಗಿದೆ. ವಿಶೇಷವಾಗಿ ನಮ್ಮ ಚಿತ್ರದಲ್ಲಿ ಒಟ್ಟು ಹತ್ತು ಹಾಡುಗಳಿದ್ದು, ಹೆಸರಾಂತ ಸಂಗೀತ ನಿರ್ದೇಶಕ ರವಿಶಂಕರ್ ಗುಂಡ್ಮಿ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಜೊತೆಗೆ ಚಿತ್ರದ ಹಿನ್ನೆಲೆ ಸಂಗೀತವನ್ನು ವಿ.ಮನೋಹರ್ ನಿರ್ವಹಿಸಿದ್ದಾರೆ. ಕನ್ನಡದಲ್ಲಿ ಇಂಥ ಚಿತ್ರಗಳು ಬಂದಿಲ್ಲ, ಇದೊಂದು ವಿಶೇಷ ನಿರೂಪಣೆ ಇರುವ ಚಲನಚಿತ್ರ ಎಂದು ಹೇಳಿದರು. ಇನ್ನು ಈ ಚಿತ್ರಕ್ಕೆ ಗೋವಿಂದರಾಜು ಅವರ ಛಾಯಾಗ್ರಹಣವಿದ್ದು, ಸಿದ್ದರಾಜು ಸಂಕಲನ ನಿರ್ವಹಿಸಿದ್ದಾರೆ. ಪಿವಿಆರ್ ಪ್ರಸನ್ನ ಅವರು ಚಿತ್ರದ ವಿತರಣೆಯ ಜವಾಬ್ದಾರಿ ಹೊತ್ತಿದ್ದಾರೆ. ಜಗದೀಶ್, ಪುಟಾಣಿ ವಿನುತಾ ಸೇರಿದಂತೆ ಹಲವಾರು ಯುವ ಕಲಾವಿದರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಕಬೀರ್ ಬೇಡಿ 'ಕರಿಹೈದ ಕರಿ ಅಜ್ಜ'



ಖೂನ್‌ಭರೀ ಮಾಂಗ್, ಕುರ್ಬಾನ್, ಯಲ್ಗಾರ್, ಕಿಸ್ಮತ್‌ನಂಥ ಸೂಪರ್‌ಹಿಟ್ ಚಿತ್ರಗಳಲ್ಲಿ ನಟಿಸಿರುವ ಭಾರತ ಅಲ್ಲದೆ ಯೂರೋಪ್ ದೇಶಗಳಲ್ಲೂ ಗುರುತಿಸಿಕೊಂಡಿರುವ ನಟ ಕಬೀರ್‌ಬೇಡಿ ಮೊದಲ ಬಾರಿಗೆ ಕನ್ನಡ ಚಿತ್ರದಲ್ಲಿ ನಟಿಸುತ್ತಿದ್ದಾರೆ, ಅದೂ ಕರುನಾಡ ದೈವದ ಕುರಿತಾದ ಕಥೆಯಲ್ಲಿ ರಾಜನಾಗಿ ಬಣ್ಣ ಹಚ್ಚುತ್ತಿದ್ದಾರೆ. ತ್ರಿವಿಕ್ರಮ್ ಸಾಪಲ್ಯ ಅವರ ನಿರ್ಮಾಣದ, ಸುಧೀರ್ ಅತ್ತಾವರ್ ನಿರ್ದೇಶನದ 'ಕರಿಹೈದ ಕರಿ ಅಜ್ಜ' ಚಿತ್ರದಲ್ಲಿ ನಟ ಕಬೀರ್‌ಬೇಡಿ, ಶೃತಿ ಹಾಗೂ ಭವ್ಯ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಬೀರ್‌ಬೇಡಿ, ಕೊರಗಜ್ಜ ದೈವದ ಮಹಿಮೆ ಹೇಳುವ ಈ ಚಿತ್ರದಲ್ಲಿ ನಾನು ರಾಜನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ ಎಂದ ಅವರು, ಶೃತಿ, ಭವ್ಯ, ಭರತ್‌ಸೂರ್ಯ ಅವರ ಜೊತೆ ಅಭಿನಯಿಸಿದ ಅನುಭವವನ್ನು ಹಂಚಿಕೊಂಡರು. ಅಲ್ಲದೆ ಗಿರೀಶ್ ಕಾರ್ನಾಡ್‌ರ ಜೊತೆಗಿದ್ದ ತಮ್ಮ ಒಡನಾಟವನ್ನು ಇದೇ ವೇಳೆ ನೆನಪಿಸಿಕೊಂಡರು.

ಇತ್ತೀಚಿನ ಹಲವಾರು ವರ್ಷಗಳಿಂದ ಕೊರಗಜ್ಜನ ಮಹಿಮೆ ಮತ್ತು ಕಾರ್ಣಿಕವನ್ನು ತೆರೆಯ ಮೇಲೆ ತರಬೇಕೆಂದು ಹಲವಾರು ನಿರ್ಮಾಪಕ, ನಿರ್ದೇಶಕರು ಪ್ರಯತ್ನಿಸುತ್ತಿದ್ದರು. ಅದು ಕಾರ್ಯಗತವಾಗಿರಲಿಲ್ಲ. ಇದೀಗ ಸುಧೀರ್ ಅತ್ತಾವರ ಅವರು ಕೊರಗಜ್ಜನ ಜೀವನ ಕುರಿತು ಸಾಕಷ್ಟು ಮಾಹಿತಿಗಳನ್ನು ಕಲೆಹಾಕಿ, ಕೊರಗಜ್ಜನ ಜನರೊಂದಿಗೆ ಚರ್ಚಿಸಿ ಚಿತ್ರಕಥೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಸುಮಾರು 12ನೇ ಶತಮಾನದಲ್ಲಿದ್ದ ಕೊರಗಜ್ಜನ ನಿಜಬದುಕಿನಲ್ಲಿ ನಡೆದಂಥ, ಈವರೆಗೆ ಯಾರಿಗೂ ತಿಳಿದಿರದಂತಹ ಸಾಕಷ್ಟು ವಿಷಯಗಳನ್ನು ಈ ಚಿತ್ರದ ಮೂಲಕ ಹೇಳಲು ಪ್ರಯತ್ನಿಸಿದ್ದಾರೆ.

ನಿರ್ದೇಶಕ ಸುಧೀರ್ ಅತ್ತಾವರ್ ಮಾತನಾಡುತ್ತಾ, ಈಗಾಗಲೇ ಬಹುತೇಕ ಚಿತ್ರೀಕರಣವನ್ನು ಬೆಳ್ತಂಗಡಿ ಆಸುಪಾಸಿನಲ್ಲೇ ಮಾಡಿದ್ದೇವೆ. ನಿರ್ಮಾಪಕರ ಕುಟುಂಬದವರಿಗೆ ಕೊರಗಜ್ಜನ ಕುರಿತಾದ ಚಿತ್ರವನ್ನು ಮಾಡುವ ಹಂಬಲವಿತ್ತು. ಈ ಕಥೆಯನ್ನು ಮೆಚ್ಚಿದ ಅವರು ನಿರ್ಮಾಣಕ್ಕೆ ಮುಂದಾದರು. ಕೊರಗಜ್ಜನ ಜೀವನದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಕಲೆಹಾಕಿ, 12ನೇ ಶತಮಾನದಲ್ಲಿದ್ದ ಕೊರಗಜ್ಜನ ಬಗ್ಗೆ ಯಾರಿಗೂ ಗೊತ್ತಿರದ ಅವರ ನಿಜಬದುಕಿನ ವಿಷಯವನ್ನು ಈ ಚಿತ್ರದ ಮೂಲಕ ಹೇಳುತ್ತಿದ್ದೇವೆ. ಭರತ್‌ಸೂರ್ಯ ಅವರು ಕೊರಗಜ್ಜನ ಪಾತ್ರದಲ್ಲಿ ಕಾಣಿಸಿಕೊಳುತ್ತಿದ್ದಾರೆ. ಪವನ್ ಕುಮಾರ್ ಮತ್ತು ಗಣೇಶ್ ಕೆಳಮನೆ ಅವರ ಛಾಯಾಗ್ರಹಣ, ಸುಮೀರ್,ಕೃಷ್ಣರವಿ ಅವರ ಸಂಗೀತ ಚಿತ್ರಕ್ಕಿದೆ ಎಂದು ಮಾಹಿತಿ ನೀಡಿದರು.

ತನ್ವಿ ಪಿಕ್ಚರ್ಸ್ ನಿರ್ಮಾಣದಲ್ಲಿ ಹೇಬ್ರೋ ಹಾಡು




ಕನ್ನಡದಲ್ಲಿ ಸದಭಿರುಚಿಯ ಚಿತ್ರಗಳನ್ನು ನಿರ್ಮಿಸುವ ಆಶಯ ಇಟ್ಟುಕೊಂಡು ತನ್ವಿ ಪಿಕ್ಚರ್ಸ್ ಎಂಬ ಹೊಸ ನಿರ್ಮಾಣ ಸಂಸ್ಥೆಯೊಂದು ಹುಟ್ಟಿಕೊಂಡಿದ್ದು, ಅದರ ಮೊದಲ ಪ್ರಯತ್ನವಾಗಿ ಹೇಬ್ರೋ ಎಂಬ ಆಲ್ಬಮ್ ಹಾಡನ್ನು ಹೊರತಂದಿದೆ. ಚಿತ್ರರಂಗದ ಹಿರಿಯ ನಿರ್ಮಾಪಕರೆಲ್ಲ ಸೇರಿ ಈ ಸಂಸ್ಥೆಯ ಲೋಗೋ ಜೊತೆಗೆ ಆಲ್ಬಮ್ ಹಾಡನ್ನು ಬಿಡುಗಡೆಗೊಳಿಸಿದರು. ನಿರ್ಮಾಪಕರ ಪುತ್ರ ಸೂರಜ್ ಈ ಹಾಡಲ್ಲಿ ಅಭಿನಯಿಸಿದ್ದಾರೆ. ನಟ ನೀನಾಸಂ ಸತೀಶ್, ಧನ್ಯ ರಾಮಕುಮಾರ್, ಅನನ್ಯಶೆಟ್ಟಿ, ಶರಣ್ಯಶೆಟ್ಟಿ, ಅಲೋಕ್ ಹಾಗೂ ನಿರ್ದೇಶಕ ಮಹೇಶ್‌ಕುಮಾರ್, ಆನಂದ್ ಆಡಿಯೋ ಆನಂದ್ ಮುಖ್ಯ ಅತಿಥಿಗಳಾಗಿ ಅಗಮಿಸಿ ಸಂಸ್ಥೆಗೆ ಶುಭ ಕೋರಿದರು. ಯಾವುದಾದರೂ ಕೆಲಸ ಮಾಡಬೇಕೆನಿಸಿದಾಗ ಅದನ್ನು ತಕ್ಷಣ ಮಾಡಬೇಕು. ಅಂಥಾ ಛಲ ಇದ್ದರೆ ಖಂಡಿತ ಗೆಲುವು ಸಿಗುತ್ತದೆ. ಸೂರಜ್ ಅವರು ತನ್ವಿ ಪಿಕ್ಚರ್ಸ್ ಮೂಲಕ ಉತ್ತಮ ಚಿತ್ರಗಳನ್ನು ನಿರ್ಮಿಸಲಿ ಎಂದು ನೀನಾಸಂ ಸತೀಶ್ ಹಾರೈಸಿದರು. ನಟ ಪ್ರಮೋದ್, ಅಲೋಕ್ ಕೂಡ ಸೂರಜ್ ಮುಖೇಶ್‌ಗೆ ಶುಭ ಕೋರಿದರು.

ನಾನು ಹಾಸ್ಟೆಲ್‌ನಲ್ಲಿರುವಾಗ ಶೂಟಿಂಗ್ ನೋಡಿದ್ದೆ. ನಟ-ನಟಿಯರನ್ನು ನೋಡಲು ಸಾಕಷ್ಟು ಜನ ಅಲ್ಲಿ ಸೇರುತ್ತಿದ್ದರು. ಆಗಲೇ ನನಗೆ ಸಿನಿಮಾದಲ್ಲಿ ಅಭಿನಯಿಸಬೇಕೆಂದು ಆಸೆ ಹುಟ್ಟಿತು. ನನ್ನ ತಂದೆ, ತಾಯಿ ಇಂದು ನನ್ನ ಆಸೆಯನ್ನು ಈಡೇರಿಸಿದ್ದಾರೆ. ಮೊದಲ ಪ್ರಯತ್ನವಾಗಿ ಈ ಹಾಡಿನಲ್ಲಿ ಅಭಿನಯಿಸಿದ್ದೇನೆ. ಮುಂದೆ ಹಲವಾರು ಯೋಜನೆ ಹಾಕಿಕೊಂಡಿದ್ದೇವೆ ಎಂದು ಸೂರಜ್ ಮುಖೇಶ್ ಹೇಳಿದರು.

ನಮ್ಮ ಮಗಳ ಹೆಸರಾದ ತನ್ವಿ ಹೆಸರಲ್ಲೇ ನಮ್ಮ ಸಿನಿಮಾ ನಿರ್ಮಾಣ ಸಂಸ್ಥೆಯನ್ನು ಪ್ರಾರಂಭಿಸಿದ್ದೇವೆ. ಸದ್ಯದಲ್ಲೇ ಒಳ್ಳೆಯ ಕಥೆ ಇಟ್ಟುಕೊಂಡು, ಸಿನಿಮಾ ಮಾಡುವ ಯೋಜನೆಯಿದೆ ಎಂದು ನಿರ್ಮಾಪಕಿ ಸುಮಿತ್ರ ಮುಖೇಶ್ ಹೇಳಿದರು. ಹೇಬ್ರೋ ಹಾಡನ್ನು ರಿಕ್ಕಿಗೌತಮ್ ಅವರು ಬರೆದು, ನಿರ್ದೇಶನ ಮಾಡಿದ್ದಾರೆ.

ಸಿನಿಪದಬಂಧ-452

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________________

ವಿಳಾಸ ____________________

____

ದೂರವಾಣಿ ಸಂಖ್ಯೆ ____________________

ಎಡದಿಂದ ಬಲಕ್ಕೆ

1.ಬೆಂಕಿಯ ಕಣದ ನಡುವೆ ನುಸುಳಿದ ಜಗ್ಗೇಶ್ ಚಾಲಾಕಿ !	3
2.ಎಂ.ಪಿ.ಶಂಕರ್ ಗೌಪ್ಯತೆ ತಿಳಿಯಲು ಗೀತಪ್ರಿಯ ನಿರ್ದೇಶನವಿದೆ	6
5.ಈ ರೋಮಾಂಚನಕಾರಿ ಕ್ರೀಡೆ "ಪ್ರೇಕ್ಷಣ"ವಾಗಿದೆ	5
7.ಕುಮಾರ್ ಬಂಗಾರಪ್ಪ - ಶಿವರಂಜಿನಿ ಪ್ರೀತಿ ಚಿರವಾಗಿದೆ	5
9.ತುಂಬಿದ ಮನೆ ಚಿತ್ರದ ಬ್ಯಾಂಕ್ ಜನಾರ್ಧನ್ ಪಾತ್ರ ತಿರುಗಿದೆ	3
11.ಚಂದ್ರ - - -	3
12.ಮಾರುತದ ಹಿಂದಿನ ಪ್ರದೇಶ ಇಲ್ಲಿ ತಿರುಗಿದೆ	3
14.ಎರಡು ರಾಜ್ಯಗಳ ನಡುವಿನ ಬಾರ್ಡರ್ ಸಮಸ್ಯೆ	5
15.ರಿಯಲ್ ಸ್ಟಾರ್ ಉಪೇಂದ್ರನ "ಸೂಪರ್" ಹೀರೋಯಿನ್	5
16.ರಸಿಕ ಚಿತ್ರದ ಹಾಡನ್ನು ರಮ್ಯ ಗುನುಗಿದ್ದಾಳೆ	6
17.ಮೃದಂಗ ಬಾರಿಸಿದಾಗ ಬಂದ ಸಾವು	3

ಮೇಲಿನಿಂದ ಕೆಳಕ್ಕೆ

1.ಪೂರ್ಣಚಂದ್ರ ತೇಜಸ್ವಿ ಅವರ ಕಥೆಗೆ ಸುಮನಾ ಕಿತ್ತೂರು ನಿರ್ದೇಶನವಿದೆ	10
2.ಪೊಲೀಸ್ ಮತ್ತು ದಾದಾ ಕಥಾವಸ್ತು ಹೊಂದಿರುವ ವಿಷ್ಣುವಿನ ಮತ್ತೊಂದು ಚಿತ್ರ	3
3. ಬಿ.ಸಿ.ಪಾಟೀಲ್ ಸುತ್ತಮುತ್ತ ಹಳ್ಳಿಗಳ ಯಜಮಾನ	6
4." ಕಮಲ ನಯನ ಕಮಲ ವದನ - - - - - - - - - -	10
6.ಅಮರೀಶ್ ಪುರಿಯ ಅರಣ್ಯ	2
7.ಸೋನಾಲ್ ಮಾಂಟೆರೋ ಅಭಿನಯದ ಚಿತ್ರ ರೊಮ್ಯಾಂಟಿಕ್, ಹಾರರ್,ಥ್ರಿಲ್ ಹೊಂದಿದೆ	5
8.ರಮೇಶ್ - ಸುಧಾರಾಣಿ ಅಭಿನಯದಿ ನಾದ ಹೊಮ್ಮಿಸಿದ ಪ್ರೇಮಕಾವ್ಯ !	5
10.ಲೋಹದ ಹಕ್ಕಿ ಹೂವಿನಿಂದ ಅಲಂಕೃತ......	6
13.ಲಕ್ಷ್ಮಿಯೊಂದಿಗಿನ ಹಣ	2
15.26ನೇ ಸಂವತ್ಸರ ಇಲ್ಲಿ ತಲೆಕೆಳಗು	3

ವಿಜೇತರು: ರಿಜಿತಾ D/oನಂಜುಂಡಸ್ವಾಮಿ, ನಂ.50, ವಿಎನ್‌ಎಸ್ ದೇವಸ್ಥಾನದ ರಸ್ತೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ 571111

ಸಿನಿ ಪದಬಂಧ 451ರ ಸರಿ ಉತ್ತರ

ಅ	ಬ್ಬ	ರ		ಅ	ವ	ಳಿ	ಜ	ವ	ಳಿ	
ಳಿ				ಕಿ				ರ		ಪ
ಯ	ಮ	ಕಿಂ	ಕ	ರ		ಅಂ	ಜ	ದ	ಗಂ	ಡು
ಅ		ಗ್				ಗು		ನಾ		ವಾ
ಲ್ಲ				ಚಂ		ಲಿ		ಯ		ರ
ಮ	ಡಿ	ಕೆ		ಡಿ	ಗ	ಮಾ		ಕ	ಲ	ಹ
ಗ		ರ		ಚಾ		ಲ				ಳ್ಳಿ
ಳ		ಳಿ		ಮುಂ				ಭೂ		ಪಾಂ
ಗಂ	ಧ	ದ	ಗು	ಡಿ		ಸ	ಪ್ತ	ಮಿ	ಗೌ	ಡ
ಡ		ಸಿಂ				ರೋ				ವ
	ಮೋ	ಹ	ನ್	ಜು	ನೇ	ಜಾ		ಟ	ಗ	ರು

'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಟೆಲಿವಿಷನ್ ಕ್ರಿಕೆಟ್ ಲೀಗ್ ಟ್ರೋಫಿ ಬಿಡುಗಡೆ

ಟೆಲಿವಿಷನ್ ಕ್ರಿಕೆಟ್ ಲೀಗ್‌ನ 4ನೇ ಆವೃತ್ತಿ ಸದ್ಯದಲ್ಲೇ ಆರಂಭವಾಗಲಿದ್ದು ಈ ಕ್ರಿಕೆಟ್ ಪಂದ್ಯಾವಳಿಯ ಜರ್ಸಿ ಹಾಗೂ ಟ್ರೋಫಿ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ನಟ ನೀನಾಸಂ ಸತೀಶ್, ಹೊಂಬಾಳೆ ಸಂಸ್ಥೆಯ ಶೈಲಜಾ ವಿಜಯ್ ಕಿರಗಂದೂರು ಹಾಗೂ ಫಿಲಂ ಚೇಂಬರ್ ಅಧ್ಯಕ್ಷ ಭಾ.ಮಾ. ಹರೀಶ್ ಮುಖ್ಯ ಅತಿಥಿಗಳಾಗಿ ಆಗಮಿಸಿ ಟ್ರೋಫಿ ಅನಾವರಣಗೊಳಿಸಿದರು. ಕ್ರಿಕೆಟ್ ಲೀಗ್‌ನ ಫೌಂಡರ್ ದೀಪಕ್, ಕೋ-ಫೌಂಡರ್ ಮಂಜೇಶ್ ಮತ್ತು ದಿವ್ಯಪ್ರಸಾದ್ ಕೂಡ ಹಾಜರಿದ್ದರು.

ಈ ಸೀಸನ್‌ನಲ್ಲಿ ಭಾಗವಹಿಸಲಿರುವ 6 ತಂಡಗಳ ವಿವರ ಹೀಗಿದೆ. ಪ್ರೊವಿಟೇಲ್ ಹೆಲ್ತ್‌ನ ಡಾ॥ಶಿಲ್ಪ ಮಾಲೀಕತ್ವದ ರೋರಿಂಗ್ ಲಯನ್ಸ್ ತಂಡದ ನಾಯಕರಾಗಿ ಕಿರಿಕ್ ಕೀರ್ತಿ ಹಾಗೂ ಕಾರ್ತಿಕ್ ಮಹೇಶ್, ಡಾ॥ಚೇತನ ಮಾಲೀಕತ್ವದ ಜಟಾಯು ತಂಡದ ನಾಯಕನಾಗಿ ಹರ್ಷ ಸಿ.ಹೆಚ್. ಗೌಡ ಹಾಗೂ ಹರೀಶ್, ಸುಲಾನ್ ಮತ್ತು ಎಂ.ಆರ್.ಸ್ವಾಮಿ ಮಾಲೀಕತ್ವದ ಕ್ರೇಜಿ ಕಿಲ್ಲರ್ ತಂಡದ ನಾಯಕನಾಗಿ ಅರ್ಜುನ್ ಯೋಗಿ ಹಾಗೂ ಚೇತನ್ ವಿಕಾಸ್ ನೇಮಕಗೊಂಡಿದ್ದಾರೆ. ಶ್ರೀನಿ ಮಾಲೀಕತ್ವದ ಗ್ಯಾಂಗ್‌ಗರುಡಾಸ್ ತಂಡದ ನಾಯಕನಾಗಿ ಮಾ.ಆನಂದ್ ಹಾಗೂ ಕರಿಬಸವ ಇದ್ದರೆ, ತನಿಶಾ, ಪಲ್ಲವಿಗೌಡ ಹಾಗೂ ದ್ರವ್ಯಶೆಟ್ಟಿ ತಂಡದ ರಾಯಭಾರಿಗಳಾಗಿದ್ದಾರೆ. ಪ್ರಶಾಂತ್ ಹಾಗೂ ನಾಗಶ್ರೀ ಮಾಲೀಕತ್ವದ ಚಾಂಪಿಯನ್ ಚೀತಸ್ ತಂಡದ ನಾಯಕನಾಗಿ ಹೇಮಂತ್, ಹಾಗೂ ಮಂಜು ಪಾವಗಡ, ಕುಶಾಲ್‌ಗೌಡ ಮಾಲೀಕತ್ವದ ಗಜಪಡೆ ವಾರಿಯರ್ಸ್ ತಂಡದ ನಾಯಕನಾಗಿ ವಿವಾನ್ ಹಾಗೂ ಶ್ರೀರಾಮ್ ನೇಮಕಗೊಂಡಿದ್ದಾರೆ.

ಮೈಸೂರು ಮಿತ್ರ ಶುಕ್ರವಾರ 9 ಡಿಸೆಂಬರ್ 2022

ರಾಂಚಿಯಲ್ಲಿ ಕೊಡಗಿನ ಯೋಧ ಸಾವು



ಮಡಿಕೇರಿ, ಡಿ.8– ಅನಾರೋಗ್ಯದಿಂದ ಬಳಲುತ್ತಿದ್ದ ಯೋಧನೋರ್ವ ಸಾವನ್ನಪ್ಪಿರುವ ಘಟನೆ ಜಾರ್ಖಂಡ್‌ನ ರಾಂಚಿಯಲ್ಲಿ ಸಂಭವಿಸಿದೆ.

ಕಡಗದಾಳು ನಿವಾಸಿ ರಾಜಮ್ಮ ಎಂಬವರ ಪುತ್ರ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಯೋಧ ಕೆ.ಕೆ. ಶಿಜು (48) ಮೃತಪಟ್ಟ ಯೋಧ. ಕಳೆದ 23 ವರ್ಷಗಳಿಂದ ಸಿಐಎಸ್‌ಎಫ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದ ಶಿಜು ಅವರು ಕಳೆದೆರಡು ದಿನಗಳಿಂದ ಅನಾರೋಗ್ಯಕ್ಕೆ ತುತ್ತಾಗಿದ್ದು, ಗುರುವಾರ ವಿಧಿವಶರಾಗಿದ್ದಾರೆ. ಮೃತರು ತಾಯಿ, ಪತ್ನಿ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಯೋಧ ಶಿಜು ಅವರ ಮೃತದೇಹ ಶುಕ್ರವಾರ ಸಂಜೆ ವೇಳೆಗೆ ಸ್ವಗ್ರಾಮಕ್ಕೆ ಬರುವ ನಿರೀಕ್ಷೆ ಇದೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಕಡಗದಾಳುವಿನಲ್ಲಿ ನಡೆಯಲಿದೆ.

ಬಸ್–ಟೆಂಪೋ ನಡುವೆ ಡಿಕ್ಕಿ: ಚಾಲಕನ ರಕ್ಷಣೆ

ಮಡಿಕೇರಿ, ಡಿ.8– ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ತಾಳತ್ತಮನೆ ಸಮೀಪ ಖಾಸಗಿ ಬಸ್ ಮತ್ತು ಟೆಂಪೋ ನಡುವೆ ಡಿಕ್ಕಿ ಸಂಭವಿಸಿದೆ. ಇದರಿಂದ ಟೆಂಪೋದ ಮುಂಭಾಗ ಜಖಂ ಆಗಿದ್ದು, ಗಾಯಗೊಂಡ ಚಾಲಕ ಟೆಂಪೋದಲ್ಲೇ ಸಿಲುಕಿಕೊಂಡಿದ್ದ. ಬಸ್ ಪ್ರಯಾಣಿಕರು ಮತ್ತು ಸಾರ್ವಜನಿಕರು ಚಾಲಕನನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದು, ಆತ ಪ್ರಾಣಾಪಾಯದಿಂದ ಪಾರಾಗಿದ್ದಾನೆ.



ಗುರುವಾರ ಮಧ್ಯಾಹ್ನ ಈ ಘಟನೆ ನಡೆದಿದ್ದು, ಮಡಿಕೇರಿ ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಅಪಘಾತದಿಂದ ಸುಮಾರು 20 ನಿಮಿಷಗಳ ಕಾಲ ಹೆದ್ದಾರಿ ಸಂಚಾರ ಸ್ಥಗಿತವಾಗಿದ್ದ ಹಿನ್ನೆಲೆಯಲ್ಲಿ ಕಿ.ಮೀ.ವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಕುಶಾಲನಗರದಲ್ಲಿ ಸಂಭ್ರಮದ ಪುತ್ತರಿ ನಮ್ಮೆ ಆಚರಣೆ



ಕುಶಾಲನಗರ, ಡಿ.8– ಪಟ್ಟಣದ ಕೊಡವ ಸಮಾಜದ ವತಿಯಿಂದ ಬುಧವಾರ ರಾತ್ರಿ ಪುತ್ತರಿ ನಮ್ಮೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪಟ್ಟಣದಲ್ಲಿ ನೆಲೆಸಿರುವ ಕೊಡವ ಬಾಂಧವರು ತಮ್ಮ ಸಾಂಪ್ರದಾಯಿಕ ಉಡುಗೆ ತೊಟ್ಟು ಕೊಡವ ಸಮಾಜದಲ್ಲಿ ರಾತ್ರಿ 7.30ಕ್ಕೆ ಸೇರಿದರು. ಮೊದಲಿಗೆ ನೆಲ್ಲಕ್ಕಿಯಡಿಯಲ್ಲಿ ಗುರುಕಾರೋಣರು ಮತ್ತು ದೇವರಿಗೆ ಭಕ್ತಿ ಪೂರ್ವಕ ಪೂಜೆ ಸಲ್ಲಿಸಲಾಯಿತು. ನಂತರ ಅರಳಿ, ಮಾವು, ಹಲಸು, ಕುಂಬಳಿ ಹಾಗೂ ಗೇರು ಮರಗಳ ಎಲೆಗಳಿಂದ ನೆರೆಕಟ್ಟುವ ಮೂಲಕ ವಿಧಿವಿಧಾನ ನೆರವೇರಿಸಿದರು.

ನಂತರ ಸಿದ್ಧಪಡಿಸಿದ ಕುತ್ತಿಯನ್ನು ತೋಕ್ ಕತ್ತಿ, ದುಡಿಕೊಟ್ಟ್ ಪಾಟ್ ತಳಿಯತಕ್ಕಿ ಹಾಗೂ ಒಡ್ಡೋಲಗದೊಂದಿಗೆ ಗದ್ದೆಗೆ ಮೆರವಣಿಗೆ ಮೂಲಕ ತೆರಳಲಾಯಿತು. ಮೂರು ಸುತ್ತು ಕುಶಾಲತೋಪು ಸಿಡಿಸುವ ಮೂಲಕ ಸಮಾಜದ ಗದ್ದೆಯಲ್ಲಿ ಬಲ್ಲಾರಂಡ ಜಾಲಿ ತಮ್ಮಯ್ಯ ಅವರು ಪೂಜೆ ಸಲ್ಲಿಸಿ ಕದಿರು ತೆಗೆಯುವ ಮೂಲಕ ಸಾರ್ವತ್ರಿಕವಾಗಿ ಪುತ್ತರಿ ನಮ್ಮೆ ಆಚರಿಸಲಾಯಿತು. ಎಲ್ಲರೂ ಪೊಲಿ ಪೊಲಿ ದೇವ ಪೊಲಿಯೋ ಬಾ ಎಂದು ಘೋಷಣೆಯನ್ನು ಜೋರಾಗಿ ಕೂಗಿ ಹರ್ಷೋದ್ಗಾರ ಮಾಡಿದರು. ಈ ಸಂದರ್ಭ ಪಟಾಕಿ ಹಾಗೂ ಬಾಣ ಬಿರುಸುಗಳನ್ನು ಸಿಡಿಸಲಾಯಿತು. ನಂತರ ಧಾನ್ಯಲಕ್ಷ್ಮಿಯನ್ನು ಮೆರವಣಿಗೆ ಮೂಲಕ ತಂದು ಕದಿರನ್ನು ಇಟ್ಟು ಪೂಜೆ ಸಲ್ಲಿಸಿದರು. ಗದ್ದೆಯಲ್ಲಿನ ಕದಿರು ತೆಗೆದು ಎಲ್ಲರಿಗೂ ವ್ಯವಸ್ಥಿತವಾಗಿ ವಿತರಣೆ ಮಾಡಿ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋದರು.

ಈ ಸಂದರ್ಭ ಕೊಡವ ಸಮಾಜದ ಅಧ್ಯಕ್ಷ ಬೋಸ್ ಮೊಣ್ಣಪ್ಪ, ಉಪಾಧ್ಯಕ್ಷ ಪುಲಿಯಂಡ ಚಂಗಪ್ಪ, ಕಾರ್ಯದರ್ಶಿ ಮನು ನಂಜುಂಡ, ಜಂಟಿ ಕಾರ್ಯದರ್ಶಿ ಸೋಮಣ್ಣ, ನಿರ್ದೇಶಕರಾದ ತಿಮ್ಮಪ್ಪ ಮುದ್ದಪ್ಪ ಪೊನ್ನಣ್ಣನಂದ, ಪೊನ್ನಪ್ಪ ಉತ್ತಪ್ಪ ಸುಬ್ಬಯ್ಯ, ದಮಯಂತಿ, ಧರಣಿ ಸೋಮಣ್ಣ ಇತರರಿದ್ದರು.

ಜಾತಿ, ಆದಾಯ ಪತ್ರಗಳಲ್ಲಿ ಕೊಡಗರು ಬದಲು ಕೊಡವರು ಎಂದು ನಮೂದಿಸಿ

ಹಿಂದುಳಿದ ವರ್ಗಗಳ ಆಯೋಗ, ಸಮಾಜ ಕಲ್ಯಾಣ ಸಚಿವಾಲಯಕ್ಕೆ ಸಿಎನ್‌ಸಿ ಅಧ್ಯಕ್ಷ ಮನವಿ



ಮಡಿಕೇರಿ, ಡಿ.8– ಜಾತಿ ಮತ್ತು ಆದಾಯ ದೃಢೀಕರಣ ಪತ್ರಗಳಲ್ಲಿ ಕೊಡವರನ್ನು 'ಕೊಡಗರು' ಎಂದು ನಮೂದಿಸದೆ 'ಕೊಡವರು' ಎಂದು ಶಾಸ್ತ್ರೀಯವಾಗಿ ನಮೂದಿಸಲು ಕ್ರಮ ಕೈಗೊಳ್ಳಬೇಕೆಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು. ನಾಚಪ್ಪ ಅವರು, ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗಡೆ ಹಾಗೂ ಸಮಾಜ ಕಲ್ಯಾಣ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ತುಳಸಿ ಮದಿನೇನಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಬೆಂಗಳೂರಿನ ದೇವರಾಜ ಅರಸು ಭವನದಲ್ಲಿರುವ ಆಯೋಗದ ಕಚೇರಿಯಲ್ಲಿ ಜಯಪ್ರಕಾಶ ಹೆಗಡೆ ಹಾಗೂ ವಿಕಾಸ ಸೌಧದ ಕಚೇರಿಯಲ್ಲಿ ತುಳಸಿ ಮದಿನೇನಿ ಅವರನ್ನು ಭೇಟಿಯಾದ ನಾಚಪ್ಪ ಕೊಡವರ ಬೇಡಿಕೆಗಳ ಕುರಿತು ಚರ್ಚಿಸಿದರು.

ಸಿಎನ್‌ಸಿ ಬೇಡಿಕೆಯಂತೆ ಡಾ.ದ್ವಾರಕನಾಥ್ ಆಯೋಗದ ವರದಿಯು 'ಕೊಡವ' ಪದ ಬಳಕೆಗೆ ಶಿಫಾರಸ್ಸು ಮಾಡಿತ್ತು. ಅಲ್ಲದೆ ಉಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಗೆಜೆಟ್ ಅಧಿಸೂಚನೆಯ ಮೂಲಕ ಎಲ್ಲಾ ದಾಖಲೆಗಳಲ್ಲಿ ಕೊಡವ ಶಾಸ್ತ್ರೀಯ ಪದವನ್ನು ಅಳವಡಿಸುವ ಬಗ್ಗೆ ಪೂರಕ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಹೇಳಿದರು.

ಕೋರ್ಟ್ ಶಿಫಾರಸ್ಸಿನಂತೆ ಕೊಡವ ಪದ ಬಳಕೆಯ ಅನುಷ್ಠಾನ ತ್ವರಿತಗೊಳಿಸಬೇಕೆಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳನ್ನು ಒತ್ತಾಯಿಸಿದ್ದೇವೆ. ಪ್ರಕರಣದ ಗಂಭೀರತೆಯನ್ನು ಅರ್ಥ ಮಾಡಿಸಿ ಎಲ್ಲಾ ಆಡಳಿತಾತ್ಮಕ ಅನುಮತಿಗಳನ್ನು ಪ್ರಾರಂಭಿಸಲು ಮನವಿ ಮಾಡಿದ್ದೇವೆ. ಜಯಪ್ರಕಾಶ ಹೆಗಡೆ ಯಂತಹ ಪ್ರಾಮಾಣಿಕರ ಪ್ರಯತ್ನದ ಫಲವಾಗಿ ಪ್ರಕ್ರಿಯೆ ಅಂತಿಮ ಹಂತಕ್ಕೆ ಬಂದು ತಲುಪಿದೆ ಎಂದು ನಾಚಪ್ಪ ತಿಳಿಸಿದರು. ಶೀಘ್ರ ಉತ್ತಮ ಫಲಿತಾಂಶವನ್ನು ಪಡೆಯಲಿ ದ್ದೇವೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶಾಲಾ ಕಿಟ್ ವಿತರಣೆ



ವಿರಾಜಪೇಟೆ, ಡಿ.8– ಕಟ್ಟಡ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರಕಾರ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದು, ವಿದ್ಯಾರ್ಥಿಗಳು ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಕೆ.ಜಿ.ಬೋಪಯ್ಯ ತಿಳಿಸಿದರು.

ವಿರಾಜಪೇಟೆ ಶಾಸಕರ ಭವನದಲ್ಲಿ ಕಟ್ಟಡ ಮತ್ತು ಇತರ ನಿರ್ಮಾಣದ ಕಾರ್ಮಿಕರ ಬಡ ಮಕ್ಕಳಿಗೆ ಕಾರ್ಮಿಕ ಇಲಾಖೆಯಿಂದ ನೀಡಲಾಗಿದ್ದ ಶಾಲಾ ಕಿಟ್‌ಗಳನ್ನು ವಿತರಿಸಿ ಮಾತನಾಡಿದ ಅವರು, ಸರಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಬಡ ಮಕ್ಕಳು ಮುಂದೆ ಬರಬೇಕು. ಈ ಸೌಲಭ್ಯಗಳನ್ನು ಬಳಸಿಕೊಂಡು ಉನ್ನತ ಶಿಕ್ಷಣ ಪಡೆಯುವಂತಾಗಬೇಕು ಎಂದರು. ವಿದ್ಯಾರ್ಥಿಗಳಿಗೆ ಕಾರ್ಮಿಕ ಇಲಾಖೆಯ ಶಾಲಾ ಕಿಟ್ ವಿತರಣೆ ಸಂದರ್ಭ ವಿರಾಜ ಪೇಟೆಯ ಹಿರಿಯ ಕಾರ್ಮಿಕ ನಿರೀಕ್ಷಕ ಎಂ.ಸಿ.ಮಾದಪ್ಪ ಉಪಸ್ಥಿತರಿದ್ದು ಮಾತನಾಡಿದರು. ಕಾರ್ಮಿಕ ಕಛೇರಿಯ ಸಹಾಯಕ ಎಸ್.ನವಿನ್ ಹಾಗೂ ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

ಡಿ.18, ಕೊಡಗು ಪ್ರೆಸ್ ಕ್ಲಬ್ ಡೇ

ಮಡಿಕೇರಿ, ಡಿ.8– ಕೊಡಗು ಪ್ರೆಸ್ ಕ್ಲಬ್ 24ನೇ ವಾರ್ಷಿಕೋತ್ಸವ ಪ್ರಯುಕ್ತ ಡಿ.18 ರಂದು ಪತ್ರಿಕಾ ಭವನದಲ್ಲಿ ಕೊಡಗು ಪ್ರೆಸ್ ಕ್ಲಬ್ ಡೇ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 10.30 ಗಂಟೆಯಿಂದ ಕ್ಲಬ್ ಸದಸ್ಯರು, ಸದಸ್ಯರ ಕುಟುಂಬಸ್ಥರಿಗೆ ಮನರಂಜನಾ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಕ್ಲಬ್ ಪ್ರಧಾನ ಕಾರ್ಯದರ್ಶಿ ಕೆ.ಕೆ. ರೆಜಿತ್‌ಕುಮಾರ್ ಗುಹ್ಯ ತಿಳಿಸಿದ್ದಾರೆ.

ರಾಜ್ಯಮಟ್ಟಕ್ಕೆ ಆಯ್ಕೆ



ಸುಂಟಿಕೊಪ್ಪ, ಡಿ.8– ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಸ್ಪರ್ಧೆಯಲ್ಲಿ ಸುಂಟಿಕೊಪ್ಪ ಸಂತ ಮೇರಿ ಆಂಗ್ಲ ಮಾಧ್ಯಮ ಶಾಲೆ ಫೇಬಾ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. 8 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಸ್ಪರ್ಧೆಯಲ್ಲಿ ವಿದ್ಯಾರ್ಥಿನಿ ಫೇಬಾ ಗಝಲ್ ವಿಭಾಗದಲ್ಲಿ ಭಾಗವಹಿಸಿ ಜಿಲ್ಲೆಗೆ ಪ್ರಥಮ ಸ್ಥಾನವನ್ನು ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಯುವ ಪತ್ರಕರ್ತರಿಗೆ ತರಬೇತಿ ಅವಶ್ಯಕ: ಚುಂಚಶ್ರೀ



ಮಂಡ್ಯ, ಡಿ.8– ಪ್ರಸ್ತುತ ಯುವ ಪತ್ರಕರ್ತರಿಗೆ ಪತ್ರಿಕೋದ್ಯಮದ ತರಬೇತಿ ಅವಶ್ಯಕ ಎಂದು ಆದಿಚುಂಚನಗಿರಿ ಪೀಠಾಧಿಪತಿ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಸಲಹೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಗುರುವಾರ ನಡೆದ ಜಿಲ್ಲಾ ಪತ್ರಿಕಾ ದಿನಾಚರಣೆ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಪತ್ರಕರ್ತರ ಬದುಕು ದುಸ್ತರವಾಗಿದೆ. ಪತ್ರಕರ್ತರಿಗೆ ಸಮಾಜಕ್ಕೆ ಒಳ್ಳೆಯ ಸೇವೆ ಸಲ್ಲಿಸಬೇಕೆಂಬ ಹಂಬಲವಿದೆ. ಆದರೆ ಪತ್ರಕರ್ತರು ಸಮಾಜದಲ್ಲಿ ಆರ್ಥಿಕ ಸ್ಥಿತಿವಂತರಾಗಲು ಸಾಧ್ಯವಾಗುತ್ತಿಲ್ಲ. ಮುಂದಿನ ದಿನಗಳಲ್ಲಿ ಪತ್ರಕರ್ತರಿಗೆ ಸರ್ಕಾರಗಳು ಅಗತ್ಯ ಸೌಲಭ್ಯ ಒದಗಿಸಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಸಿ.ಎಸ್.ಪುಟ್ಟರಾಜು, ಪತ್ರಕರ್ತರನ್ನು ಅಭದ್ರತೆ ಕಾಡುತ್ತಿದ್ದು, ಪತ್ರಿಕೋದ್ಯಮ ಸಮಾಜದಲ್ಲಿ ಮತ್ತಷ್ಟು ಬಲಿಷ್ಟವಾಗಬೇಕು. ಆಗ ಮಾತ್ರ ಸ್ವಾಸ್ಥ್ಯ ಸಮಾಜ ಕಟ್ಟಲು ಸಾಧ್ಯ. ದೇಶದ ನಾಲ್ಕನೇ ಅಂಗ ಪತ್ರಿಕೋದ್ಯಮ ಸಮಾಜದ ಆಧಾರ ಸ್ಥಂಭವಾಗಬೇಕೆಂದರು. ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಪತ್ರಿಕೋದ್ಯಮ ಎಲ್ಲಾ ರಂಗದಲ್ಲೂ ಮುಂಚೂಣಿಯಲ್ಲಿದೆ. ಇಂದಿನ ವ್ಯವಸ್ಥೆ ವಿರುದ್ಧ ದನಿ ಎತ್ತುವುದರಿಂದ ಹಿಡಿದು, ಸಮಾಜದ ಅಂಕು–ಡೊಂಕುಗಳನ್ನು ತಿದ್ದುತ್ತಾ, ಚುನಾವಣಾ, ರಾಜಕೀಯ ವಿಶ್ಲೇಷಣೆ ಹಾಗೂ ಒಬ್ಬ ನಾಯಕನ ಸೋಲು, ಗೆಲುವು ಪತ್ರಕರ್ತರ ಮೇಲೆ ನಿಂತಿರುತ್ತದೆ ಎಂದು ಶ್ಲಾಘಿಸಿದರು.

ಇದೇ ವೇಳೆ 'ಮೈಸೂರು ಮಿತ್ರ' ಪಾಂಡವಪುರ ತಾಲೂಕು ವರದಿಗಾರ ಚಂದ್ರಶೇಖರ್ ಅವರಿಗೆ ಜೀವಮಾನ ಸೇವೆ ಪ್ರಶಸ್ತಿ, ಶ್ರೀರಂಗಪಟ್ಟಣ ಬೆಳಗೊಳ ಹೋಬಳಿ 'ಮೈಸೂರು ಮಿತ್ರ' ವರದಿಗಾರ ಪಾಲಹಳ್ಳಿ ಮಂಜುನಾಥಶಾಸ್ತ್ರಿ ಅವರಿಗೆ ಪತ್ರಿಕೋದ್ಯಮ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಲ್ಲದೇ 6 ಮಂದಿ ಪತ್ರಕರ್ತರಿಗೆ ವಾರ್ಷಿಕ ಪ್ರಶಸ್ತಿ ಹಾಗೂ ಪತ್ರಕರ್ತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಸಚಿವರಾದ ಕೆ.ಗೋಪಾಲಯ್ಯ, ಕೆ.ಸಿ.ನಾರಾಯಣಗೌಡ, ಮಾಜಿ ಸಚಿವ ಎನ್.ಚಲುವರಾಯಸ್ವಾಮಿ, ಜಿಲ್ಲಾಧಿಕಾರಿ ಗೋಪಾಲಕೃಷ್ಣ, ಎಸ್ಪಿ ಯತೀಶ್, ಸಿಇಓ ಶಾಂತಾ ಹುಲ್ಮನಿ, ಒಕ್ಕಲಿಗರ ಸಂಘದ ನಿರ್ದೇಶಕ ಅಶೋಕ್ ಜಯರಾಂ, ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ, ಸಿದ್ದಾರೂಢ ಸತೀಶ್‌ಗೌಡ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಮತ್ತೀಕೆರೆ ಜಯರಾಮ್, ಕೆರಗೋಡು ಸೋಮಶೇಖರ್, ಜಿಲ್ಲಾಧ್ಯಕ್ಷ ಕೆ.ಸಿ.ಮಂಜುನಾಥ್, ಉಪಾಧ್ಯಕ್ಷ ಬಿ.ಪಿ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್ ಸೇರಿದಂತೆ ಪತ್ರಕರ್ತರ ಸಂಘದ ಪದಾಧಿಕಾರಿಗಳು ಹಾಗೂ ಪತ್ರಕರ್ತರು ಉಪಸ್ಥಿತರಿದ್ದರು.

ರೈತ ಸಂಘದ ಮುಖಂಡರು ಜೆಡಿಎಸ್ ಸೇರ್ಪಡೆ



ಚಿನಕುರಳಿ, ಡಿ.8– ಶಾಸಕ ಸಿ.ಎಸ್.ಪುಟ್ಟರಾಜು ನಾಯಕತ್ವ ಮೆಚ್ಚಿ 50ಕ್ಕೂ ಹೆಚ್ಚು ಮುಖಂಡರು ರೈತ ಸಂಘ ತೊರೆದು ಜೆಡಿಎಸ್ ಸೇರ್ಪಡೆಗೊಂಡರು.

ಗ್ರಾಮದ ಶಾಸಕ ಸಿ.ಎಸ್.ಪುಟ್ಟರಾಜು ನಿವಾಸದಲ್ಲಿ ಸಣಬ ಗ್ರಾಮದ ಜೆಡಿಎಸ್ ಮುಖಂಡರಾದ ಚನ್ನಕೇಶವ, ಎಸ್.ಕೆ.ಪ್ರಕಾಶ್, ಚಲುವರಾಜು ನೇತೃತ್ವದಲ್ಲಿ ರೈತ ಸಂಘದ ಸಣ್ಣೇಗೌಡ, ಕೃಷ್ಣೇಗೌಡ, ಎಸ್.ಕೆ.ಯೋಗಣ್ಣ, ಕಾಂತರಾಜು, ಸ್ವಾಮಯ್ಯ, ಜವರಯ್ಯ, ಸ್ವಾಮಿ, ಉಮಾಶಂಕರ್, ಯೋಗಯ್ಯ, ನರಸಿಂಹಶೆಟ್ಟಿ, ಶೇಖರಯ್ಯ, ಕಾರೆಚಲುವಯ್ಯ, ಮಾದಮ್ಮರ ಕೃಷ್ಣೇಗೌಡ, ದಿವಾಕರ, ಸಣ್ಣೆದೇಗೌಡ, ಮಹೇಶ್, ಮಾದೇವ, ಚಂದ್ರು, ಜವರಯ್ಯ ಸೇರಿದಂತೆ ಹಲವು ಮಂದಿ ಜೆಡಿಎಸ್ ಸೇರ್ಪಡೆಗೊಂಡರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಸಣಬ ಗ್ರಾಮ ನನ್ನ ತಾಯಿ ಮನೆ ಇದ್ದಂತೆ. ಗ್ರಾಮದ ಜನತೆ ನನ್ನನ್ನು ಮನೆ ಮಗನಂತೆ ಪ್ರೀತಿಸಿ ಬೆಳೆಸಿದ್ದಾರೆ. ನಾನು ಸಚಿವನಾಗಿದ್ದ ವೇಳೆ ಗ್ರಾಮದ ಕೆರೆ ಅಭಿವೃದ್ಧಿ ಪಡಿಸಿದೆ. ಇದರಿಂದ ವರ್ಷವಿಡಿ ಕೃಷಿಗೆ ನೆರವಾಗಿದೆ. ಗ್ರಾಮದ ಮುಖ್ಯರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ ಸಲ್ಲಿಸಿದ್ದು, ಕಾಮಗಾರಿ ಆರಂಭವಾಗಿದೆ. ಕಾಲೋನಿ ಯಲ್ಲಿ ಅರ್ಧಕ್ಕೆ ಸ್ಥಗಿತಗೊಂಡಿದ್ದ ದೇವಸ್ಥಾನ ಉದ್ಘಾಟನೆಗೂ ಕ್ರಮ ವಹಿಸಲಾಗಿದೆ. ಗ್ರಾಮದ ಜನತೆ ಒಗ್ಗಟ್ಟಾಗಿರಬೇಕು. ಮುಂದಿನ ದಿನಗಳಲ್ಲಿ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇವೆ. ದ್ವೇಷ, ಅಸೂಯೆ ಬಿಟ್ಟು ಎಲ್ಲರೂ ಒಗ್ಗಟ್ಟಿನಿಂದ ಇರಿ ಎಂದರು.

ಅರ್ಜಿ ಆಹ್ವಾನ

ಮಂಡ್ಯ, ಡಿ.8– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮಂಡ್ಯ ತಾಲೂಕಿನ ಮೆಟ್ರಿಕ್ ನಂತರ (ಸ್ನಾತಕೋತರ ಹಾಗೂ ವೃತ್ತಿಪರ) ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ ಪ.ಜಾ/ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ 2022–23ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಅರ್ಜಿಗಳನ್ನು ಡಿ.19ರೊಳಗೆ ಸಲ್ಲಿಸಬಹುದು. ಮಾಹಿತಿಗೆ ದೂ:08232–228688 ಸಂಪರ್ಕಿಸಿ.

ಗುಜರಾತ್‌ನಲ್ಲಿ ಬಿಜೆಪಿಗೆ ಭರ್ಜರಿ ಜಯ: ವಿಜಯೋತ್ಸವ



ಶ್ರೀರಂಗಪಟ್ಟಣ, ಡಿ.8– ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಜಯ ಗಳಿಸಿದ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ವಿಜಯೋತ್ಸವ ಆಚರಿಸಿದರು.

ಪಟ್ಟಣದ ಕುವೆಂಪು ವೃತ್ತದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಪೀಹಳ್ಳಿ ರಮೇಶ್ ನೇತೃತ್ವದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು, ಪ್ರಧಾನಿ ಮೋದಿ, ಅಮಿತ್ ಷಾ ಹಾಗೂ ಪಕ್ಷದ ಪರ ಘೋಷಣೆ ಕೂಗಿ ಸಂಭ್ರಮಿಸಿದರು. ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಮಾತನಾಡಿ, ಗುಜರಾತ್ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸುವ ಮೂಲಕ ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲೂ 150ಕ್ಕೂ ಹೆಚ್ಚು ಸ್ಥಾನ ಪಡೆಯುವ ಮುನ್ಸೂಚನೆ ನೀಡಿದೆ. ಶ್ರೀರಂಗಪಟ್ಟಣದಲ್ಲೂ ಪಕ್ಷ ಸಂಘಟನೆಗೆ ಮುಂದಾಗಿದ್ದು, ಮಂಡ್ಯ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು. ಈ ವೇಳೆ ರಾಜ್ಯ ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷ ಕೆ.ಎಸ್ ನಂಜುಂಡೇಗೌಡ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಟಿ.ಶ್ರೀಧರ್, ಶ್ರೀನಿಮಿಷಾಂಬ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೃಷ್ಣಪ್ಪ, ಪುಟ್ಟರಾಜು, ಇಂದ್ರ ಕುಮಾರ್, ಎಂ.ವಿ.ಕೃಷ್ಣ, ಬಿ.ಸಿ ಸಂತೋಷ್ ಕುಮಾರ್, ಮಾದೇವ ಸೇರಿದಂತೆ ಇತರರಿದ್ದರು.

ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಯಲ್ಲಿ ಸಾಧನೆ ಮಾಡಿ



ಭಾರತೀನಗರ, ನ.8– ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲಿ ಉತ್ತಮ ಸಾಧನೆ ಮಾಡಿದರೆ ಮಾತ್ರ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಯುಗದಲ್ಲಿ ಉದ್ಯೋಗ ಪಡೆಯಲು ಸಾಧ್ಯ ಎಂದು ನಿವೃತ್ತ ಕಾರ್ಯಪಾಲಕ ಅಭಿಯಂತರ ಬಸವರಾಜೇಗೌಡ ತಿಳಿಸಿದರು.

ಇಲ್ಲಿನ ಭಾರತೀ ಪ್ರೌಢಶಾಲೆ ಕುವೆಂಪು ಸಭಾಂಗಣದಲ್ಲಿ ಆಯೋಜಿಸಿದ್ದ ಹೆಚ್.ಕೆಂಡೇಗೌಡರ ಸ್ಮರಣಾರ್ಥ ಜಿಲ್ಲಾಮಟ್ಟದ 45ನೇ ವರ್ಷದ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ವೇದಿಕೆ ಸಿಕ್ಕಾಗ ಬಳಸಿಕೊಳ್ಳಬೇಕು. ಪ್ರಸ್ತುತ ತಂತ್ರಜ್ಞಾನ ಯುಗವಾಗಿದ್ದು, ಚಿಂತಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿ ದಿಸೆಯಲ್ಲೇ ವೇದಿಕೆಯಲ್ಲಿ ಮಾತನಾಡುವ ಕಲೆ ಬೆಳೆಸಿಕೊಂಡರೆ ಮುಂದಿನ ದಿನಗಳಲ್ಲಿ ಎಂತಹ ವೇದಿಕೆಯಲ್ಲೂ ನಿಂತು ನಿರ್ಭಯದಿಂದ ಮಾತನಾಡಬಹುದು ಎಂದರು.

ಸಾಹಿತಿ ಡಾ.ಮಜ್ಜಿಗೆಪುರ ಕೆ.ಶಿವರಾಮು ಮಾತನಾಡಿದರು. ಗಾಯಕ ದೀಪಕ್ ಮತ್ತು ತಂಡದವರು ಗಾಯನದ ಮೂಲಕ ಸಭಿಕರನ್ನು ರಂಜಿಸಿದರು. ಈ ವೇಳೆ ಬಸವರಾಜೇಗೌಡ, ನಿವೃತ್ತ ಪ್ರಾಂಶುಪಾಲ ಮಾಯೀಗೌಡ, ಭಾರತೀ ಎಜುಕೇಷನ್ ಟ್ರಸ್ಟಿ ಹಾಗೂ ಸಿಇಓ ಆಶಯ್ ಮಧುಮಾಗೌಡ ಅವರನ್ನು ಸನ್ಮಾನಿಸಲಾಯಿತು. ಭಾರತಿ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಬಿ.ಎಂ.ನಂಜೇಗೌಡ, ಮುಖ್ಯಶಿಕ್ಷಕ ರಾಜೇಂದ್ರ ರಾಜೇ ಅರಸು, ನಿವೃತ್ತ ಮುಖ್ಯಶಿಕ್ಷಕ ಎಂ.ಮಾಯಪ್ಪ ಇತರರಿದ್ದರು.

ಡಿ.12ರಂದು ಚಾಮರಾಜನಗರ ಜಿಲ್ಲೆಗೆ ಮುಖ್ಯಮಂತ್ರಿ ಬೊಮ್ಮಾಯಿ ಭೇಟಿ

ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ನಳ ಸಂಪರ್ಕ, ಐಸಿಯು ಸೇರಿ ವಿವಿಧ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ



ಚಾಮರಾಜನಗರ, ಡಿ.8– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇದೇ ತಿಂಗಳ 12ರಂದು ಚಾಮರಾಜನಗರ, ಹನೂರು ಹಾಗೂ ಮಲೆ ಮಹದೇಶ್ವರ ಬೆಟ್ಟಕ್ಕೆ ಭೇಟಿ ನೀಡಲಿದ್ದು, ಹಲವು ಮಹತ್ತರ ಕಾಮಗಾರಿಗಳ ಉದ್ಘಾಟನೆ, ಅನೇಕ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಅಂದು ಬೆಳಗ್ಗೆ 10.30ಕ್ಕೆ ಬೆಂಗಳೂರಿನಿಂದ ಚಾಮರಾಜನಗರಕ್ಕೆ ಹೆಲಿಕಾಪ್ಟರ್ ಮೂಲಕ ಆಗಮಿಸಲಿರುವ ಮುಖ್ಯಮಂತ್ರಿಗಳು, ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿರುವ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ವೇಳೆ ಮುಖ್ಯಮಂತ್ರಿಗಳು ಚಾಮರಾಜನಗರ ಮತ್ತು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲಿದ್ದಾರೆ.

ಉದ್ಘಾಟನೆ: ಜಲಜೀವನ್ ಮಿಷನ್ ಯೋಜನೆಯಡಿ ಚಾಮರಾಜನಗರ ತಾಲೂಕಿನ 242 ಜನವಸತಿ ಪ್ರದೇಶಗಳ ಒಟ್ಟು 58,208 ಮನೆಗಳಿಗೆ ಹಾಗೂ ಗುಂಡ್ಲುಪೇಟೆ ತಾಲೂಕಿನ 174 ಜನವಸತಿ ಪ್ರದೇಶಗಳ ಒಟ್ಟು 35,414 ಮನೆಗಳಿಗೆ ನಳ ಸಂಪರ್ಕ ಕಲ್ಪಿಸುವ ಮಹತ್ವದ ಯೋಜನೆಯನ್ನು ಉದ್ಘಾಟಿಸಲಿದ್ದಾರೆ. ನಗರದ ಸಿಮ್ಸ್ ಆಸ್ಪತ್ರೆಯಲ್ಲಿ 128 ಸ್ಲೈಸ್ ಸಾಮರ್ಥ್ಯದ ಸಿ.ಟಿ. ಸ್ಕ್ಯಾನ್ ಯಂತ್ರ, ಮಕ್ಕಳ ಐಸಿಯು 10 ಹಾಸಿಗೆ ಮತ್ತು 50 ಹಾಸಿಗೆಗಳಿಗೆ ಸೆಂಟ್ರಲ್ ಆಕ್ಸಿಜನ್ ಸಂಪರ್ಕ ವ್ಯವಸ್ಥೆ ಸಾಮರ್ಥ್ಯದ ಐಸಿಯು ಘಟಕವನ್ನು ಉದ್ಘಾಟಿಸಲಿದ್ದಾರೆ.

ಇದಲ್ಲದೇ ನಗರೋತ್ಥಾನ 4 ಯೋಜನೆ, ಜ್ಯೋತಿಗೌಡನಪುರ ಗ್ರಾಮದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಬಿಸಲವಾಡಿಯಲ್ಲಿ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬೇಡರಪುರದಲ್ಲಿ ಇಂದಿರಾಗಾಂಧಿ ಮಹಿಳಾ ನರ್ಸಿಂಗ್ ವಿದ್ಯಾರ್ಥಿ ನಿಲಯ, ಕುದೇರಿನಲ್ಲಿ ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿ ನಿಲಯ ಸೇರಿದಂತೆ ಅನೇಕ ಕಾಮಗಾರಿಗಳನ್ನು ಉದ್ಘಾಟಿಸಲಿದ್ದಾರೆ.

ಚಾಮರಾಜನಗರ ಹಾಗೂ ಗುಂಡ್ಲುಪೇಟೆ ತಾಲೂಕಿನ ಅಕ್ರಮ ಕೃಷಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿ ವಿದ್ಯುತ್ ಸಂಪರ್ಕ ಕಲ್ಪಿಸುವ, ಬೇಗೂರು ಗ್ರಾಮೀಣ ಸಂತೆ ಯೋಜನೆಯಲ್ಲಿ ಹಳ್ಳಿ ಮಾರುಕಟ್ಟೆ, ಶೌಚಾಲಯ ಮತ್ತು ನೀರಿನ ಟ್ಯಾಂಕ್, ನಿರಂತರ ಜ್ಯೋತಿ ಯೋಜನೆಯಡಿ 28 ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗಳಿಗೆ ಸಿಎಂ ಬೊಮ್ಮಾಯಿ ಅವರು ಚಾಲನೆ ನೀಡುವರು.

ಶಂಕುಸ್ಥಾಪನೆ: ಗುಂಡ್ಲುಪೇಟೆ ತಾಲೂಕಿನ 131 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ವಿಸ್ತರಿಸಿ, 32 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ, ನಗರದ ಸಿಮ್ಸ್ ಆಸ್ಪತ್ರೆಯ ಆವರಣದಲ್ಲಿ 50 ಹಾಸಿಗೆ ಸಾಮರ್ಥ್ಯದ ತುರ್ತು ನಿಗಾಘಟಕ, ಶಿವಪುರ ಗ್ರಾಮದ ಕೃಷಿ ವಿಶ್ವವಿದ್ಯಾಲಯಕ್ಕೆ ಅಗತ್ಯವಾದ ಮೂಲ ಸೌಕರ್ಯದ ಕಾಮಗಾರಿ, ನಗರದಲ್ಲಿ ಡಾ. ಬಾಬು ಜಗಜೀವನರಾಂ ಭವನದ ಕಟ್ಟಡ ನಿರ್ಮಾಣ, ಬಾಪೂಜಿ ಸಾರ್ವಜನಿಕ ವಿದ್ಯಾರ್ಥಿ ನಿಲಯ, ನಗರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ವಿಜ್ಞಾನ ಭವನ ಕಟ್ಟಡ, ಗಾಳಿಪುರದಲ್ಲಿ 66/11 ಕೆ.ವಿ. ವಿದ್ಯುತ್ ಉಪಕೇಂದ್ರ, ತೆರಕಣಾಂಬಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಕಾಮಗಾರಿಗಳನ್ನು ಮುಖ್ಯಮಂತ್ರಿಗಳು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಮಧ್ಯಾಹ್ನ 1 ಗಂಟೆಗೆ ಹನೂರಿನ ಮಹದೇಶ್ವರ ಕ್ರೀಡಾಂಗಣದಲ್ಲಿ ಕೊಳ್ಳೇಗಾಲ ಮತ್ತು ಹನೂರು ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಮಧ್ಯಾಹ್ನ 2.50ಕ್ಕೆ ಮಹದೇಶ್ವರ ಬೆಟ್ಟಕ್ಕೆ ಭೇಟಿ ನೀಡಲಿರುವ ಮುಖ್ಯಮಂತ್ರಿಗಳು ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ನಂತರ 3.15ಕ್ಕೆ ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸಲಿದ್ದಾರೆ.

ಡಿ. 11, 12ರಂದು ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

ಚಾಮರಾಜನಗರ, ಡಿ.8– ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಡಿ.11 ಮತ್ತು 12ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಡಿ.11ರಂದು ಬೆಳಿಗ್ಗೆ 10 ಗಂಟೆಗೆ ಕೊಳ್ಳೇಗಾಲ ತಾಲೂಕಿನ ಜಾಗೇರಿಗೆ ಆಗಮಿಸಿ ಜಿಲ್ಲೆಯ ಹಿರಿಯ ಅಧಿಕಾರಿಗಳೊಂದಿಗೆ ಗ್ರಾಮಸ್ಥರ ಕುಂದು ಕೊರತೆಗಳನ್ನು ಆಲಿಸುವರು. ಬೆಳಿಗ್ಗೆ 11.30 ಗಂಟೆಗೆ ಹನೂರಿಗೆ ಆಗಮಿಸಿ ಹನೂರು ಮತ್ತು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿಯವರು ನೆರವೇರಿಸುವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮಹದೇಶ್ವರ ಕ್ರೀಡಾಂಗಣದಲ್ಲಿ ಸಿದ್ದತೆಗಳ ಪರಿವೀಕ್ಷಣೆ ಮಾಡುವರು ಜೊತೆಗೆ ಸಂಬಂಧಪಟ್ಟವರೊಂದಿಗೆ ಚರ್ಚೆ ನಡೆಸುವರು. ಮಧ್ಯಾಹ್ನ 1.30 ಗಂಟೆಗೆ ಕೊಳ್ಳೇಗಾಲಕ್ಕೆ ಆಗಮಿಸುವರು. ಮಧ್ಯಾಹ್ನ 3 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸಿ ಚಾಮರಾಜನಗರ ಮತ್ತು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿಯವರು ನೆರವೇರಿಸುವ ಹಿನ್ನೆಲೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಸಿದ್ದತೆಗಳ ಪರಿವೀಕ್ಷಣೆ ಮಾಡುವರು ಹಾಗೂ ಸಂಬಂಧಪಟ್ಟವರೊಂದಿಗೆ ಚರ್ಚೆ ನಡೆಸುವರು. ಸಂಜೆ 4 ಗಂಟೆಗೆ ಶಿಂಷಾಗೆ ತೆರಳಿ ವಾಸ್ತವ್ಯ ಹೂಡುವರು.

ಡಿ.12ರಂದು ಬೆಳಿಗ್ಗೆ 9 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸುವರು. ಬೆಳಿಗ್ಗೆ 10.30 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದ ಹೆಲಿಪ್ಯಾಡ್‌ನಲ್ಲಿ ಮುಖ್ಯಮಂತ್ರಿ ಅವರನ್ನು ಬರಮಾಡಿಕೊಳ್ಳುವರು. ಬಳಿಕ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಮುಖ್ಯಮಂತ್ರಿಯವರೊಂದಿಗೆ ಚಾಮರಾಜನಗರ ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಸಮಾರಂಭದಲ್ಲಿ ಭಾಗವಹಿಸುವರು. ಮಧ್ಯಾಹ್ನ 12.50 ಗಂಟೆಗೆ ಹನೂರಿಗೆ ಹೆಲಿಕಾಪ್ಟರ್ ಮೂಲಕ ಆಗಮಿಸುವರು. ಬಳಿಕ ಹನೂರಿನ ಮಹದೇಶ್ವರ ಕ್ರೀಡಾಂಗಣದಲ್ಲಿ ಮುಖ್ಯಮಂತ್ರಿಯವರೊಂದಿಗೆ ಕೊಳ್ಳೇಗಾಲ ಹಾಗೂ ಹನೂರು ವಿಧಾನಸಭಾ ಕ್ಷೇತ್ರಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಸಮಾರಂಭದಲ್ಲಿ ಭಾಗವಹಿಸುವರು.

ಫೆ.8ರಿಂದ ಗುರುಪೀಠದಲ್ಲಿ ವಾಲ್ಮೀಕಿ ಜಾತ್ರಾ ಮಹೋತ್ಸವ

ಜಿಲ್ಲೆಯಿಂದ ಸಹಸ್ರಾರು ಮಂದಿ ಭಾಗವಹಿಸಲು ಶ್ರೀಗಳ ಮನವಿ



ಚಾಮರಾಜನಗರ, ಡಿ.8– ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ರಾಜನಹಳ್ಳಿ ಶ್ರೀಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಫೆ. 8 ಮತ್ತು 9 ರಂದು 2 ದಿನಗಳ ಕಾಲ ನಡೆಯುವ 5ನೇ ವರ್ಷದ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವಕ್ಕೆ ಸಮುದಾಯದ ಬಂಧುಗಳು ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿಕೊಡುವಂತೆ ಶ್ರೀಮಹರ್ಷಿ ವಾಲ್ಮೀಕಿ ಗುರುಪೀಠದ ಶ್ರೀಪ್ರಸನ್ನಾನಂದಪುರಿ ಸ್ವಾಮೀಜಿ ಮನವಿ ಮಾಡಿದರು.

ನಗರದ ಪ್ರವಾಸಿಮಂದಿರದಲ್ಲಿ ನಡೆದ ಸಭೆಯ ದಿವ್ಯ ಸಾನಿಧ್ಯ ವಹಿಸಿ ಜಾತ್ರಾ ಮಹೋತ್ಸವದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಜಾಗೃತಿಗಾಗಿ, ಸಂಘಟನೆಗಾಗಿ, ಒಗ್ಗಟ್ಟಿಗಾಗಿ ಕಳೆದ ಐದು ವರ್ಷಗಳಿಂದ ಮಠದಲ್ಲಿ ಮಹರ್ಷಿ ವಾಲ್ಮೀಕಿ ಜಾತ್ರೆಯನ್ನು ಮಾಡಿಕೊಂಡು ಬರಲಾಗುತ್ತಿದೆ. ಈ ಜಾತ್ರಾ ಮಹೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ತಮ್ಮ 252 ದಿನಗಳ ಹೋರಾಟದಲ್ಲಿ ಚಾಮರಾಜನಗರ ಜಿಲ್ಲೆಯ ಎಸ್‌ಸಿ, ಎಸ್‌ಟಿ ಸಮುದಾಯದವರು ಕೊಟ್ಟ ಸಹಕಾರ, ಹೋರಾಟದ ಫಲವಾಗಿ ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚುವಾಗಿದೆ ಅದಕ್ಕಾಗಿ ಜಿಲ್ಲೆಯ ಜನತೆಗೆ ಈ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ. ಈಗ ಒಂದು ಬೇಡಿಕೆ ಈಡೇರಿದೆ. ಇನ್ನೂ ಹತ್ತಾರು ಬೇಡಿಕೆಗಳು ಈಡೇರಬೇಕಾಗಿದೆ. ಅದಕ್ಕಾಗಿ ಹೆಚ್ಚಿನ ಮಟ್ಟದಲ್ಲಿ ಸಂಘಟನೆ ಆಗಬೇಕಿದೆ ಎಂದರು.

ಸಭೆಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ತಾಲೂಕು ನಾಯಕ ವಿದ್ಯಾ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಶ್ರೀನಿವಾಸನಾಯಕ, ವಾಲ್ಮೀಕಿ ಟ್ರಸ್ಟ್ ಅಧ್ಯಕ್ಷ ಬಿ. ಕಾಂ. ಮಹದೇವನಾಯಕ, ಜಿ.ಪಂ. ಮಾಜಿ ಸದಸ್ಯ ರಮೇಶ್, ತಾ.ಪಂ.ಮಾಜಿ ಅಧ್ಯಕ್ಷ ಹೆಚ್.ವಿ.ಚಂದ್ರು, ನಗರಸಭಾ ಮಾಜಿ ಸದಸ್ಯ ಚೆಂಗುಮಣಿ, ಗ್ರಾಪಂ ಅಧ್ಯಕ್ಷ ಮಹೇಂದ್ರ, ಮುಖಂಡರಾದ ಕೃಷ್ಣನಾಯಕ, ವೆಂಕಟರಾಮನಾಯಕ, ರಮೇಶ್‌ನಾಯಕ, ಸಾಗಡೆ ನಂಜುಂಡನಾಯಕ ಹಾಗೂ ತಾಲೂಕಿನ ವಿವಿಧ ಗ್ರಾಮಗಳ ನಾಯಕ ಸಮುದಾಯದ ಯಜಮಾನರು, ಮುಖಂಡರುಗಳು ಭಾಗವಹಿಸಿದ್ದರು.

ರೈತರ ಸಮಸ್ಯೆ ಬಗೆಹರಿಸದ ಅಧಿಕಾರಿಗಳ ವಿರುದ್ಧ ಬಾರುಕೋಲು ಚಳವಳಿ



ಕೊಳ್ಳೇಗಾಲ, ಡಿ.8– ರೈತರ ಸಮಸ್ಯೆ ಬಗೆಹರಿಸದ ಅಧಿಕಾರಿಗಳ ವಿರುದ್ಧ ರಾಜ್ಯ ರೈತ ಸಂಘದ ವತಿಯಿಂದ ರೈತರು ಬಾರುಕೋಲು ಚಳವಳಿ ನಡೆಸಿದರು. ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಮೆಗೆ ಪುಷ್ಪಮಾಲೆ ಹಾಕಿ ಬಳಿಕ ಡಾ.ಅಂಬೇಡ್ಕರ್ ರಸ್ತೆ ಮಸೀದಿ ವೃತ್ತ ಡಾ.ರಾಜಕುಮಾರ್ ರಸ್ತೆ ಗುರುಕಾರ್ ವೃತ್ತ, ಎಂಜಿಎಸ್ವಿ ರಸ್ತೆ, ತಾ.ಪಂ ವೃತ್ತ, ಐಬಿ ರಸ್ತೆ ಆರ್‌ಎಂಸಿ ರಸ್ತೆ ಮೂಲಕ ಡಿಎಫ್‌ಓ ಕಚೇರಿಗೆ ತಲುಪಿದರು.

ಈ ಸಂಧರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ರಾಜ್ಯ ಉಪಾಧ್ಯಕ್ಷ ಮಹೇಶ್ ಪ್ರಭು, ಮೈಸೂರು ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಹನೂರು ಮುಖಂಡ ಮುಜಾಮಿಲ್ ಪಾಷ, ತಾಲೂಕು ರೈತ ಮುಖಂಡ ಶೈಲೇಂದ್ರ, ಮಧುವನಹಳ್ಳಿ ಬಸವ ರಾಜಪ್ಪ, ಭಾಸ್ಕರ, ಅರೇಪಾಳ್ಯ ನಾಗರಾಜು,ಜೋಯೆಲ್ ನಿವಾಸ್, ಮಹದೇವ, ಜಾನ್ ಕೆನಡಿ, ಮುರುಗೇಶ್, ಮಾದಮ್ಮ, ತಂಬಿ, ಜೋಸೆಫ್, ಗುಣ, ಜಾರ್ಲಿ, ಸುಸೈರಾಜ್, ಶಿವಣ್ಣ ಪಿ ಪುಟ್ಟಶೆಟ್ಟಿದೊಡ್ಡಿ, ಪ್ರಭುಸ್ವಾಮಿ, ಮುನಿಯಪ್ಪ, ಪಾರ್ಥಿಯಪ್ಪ, ಮುರುಗ, ಆರೋಗ್ಯ ಸ್ವಾಮಿ ಇತರರು ಉಪಸ್ಥಿತರಿದ್ದು, ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಗಡಿ ವಿವಾದ: ಬಿಜೆಪಿ ಸಂಚು

● ವಿಪಕ್ಷ ನಾಯಕ ಸಿದ್ದರಾಮಯ್ಯ ಶಂಕೆ ● ಈ ವಿಚಾರ ಮುಗಿದ ಅಧ್ಯಾಯ



ಮೈಸೂರು,ಡಿ.8(ಎಂಟಿವೈ)- ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದ ಈಗಾಗಲೇ ಮಹಾಜನ್ ವರದಿಯಂತೆ ಮುಗಿದ ಅಧ್ಯಾಯವಾಗಿದ್ದು, ಎರಡೂ ರಾಜ್ಯದಲ್ಲಿರುವ ಬಿಜೆಪಿ ಸರ್ಕಾರ ಬೇಕಂತಲೇ ಉದ್ವಿಗ್ನ ವಾತಾವರಣ ನಿರ್ಮಿಸಲು ಸಂಚು ನಡೆಸುತ್ತಿರುವ ಶಂಕೆ ವ್ಯಕ್ತವಾಗುತ್ತಿದೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲೂ ಬಿಜೆಪಿ ಸರ್ಕಾರವಿದೆ, ಮಹಾರಾಷ್ಟ್ರದಲ್ಲೂ ಬಿಜೆಪಿ ಸರ್ಕಾರವಿದೆ. ಆದರೂ ಗಡಿ ವಿವಾದ ಮುನ್ನೆಲೆಗೆ ಬಂದಿದೆ. ಮಹಾರಾಷ್ಟ್ರದಲ್ಲಿ ರಾಜ್ಯದ ಬಸ್‌ಗಳಿಗೆ ಮಸಿ ಬಳಿದು, ಪುಂಡಾಟಿಕೆ ಮೆರೆಯುತ್ತಿದ್ದಾರೆ. ಉಭಯ ರಾಜ್ಯಗಳ ಸಿಎಂ ಮಾತುಕತೆ ನಡೆಸಿ, ಪುಂಡಾಟಿಕೆ ತಡೆಗೆ ಪ್ರಯತ್ನಿಸಬಹುದಾಗಿತ್ತು. ಅಲ್ಲದೆ, ಮುಖ್ಯಮಂತ್ರಿ ಬೊಮ್ಮಾಯಿ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿ, ಪುಂಡಾಟಿಕೆ ನಿಲ್ಲಿಸುವಂತೆ ಮಹಾರಾಷ್ಟ್ರಕ್ಕೆ ಸೂಚನೆ ನೀಡಬಹುದಾಗಿತ್ತು. ಆದರೆ, ಯಾವ ಪ್ರಯತ್ನವನ್ನೂ ಮಾಡಿಲ್ಲ. ಚುನಾವಣೆ ಸಮೀಪಿಸುತ್ತಿರುವುದರಿಂದ ಗಡಿ ವಿವಾದ ಉದ್ವಿಗ್ನ ಪರಿಸ್ಥಿತಿ ಉಂಟು ಮಾಡಿ, ಲಾಭ ಮಾಡಿಕೊಳ್ಳಲು ಎರಡೂ ರಾಜ್ಯದ ಮುಖ್ಯಮಂತ್ರಿಗಳು ಮಾತಾಡಿಕೊಂಡು ವಿವಾದ ಸೃಷ್ಟಿಸುತ್ತಿದ್ದಾರೆ ಎಂದು ಆರೋಪಿಸಿದರು.

ಬೆಳಗಾವಿಯ ಒಂದಿಂಚು ಜಾಗವನ್ನೂ ಕೊಡಲ್ಲ: ಕರ್ನಾಟಕದ ನೆಲ, ಜಲ, ಭಾಷೆ ಈ ವಿಚಾರದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ. ಮಹಾಜನ್ ವರದಿಯೇ ಅಂತಿಮ. ಬೆಳಗಾವಿ ನಮ್ಮದು. ಬೆಳಗಾವಿಯ ಒಂದೇ ಒಂದು ಇಂಚು ಜಾಗವನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ಎಂದು ಗುಡುಗಿದರು. ವಿವಾದಗಳನ್ನು ಬೆಳೆಯಲು ಬಿಟ್ಟು ರಾಜಕೀಯಕ್ಕೆ ಬಳಸುವುದು ಬಿಜೆಪಿಯ ಹುಟ್ಟುಗುಣ. ಸಂಧಾನದ ಮೂಲಕ ಪರಿಹರಿಸಬೇಕಿದ್ದ ಬೆಳಗಾವಿ ಗಡಿ ವಿವಾದವನ್ನು ಬೆಳೆಯಲು ಬಿಟ್ಟು ರಾಜ್ಯ ಸರ್ಕಾರ ನೋಡುತ್ತಾ ಕುಳಿತಿದೆ. ಬೆಳಗಾವಿ-ಮಹಾರಾಷ್ಟ್ರ ನಡುವಿನ ಬಸ್ ಸಂಚಾರ ಸ್ಥಗಿತಗೊಂಡಿರುವ ಕಾರಣ ಜನ ಪರದಾಡುವಂತಾಗಿದೆ. ಎರಡೂ ಕಡೆಗಳಲ್ಲಿ ಜನ ಉದ್ರಿಕ್ತರಾಗಿದ್ದಾರೆ. ರಾಜ್ಯ ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ ಶಾಂತಿ ಕಾಪಾಡಬೇಕು ಎಂದು ಒತ್ತಾಯಿಸಿದರು.

ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ವಿರುದ್ಧ ಅಲ್ಲಿನ ಸರ್ಕಾರ ಅತಿರೇಕದ ಕ್ರಮಗಳಿಗೆ ಮುಂದಾಗಿದೆ. ಮುಖ್ಯಮಂತ್ರಿ ಬೊಮ್ಮಾಯಿ ಅವರು ಆ ರಾಜ್ಯದ ಮುಖ್ಯಮಂತ್ರಿಗಳನ್ನು ಸಂಪರ್ಕಿಸಿ ಮಹಾರಾಷ್ಟ್ರದ ಕನ್ನಡಿಗರಿಗೆ ಸೂಕ್ತ ರಕ್ಷಣೆ ನೀಡಬೇಕು. ಡಬಲ್ ಎಂಜಿನ್ ಸರ್ಕಾರ ಎಂದು ಎದೆ ಬಡಿದುಕೊಂಡರೆ ಸಾಲದು. ಆ ಅವಕಾಶವನ್ನು ಬಳಸಿಕೊಂಡು ಎರಡು ರಾಜ್ಯಗಳಿಗೆ ಸಂಬಂಧಿಸಿದ ವಿವಾದಗಳನ್ನು ಬಗೆಹರಿಸಿಕೊಳ್ಳಲು ಕೇಂದ್ರ ಸರ್ಕಾರದ ನೆರವನ್ನು ಪಡೆಯಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

ಮೊದಲು ಗೃಹಿಣಿ ಮರುಳು ಮಾಡಿದ; ನಂತರ ಮಾಂಗಲ್ಯ ಸರ, ಮೊಬೈಲ್ ಕದ್ದೊಯ್ದ!

ಮೈಸೂರು, ಡಿ.8-ಫೇಸ್ ಬುಕ್‌ನಲ್ಲಿ ಪರಿಚಯವಾದ ವ್ಯಕ್ತಿಯೋರ್ವ ಕೆಲಸ ಕೊಡಿಸುವುದಾಗಿ ಗೃಹಿಣಿಯನ್ನು ಲಾಡ್ಜ್‌ಗೆ ಕರೆದೊಯ್ದು, ಆಕೆಯ ಮಾಂಗಲ್ಯ ಸರ ಕದ್ದು ಪರಾರಿಯಾದ ಘಟನೆ ಮೈಸೂರಿನಲ್ಲಿ ನಡೆದಿದೆ.

ಮೈಸೂರಿನ ಹೆಬ್ಬಾಳಿನ ಬಸವನಗುಡಿ ನಿವಾಸಿ 40 ವರ್ಷ ವಯಸ್ಸಿನ ಗೃಹಿಣಿಗೆ ಸಂತೋಷ್ ಬಳ್ಳಾರಿ ಎಂಬಾತ ಫೇಸ್ ಬುಕ್‌ನಲ್ಲಿ ಪರಿಚಯವಾಗಿದ್ದಾನೆ. ಆಕೆಗೆ ಮೈಸೂರಿನಲ್ಲಿ ಕೆಲಸ ಕೊಡಿಸಲು ಡಿ.1ರಂದು ಬರುತ್ತಿರುವುದಾಗಿ ತಿಳಿಸಿದ ಮೇರೆಗೆ ಅವರು, ಅಂದು ಬೆಳಗ್ಗೆ ರೈಲ್ವೆ ನಿಲ್ದಾಣದ ಮುಂದೆ ಕಾದು ನಿಂತಿದ್ದಾರೆ. ಆಗ ವಾಟ್ಸಾಪ್ ಕರೆ ಮಾಡಿದ ಸಂತೋಷ್, ಕತ್ತಿನಲ್ಲಿರುವ ಸರವನ್ನು ಬಿಚ್ಚಿ ಪರ್ಸ್‌ನಲ್ಲಿ ಇಟ್ಟುಕೊಳ್ಳುವಂತೆ ಹೇಳಿದನಂತೆ. ಯಾಕೆ ಎಂದು ಕೇಳಿದಾಗ ನಿನಗೆ ಅದೆಲ್ಲಾ ಗೊತ್ತಾಗುವುದಿಲ್ಲ, ಹೇಳಿದ ಹಾಗೆ ಮಾಡು ಎಂದು ಹೇಳಿದ್ದಾನೆ. ಅದರಂತೆಯೇ ಗೃಹಿಣಿ ಮಾಂಗಲ್ಯ ಸರ ಬಿಚ್ಚಿ ಪರ್ಸ್‌ನಲ್ಲಿಟ್ಟುಕೊಂಡಿದ್ದಾರೆ. ಸ್ವಲ್ಪ ಸಮಯದ ನಂತರ ಅವರಿಗೆ 8310773250 ಸಂಖ್ಯೆಯಿಂದ ಮೆಸೇಜ್ ಮಾಡಿದ ಸಂತೋಷ್, ತಾನು ಮೀಟಿಂಗ್‌ನಲ್ಲಿರುವುದಾಗಿಯೂ, ತನ್ನ ಡ್ರೈವರ್ ಅನ್ನು ಕಳುಹಿಸುವುದಾಗಿಯೂ ತಿಳಿಸಿ, ಗೃಹಿಣಿ ಧರಿಸಿದ್ದ ಉಡುಪುಗಳ ಬಗ್ಗೆ ವಿವರ ಪಡೆದಿದ್ದಾನೆ. ನಂತರ ವ್ಯಕ್ತಿಯೋರ್ವ ಅವರ ಬಳಿಗೆ ಬಂದು ತನ್ನ ಹೆಸರೂ ಕೂಡ ಸಂತೋಷ್ ಎಂದೇ ಹೇಳಿಕೊಂಡು, ತಮ್ಮ ಬಾಸ್ ಸಂತೋಷ್ ನಿಮ್ಮನ್ನು ಕರೆತರುವಂತೆ ಹೇಳಿದ್ದಾರೆ ಎಂದು ತಿಳಿಸಿ ಆಟೋದಲ್ಲಿ ಕಲ್ಯಾಣ್ ಜುವೆಲರ್ಸ್ ಬಳಿ ಇರುವ ರಾಜಧಾನಿ ಲಾಡ್ಜ್‌ನ 404ನೇ ಸಂಖ್ಯೆಯ ಕೊಠಡಿಗೆ ಕರೆದೊಯ್ದಿದ್ದಾನೆ.

ಇವರು ಕೊಠಡಿ ಪ್ರವೇಶಿಸುತ್ತಿದ್ದಂತೆಯೇ ಸಂತೋಷ್ ಬಳ್ಳಾರಿ ಎಂಬಾತ ಗೃಹಿಣಿಗೆ ಮೆಸೇಜ್ ಮಾಡಿ ತಿಂಡಿ ಮಾಡುವಂತೆಯೂ, ಸೋಪ್ ತರಿಸಿಕೊಂಡು ಮುಖ ತೊಳೆಯುವಂತೆಯೂ ಸೂಚನೆ ನೀಡಿದ್ದಾನೆ. ಮತ್ತೊಂದೆಡೆ ಕೊಠಡಿಯಲ್ಲಿದ್ದ ಮತ್ತೋರ್ವ ಸಂತೋಷ್, ಗೃಹಿಣಿ ಜೊತೆ ಅನುಚಿತವಾಗಿ ವರ್ತಿಸಿದ್ದು, ಆಕೆ ವಿರೋಧಿಸಿದಾಗ ಕ್ಷಮೆ ಕೇಳಿದನಂತೆ. ನಂತರ ತನ್ನ ಪರ್ಸ್ ಮತ್ತು ಮೊಬೈಲ್ ಅನ್ನು ಕೊಠಡಿಯ ಟೇಬಲ್ ಮೇಲೆ ಇಟ್ಟು ಬಾತ್‌ರೂಂಗೆ ಹೋಗಿ ಮುಖ ತೊಳೆದು ಬರುವಷ್ಟರಲ್ಲಿ ಕೊಠಡಿಯಲ್ಲಿದ್ದ ಸಂತೋಷ್ 62 ಗ್ರಾಂ ತೂಕದ ಮಾಂಗಲ್ಯ ಸರವಿದ್ದ ಪರ್ಸ್ ಮತ್ತು ಮೊಬೈಲ್ ಅನ್ನು ತೆಗೆದುಕೊಂಡು ನಾಪತ್ತೆಯಾಗಿದ್ದಾನೆ. ಈ ಸಂಬಂಧ ಗೃಹಿಣಿ ಡಿ.6ರಂದು ಲಷ್ಕರ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಕಾರು ಮಾರಿಸಿ 28 ಲಕ್ಷ ಪಡೆದ! ಮತ್ತೆ ಬಂದು ಕಾರನ್ನು ಕದ್ದೊಯ್ದ!!


ನಂಬಿ ವ್ಯವಹಾರ ಮಾಡಿದ ವ್ಯಕ್ತಿಯಿಂದ ಪೊಲೀಸರಿಗೆ ದೂರು

ಮೈಸೂರು, ಡಿ.8-ಕಾರು ಮಾರಾಟ ಮಾಡುವುದಾಗಿ ತಿಳಿಸಿ ಉದ್ಯಮಿಗೆ 28 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮೈಸೂರಿನ ಲಷ್ಕರ್ ಮೊಹಲ್ಲಾ ನಿವಾಸಿ ಸಯ್ಯದ್ ಖಲೀಲ್ ಉಲ್ ರೆಹಮಾನ್ (32) ವಂಚನೆಗೊಳಗಾದವರಾಗಿದ್ದು, ಇವರಿಗೆ ಸಿ.ವಿ.ರಸ್ತೆಯ ಟಿ.ಕೆ.ಲೇಔಟ್ ಪ್ಲಾಸ್ಟಿಕ್ ಮಾಲೀಕ ಮಹಮ್ಮದ್ ಜಾಕೀರ್ ಎಂಬುವರ ಮುಖಾಂತರ ವರ್ಷದ ಹಿಂದೆ ಮಂಡಿ ಮೊಹಲ್ಲಾದ ಆದಿಲ್ ಖಾನ್ ದುರಾನಿ(29) ಎಂಬುವರು ಪರಿಚಯವಾಗಿದ್ದರು. ಕಳೆದ ಫೆಬ್ರವರಿ ಮೊದಲ ವಾರದಲ್ಲಿ ಆದಿಲ್ ಖಾನ್ ದುರಾನಿ ಬಳಿ ಕೆಎ 51 ಎಂಸಿ 2644 ಸಂಖ್ಯೆಯ ಆಡಿ-ಎ7 ಕಾರನ್ನು ಮಹಮ್ಮದ್ ಜಾಕೀರ್ ಅವರ ಕಚೇರಿ ಬಳಿ ತಂದು ಸಯ್ಯದ್ ಖಲೀಲ್ ಅವರಿಗೆ ತೋರಿಸಿ, ಅದನ್ನು ಮಾರಾಟ ಮಾಡುವುದಾಗಿ ತಿಳಿಸಿದ್ದಾರೆ. 28 ಲಕ್ಷ ರೂ.ಗಳಿಗೆ ವ್ಯವಹಾರ ಕುದುರಿದ್ದು, ಹಣವನ್ನು ನೀಡಿ ಕಾರನ್ನು ಸಯ್ಯದ್ ಖಲೀಲ್ ತಮ್ಮ ವಶಕ್ಕೆ ಪಡೆದಿದ್ದಾರೆ. ಆ ವೇಳೆ ಕಾರಿನ ದಾಖಲೆಗಳು ಆರ್‌ಟಿಒನಲ್ಲಿ ವರ್ಗಾವಣೆ ಮಾಡುವುದಾಗಿ ತಿಳಿಸಿ, ಜೆರಾಕ್ಸ್ ಪ್ರತಿಗಳನ್ನು ಮಾತ್ರ ದುರಾನಿ ನೀಡಿದ್ದಾನೆ.

2 ದಿನ ಕಾರು ಓಡಿಸಿದ ನಂತರ ಕಾರಿನ ಇಂಜಿನ್ ಹೀಟ್ ಆಗುತ್ತಿರುವುದು ಕಂಡು ಬಂದಿದ್ದು, ಈ ವಿಷಯವನ್ನು ದುರಾನಿಗೆ ತಿಳಿಸಿದಾಗ ಸರ್ವೀಸ್ ಮಾಡಿಸಿಕೊಂಡು ಬರುವುದಾಗಿ ತಿಳಿಸಿ ಕಾರನ್ನು ತೆಗೆದುಕೊಂಡು ಹೋದ ನಂತರ ಮತ್ತೆ ಆತ ಸಂಪರ್ಕಕ್ಕೆ ಸಿಗಲೇ ಇಲ್ಲ ಎಂದು ಸಯ್ಯದ್ ಖಲೀಲ್ ಉರ್ ರೆಹಮಾನ್ ನೀಡಿದ ದೂರನ್ನು ನರಸಿಂಹರಾಜ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ರೈತ ಮಹಿಳೆ ಸರ ಕಿತ್ತುಕೊಂಡು ಪರಾರಿಯಾದ ಖದೀಮ



ನಾಗಮಂಗಲ,ಡಿ.8-ಎಮ್ಮೆ ಮೇಯಿಸಲು ಹೋಗುತ್ತಿದ್ದ ರೈತ ಮಹಿಳೆಯ ಮಾಂಗಲ್ಯ ಸರ ಕಿತ್ತುಕೊಂಡು ಹೋಗಿರುವ ಘಟನೆ ತಾಲೂಕಿನ ಆರಕೆರೆ ಗ್ರಾಮದಿಂದ ವರದಿಯಾಗಿದೆ. ಗ್ರಾಮದ ಶಿವರಾಜ್ ಎಂಬುವರ ಪತ್ನಿ ಭಾಗ್ಯ ಸರ ಕಳೆದುಕೊಂಡವರಾಗಿದ್ದು, ಇವರು ಡಿ.6ರಂದು ಬೆಳಗ್ಗೆ 11.45ರ ಸುಮಾರಿನಲ್ಲಿ ಹಸು ಮತ್ತು ಎಮ್ಮೆಯನ್ನು ತಮ್ಮ ತೆಂಗಿನ ತೋಟದಲ್ಲಿ ಮೇಯಿಸಲು ಹಿಡಿದು ಕೊಂಡು ಆರಕೆರೆ-ಶೆಟ್ಟಹಳ್ಳಿ ರಸ್ತೆಯಲ್ಲಿ ಹೋಗುತ್ತಿದ್ದ ವೇಳೆ ಅವರ ಹಿಂದಿನಿಂದ ಬೈಕ್‌ನಲ್ಲಿ ಬಂದ ಇಬ್ಬರು ಸ್ವಲ್ಪ ದೂರ ಹೋದ ನಂತರ ಬೈಕ್ ಅನ್ನು ತಿರುಗಿಸಿಕೊಂಡು ಬಂದಿದ್ದಾರೆ. ಹಿಂಬದಿ ಸವಾರ ಕೆಳಗಿಳಿದು ಅವರ ಬಳಿ ಬರುತ್ತಿದ್ದಾಗ ಹೆದರಿದ ರೈತ ಮಹಿಳೆ ಹಸು ಮತ್ತು ಎಮ್ಮೆಯನ್ನು ಬಿಟ್ಟು ಊರಿನ ಕಡೆಗೆ ಓಡಿದ್ದಾರೆ. ಆದರೆ ಅವರನ್ನು ಬೆನ್ನಟ್ಟಿದ ಖದೀಮ, ರೈತ ಮಹಿಳೆಯನ್ನು ಕೆಳಗೆ ಬೀಳಿಸಿ ಅವರ ಕತ್ತಿನಲ್ಲಿದ್ದ 44 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಬೈಕ್ ಹತ್ತಿ ಪರಾರಿಯಾಗಿದ್ದಾನೆ. ನಾಗಮಂಗಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಾಲರ್, ಚಿನ್ನದ ಆಸೆಗೆ ಬಿದ್ದು 3.17 ಲಕ್ಷ ಕಳೆದುಕೊಂಡ ಅಮಾಯಕ!

ಹಾಸನ,ಡಿ.8-ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾದ ವ್ಯಕ್ತಿ ವಿದೇಶದಿಂದ ಡಾಲರ್ ಮತ್ತು ಚಿನ್ನ ಕಳುಹಿಸುವುದಾಗಿ ಮೆಸೇಜ್ ಮಾಡಿ, ವ್ಯಕ್ತಿಯಿಂದ 3.17 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿದ್ದಾನೆ. ಹಾಸನ ತಾಲೂಕು ಐದರಕೆರೆ ಗ್ರಾಮದ ಬಿ.ಎಂ.ರಂಗೇಗೌಡ(28) ಎಂಬುವರು ವಂಚನೆಗೊಳಗಾದವರಾಗಿದ್ದು, ಇವರಿಗೆ ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾಗಿದ್ದ ನ್ಯಾನ್ಸಿ ವಿಲಿಯಮ್ಸ್ ಎಂಬ ವ್ಯಕ್ತಿ ವಿದೇಶಿ ಡಾಲರ್ ಮತ್ತು ಚಿನ್ನ ಕಳುಹಿಸುವುದಾಗಿ ಮೆಸೇಜ್ ಮಾಡಿದ್ದಾನೆ. ಅದಕ್ಕೆ ಅವರು ಒಪ್ಪಿಕೊಂಡಾಗ ವಿವಿಧ ಶುಲ್ಕಗಳು ಎಂದು ಕಳೆದ ನ.8ರಿಂದ 24ರವರೆಗೆ ಹಂತಹಂತವಾಗಿ 3,17,320 ರೂ. ವರ್ಗಾವಣೆ ಮಾಡಿಸಿಕೊಳ್ಳಲಾಗಿದೆ. ಮತ್ತೆ ಮತ್ತೆ ಹಣ ವರ್ಗಾಯಿಸುವಂತೆ ಮೆಸೇಜ್ ಮಾಡಿದಾಗ ಅನುಮಾನಗೊಂಡು ಸ್ನೇಹಿತರ ಜೊತೆ ಈ ವಿಷಯವನ್ನು ಹಂಚಿಕೊಂಡಾಗ ರಂಗೇಗೌಡರಿಗೆ ತಾನು ವಂಚನೆಗೊಳಗಾಗಿರುವುದು ಅರಿವಾಗಿದೆ. ಹಾಸನ ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬರೀ ಗದ್ದಲದ ಗೂಡಾದ ನಗರಪಾಲಿಕೆ ಕೌನ್ಸಿಲ್ ಸಭೆ

● ಜನಪರ ವಿಚಾರಗಳ ಬದಲು 'ಅಧಿಕಾರ ಗದ್ದುಗೆಗೆ' ಕಚ್ಚಾಟ ● ಚರ್ಚೆಯೇ ಇಲ್ಲದೆ ಹಲವು ವಿಷಯ ಪಾಸ್ ● 'ವಿಧಾನಸಭೆ' ಅನುಕರಿಸಿದ ಪಾಲಿಕೆ ಸದಸ್ಯರು!



ಮೈಸೂರು, ಡಿ.8(ಆರ್‌ಕೆಬಿ/ಎಸ್‌ಬಿಡಿ) – ಮೈಸೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆ ಗದ್ದಲದಲ್ಲೇ ಆರಂಭವಾಗಿ, ಗದ್ದಲದಲ್ಲೇ ಅಂತ್ಯಗೊಂಡಿತು.

ಪಾಲಿಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಗುರುವಾರ ನಡೆದ ಮೇಯರ್ ಶಿವಕುಮಾರ್ ಅಧ್ಯಕ್ಷತೆಯ ಮೊದಲ ಕೌನ್ಸಿಲ್ ಸಭೆಯಲ್ಲಿ ಸದಸ್ಯರ ನಡುವೆ ವಾಗ್ವಾದ ಹೊರತಾಗಿ ಯಾವುದೇ ಸಾರ್ವಜನಿಕ ಸಮಸ್ಯೆಗಳ ಚರ್ಚೆ ನಡೆಯಲಿಲ್ಲ. ಸ್ಥಾಯಿ ಸಮಿತಿ ಚುನಾವಣೆ ವಿಳಂಬ, ಮೊಬೈಲ್ ಸಿಗ್ನಲ್ ಆಂಟೆನಾ ಬೂಸ್ಟರ್ ಕಂಬಗಳ ಅಳವಡಿಕೆ, ಗದ್ದಲದಲ್ಲೇ ಕಾರ್ಯಸೂಚಿಗಳಿಗೆ ಕೌನ್ಸಿಲ್ ಒಪ್ಪಿಗೆ ಹೀಗೆ ಹಲವು ವಿಚಾರಗಳಿಗೆ ಪದೇ ಪದೆ ಸದಸ್ಯರು ಸದನದ ಬಾವಿಗಿಳಿದು ಧರಣಿ ಕುಳಿತರು. ನಿರಂತರ ಗದ್ದಲದಿಂದಾಗಿ ಬೆಳಗ್ಗೆ ಎರಡು ಬಾರಿ ಸಭೆಯನ್ನು ಮುಂದೂಡಲಾಯಿತು. ಊಟದ ಬಳಿಕವೂ ಗದ್ದಲ ಶಮನವಾಗದ ಕಾರಣ ಒಂದು ತಾಸಿನಲ್ಲೇ ಮೇಯರ್ ಸಭೆ ಮುಂದೂಡಿದರು.

ಸ್ಥಾಯಿ ಸಮಿತಿ ವಿಳಂಬ: ಮೇಯರ್ ಚುನಾವಣೆ ನಡೆದು ಮೂರು ತಿಂಗಳಾದರೂ ಸ್ಥಾಯಿ ಸಮಿತಿಗಳ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಿಲ್ಲ ಎಂದು ವಿರೋಧ ಪಕ್ಷದ(ಕಾಂಗ್ರೆಸ್) ನಾಯಕ ಅಯೂಬ್ ಖಾನ್ ಸಭೆಯಲ್ಲಿ ಕ್ರಿಯಾಲೋಪ ಎತ್ತಿದರು. ಇದಕ್ಕೆ ಶಾಂತಕುಮಾರಿ, ಪುಷ್ಪಲತಾ ಜಗನ್ನಾಥ್ ಇನ್ನಿತರರೂ ದನಿಗೂಡಿಸಿದರು. ಈ ವೇಳೆ ಗದ್ದಲ ಉಂಟಾಯಿತು. ಆ ವೇಳೆ ಕಾಂಗ್ರೆಸ್ ಸದಸ್ಯರ ವಿರುದ್ಧ ಬಿಜೆಪಿ, ಜೆಡಿಎಸ್ ಸದಸ್ಯರು ಹರಿಹಾಯ್ದರು. ಜನರ ಸಮಸ್ಯೆ ಬಗ್ಗೆ ಮೊದಲು ಚರ್ಚೆಯಾಗಬೇಕು ಎಂದು ಕಾಂಗ್ರೆಸ್ ಸದಸ್ಯರು ಮೇಯರ್ ಅವರನ್ನು ಆಗ್ರಹಿಸಿದರು. ಸ್ಥಾಯಿ ಸಮಿತಿಯೇ ಇಲ್ಲದಿದ್ದರೆ ಪಾಲಿಕೆ ಕೆಲಸ ಮಾಡುವುದಾದರೂ ಹೇಗೆ ಎಂದು ಆಗ್ರಹಿಸಿದರು. ಈ ವೇಳೆ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ವಾಗ್ವಾದವೇ ನಡೆಯಿತು.

ಕೌನ್ಸಿಲ್ ಸಭೆ ಮುಗಿದ ನಂತರ ಸ್ಥಾಯಿ ಸಮಿತಿ ಚುನಾವಣೆ ದಿನಾಂಕ ನಿಗದಿಪಡಿಸುವುದಾಗಿ ಮೇಯರ್ ನೀಡಿದ ಭರವಸೆಗೂ ಬಗ್ಗದ ಕಾಂಗ್ರೆಸ್ ಸದಸ್ಯರು ಬಾವಿಗಿಳಿದು, ಧರಣಿ ಆರಂಭಿಸಿದರು. ಮೇಯರ್ ಮನವಿಗೆ ಕಾಂಗ್ರೆಸ್ ಸದಸ್ಯರು ಸ್ಪಂದಿಸದೆ ಗದ್ದಲ ಮುಂದುವರಿಸಿದ್ದರಿಂದ ಮೇಯರ್ ಸಭೆಯನ್ನು 15 ನಿಮಿಷ ಮುಂದೂಡಿದರು.

ಅರ್ಧ ಗಂಟೆಯ ಬಳಿಕ ಮತ್ತೆ ಸಭೆ ಸಮಾವೇಶಗೊಂಡಾಗ ಕಾಂಗ್ರೆಸ್ ಸದಸ್ಯರು ಬಾವಿಗಿಳಿದು ಪ್ರತಿಭಟನೆ ಮುಂದುವರೆಸಿದರು. ಸ್ಥಾಯಿ ಸಮಿತಿ ಚುನಾವಣೆ ನಿಗದಿಪಡಿಸುವಂತೆ ಆಗ್ರಹಿಸಿದರು. ಇದಕ್ಕೆ ಉತ್ತರಿಸಿದ ಮೇಯರ್ ಶಿವಕುಮಾರ್ 15 ದಿನಗಳಲ್ಲಿ ದಿನಾಂಕ ಪ್ರಕಟಿಸಿ, ಚುನಾವಣೆ ನಡೆಸುವುದಾಗಿ ನೀಡಿದ ಭರವಸೆಗೆ ಕಾಂಗ್ರೆಸ್ ಸದಸ್ಯರಿಗೆ ಸಮಾಧಾನ ತರಲಿಲ್ಲ. ಆಡಳಿತ ಪಕ್ಷದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ದಿನಾಂಕ ನಿಗದಿಪಡಿಸಿ ಸಭೆ ನಡೆಸಿ ಎಂದು ಮೇಯರ್‌ಗೆ ಒತ್ತಡ ಹೇರಿದರು.

ಕಾಂಗ್ರೆಸ್ ಸದಸ್ಯರ ಈ ನಡೆ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರನ್ನು ಕೆರಳಿಸಿತು. ಸಭೆ ನಡೆಸುವಂತೆ ಮೇಯರ್ ಅವರನ್ನು ಒತ್ತಾಯಿಸಿದರು. ಇದರಿಂದ ಮತ್ತೆ ಗದ್ದಲ ಹೆಚ್ಚಾಯಿತು. ಈ ಸಮಯದಲ್ಲಿ ಯಾರು ಏನು ಹೇಳುತ್ತಿದ್ದಾರೆಂಬುದೇ ತಿಳಿಯದಾಯಿತು. ಕಾಂಗ್ರೆಸ್ ಸದಸ್ಯರು ಓಗೊಡದೆ ಗದ್ದಲ ಮುಂದುವರಿಸಿದಾಗ ಮೇಯರ್ ಶಿವಕುಮಾರ್ ಅವರು ಎರಡನೇ ಬಾರಿಗೆ ಸಭೆಯನ್ನು ಮುಂದೂಡಿದರು.

ಸಿಟ್ಟಿಗೆದ್ದ ಮೇಯರ್: ಸದಸ್ಯರ ಬಹುಮತದೊಂದಿಗೆ ವಿಷಯಗಳನ್ನು ಒಪ್ಪಲಾಗಿದೆ. ಇದರ ಬಗ್ಗೆ ಆಕ್ಷೇಪಣೆಯಿದ್ದರೆ ಮತಕ್ಕೆ ಹಾಕಬಹುದು. ಈ ಸಂಬಂಧ ಆಯುಕ್ತರು ಸ್ಪಷ್ಟನೆ ನೀಡಲಿದ್ದಾರೆ ಎಂದು ಮೇಯರ್ ಹೇಳಿದರು. ಅದರಂತೆ ಆಯುಕ್ತರು ಮಾತನಾಡಲು ಮುಂದಾದಾಗ ಮಾಜಿ ಮೇಯರ್ ಅಯೂಬ್ ಖಾನ್, ಕೌನ್ಸಿಲ್ ಕಾರ್ಯದರ್ಶಿಯೇ ಸ್ಪಷ್ಟನೆ ನೀಡಬೇಕೆಂದು ಪಟ್ಟು ಹಿಡಿದರು. ಈ ಜಟಾಪಟಿ ತುಂಬಾ ಹೊತ್ತು ಮುಂದುವರೆಯಿತು. ಇದರಿಂದ ಸಿಟ್ಟಿಗೆದ್ದ ಮೇಯರ್ ಶಿವಕುಮಾರ್, ಕೌನ್ಸಿಲ್ ಕಾರ್ಯದರ್ಶಿಗಿಂತ ಆಯುಕ್ತರು ಮೇಲಧಿಕಾರಿಯಲ್ಲವೇ? ನೀವು ಉದ್ದೇಶಪೂರ್ವಕವಾಗಿ ಗಲಾಟೆ ಮಾಡಬೇಡಿ. ಹಿಡನ್ ಅಜೆಂಡಾ ಇಟ್ಟುಕೊಂಡು ಮಾತನಾಡಬೇಡಿ. ನೀವು ಮೇಯರ್ ಆಗಿದ್ದಾಗಲೂ ಈ ರೀತಿಯ ಪ್ರಕರಣಗಳಾಗಿವೆ. ದಯವಿಟ್ಟು ಇಡೀ ಕೌನ್ಸಿಲ್ ಸಭೆ ಹಾಳು ಮಾಡಬೇಡಿ ಎಂದು ಹೇಳಿದರು. ಈ ನಡುವೆ ಅಯೂಬ್ ಖಾನ್, ಬೆಂಗಳೂರಿನಲ್ಲಿ ಐದಾರು ಮಂದಿ ಐಎಎಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದಾರೆ ಎಂದು ಹೇಳುತ್ತಿದ್ದಂತೆ ಮೇಯರ್ ಮತ್ತಷ್ಟು ಸಿಟ್ಟಿಗೆದ್ದರು. ಇಂತಹ ಮನಃಸ್ಥಿತಿಯಿಂದ ಹೊರಬನ್ನಿ. ಅಧಿಕಾರಿಗಳನ್ನು ಅಪರಾಧಿಗಳಂತೆ ಕಾಣಬೇಡಿ. ನಿಮಗೆ ಮೈಸೂರಿನ ಬಗ್ಗೆ ಕಾಳಜಿ ಇಲ್ಲ. ನೀವು ಹೇಳಿದಂತೆ ಮಾಡೋಕಾಗಲ್ಲ ಎಂದರು.

ಗದ್ದಲದ ನಡುವೆಯೇ ಹಲವು ವಿಷಯಗಳಿಗೆ ಒಪ್ಪಿಗೆ

ಪಾಲಿಕೆ 2021-22ನೇ ಸಾಲಿನಲ್ಲಿ ಶೇ.24.10ರ ಯೋಜನೆಯಡಿ ಎಸ್ಸಿ, ಎಸ್ಟಿ ಹಾಗೂ ಪೌರಕಾರ್ಮಿಕರಿಗೆ ಸಂಬಂಧಿಸಿದ ವೈಯಕ್ತಿಕ ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾಯೋಜನೆ ಅನುಷ್ಠಾನ. ಸ್ವಚ್ಛತಾ ಕಾರ್ಮಿಕರು ಸೇವಾವಧಿಯಲ್ಲಿ ಮರಣ ಹೊಂದಿದರೆ ಅವರ ಕುಟುಂಬಕ್ಕೆ 15 ಸಾವಿರ ಶವ ಸಂಸ್ಕಾರ ಸಹಾಯಧನ. ಸಾರ್ವಜನಿಕ ರಸ್ತೆ ಬಸ್ ನಿಲ್ದಾಣ, ಆಟದ ಮೈದಾನ ಹೀಗೆ ಎಲ್ಲೆಂದರಲ್ಲಿ ಕಸ ಹಾಕುವವರಿಗೆ ಮೊದಲ ಬಾರಿ 500 ರೂ. ಹಾಗೂ ಪುನರಾವರ್ತನೆಯಾದರೆ ಸಾವಿರ ರೂ., ಹಾಸ್ಟೆಲ್, ಹೋಟೆಲ್, ರೆಸ್ಟೋರೆಂಟ್ ಭಾರೀ ತ್ಯಾಜ್ಯ ಜನಕರಿಗೆ 20-50 ಸಾವಿರ ರೂ. ದಂಡ. ಪ್ಲಾಸ್ಟಿಕ್ ನಿಷೇಧ ಉಲ್ಲಂಘಿಸಿದವರಿಗೆ ಹಾಗೂ ಅನುಮತಿ ಪಡೆಯದೆ ಎಲ್ಲೆಂದರಲ್ಲಿ ಜಾಹೀರಾತು ಫಲಕ ಹಾಕುವವರಿಗೆ ದಂಡ ವಿಧಿಸಲು ಕೌನ್ಸಿಲ್ ಒಪ್ಪಿದ್ದಾಗಿ ಮೇಯರ್ ಘೋಷಿಸಿದರು.

ಪಾರಂಪರಿಕ ಕಟ್ಟಡಗಳ ಪಕ್ಕ ಮೊಬೈಲ್ ಸಿಗ್ನಲ್ ಬೂಸ್ಟರ್ ಕಂಬಕ್ಕೆ ಆಕ್ಷೇಪ

ಮೈಸೂರು: ಜೆಡಿಎಸ್ ಸದಸ್ಯ ಎಸ್‌ಬಿಎಂ ಮಂಜು, ಮೊಬೈಲ್ ಸಿಗ್ನಲ್ ಆಂಟೆನಾ ಬೂಸ್ಟರ್ ಕಂಬಗಳ ಅಳವಡಿಸುತ್ತಿರುವ ಬಗ್ಗೆ ಕ್ರಿಯಾಲೋಪ ಎತ್ತಿದರಲ್ಲದೆ ಅಧಿಕಾರಿಗಳ ನಿರ್ಲಕ್ಷ್ಯವನ್ನು ಖಂಡಿಸಿದರು. ಮೆಟ್ರೋಪೋಲ್ ವೃತ್ತ, ಕೆ.ಆರ್.ವೃತ್ತ, ಟೌನ್‌ಹಾಲ್, ತಾತಯ್ಯ ವೃತ್ತ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ರಸ್ತೆ, ಕೆಲ ಪಾರಂಪರಿಕ ಸ್ಥಳಗಳೂ ಸೇರಿ 72 ಕಡೆ ಸಿಗ್ನಲ್ ಆಂಟೆನಾ ಬೂಸ್ಟರ್ ಕಂಬಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ. 2019ರಲ್ಲಿಯೇ ಖಾಸಗಿ ಕಂಪನಿಯೊಂದಕ್ಕೆ ಕಾಮಗಾರಿಗೆ ಆದೇಶ ನೀಡಲಾಗಿದ್ದು, 180 ದಿನದೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚನೆ ನೀಡಲಾಗಿದೆ. ಆದರೆ ಕಂಬಗಳನ್ನು ಯಾವುದೇ ಪಾರಂಪರಿಕ ಕಟ್ಟಡಗಳ ಅಥವಾ ಸ್ಥಳಗಳಲ್ಲಿ ಅಳವಡಿಸಬಾರದು ಎಂಬ ನಿಯಮವಿದೆ. ಕಾಮಗಾರಿಗಳನ್ನು 180 ದಿನಗಳಲ್ಲಿ ಪೂರ್ಣಗೊಳಿಸಿ, ವರದಿ ನೀಡಬೇಕೆಂಬ ಷರತ್ತುಗಳಿವೆ. ಆದರೆ ಕಾಮಗಾರಿ ಈಗಲೂ ನಡೆಯುತ್ತಿದೆ. ರಾತ್ರೋರಾತ್ರಿ ಕದ್ದು ಮುಚ್ಚಿ ಕಾಮಗಾರಿ ನಡೆಸಲಾಗುತ್ತಿದೆ. ಇದು ಪಾಲಿಕೆ ಗಮನಕ್ಕೆ ಬಂದಿಲ್ಲವೇ? ಅನುಮತಿ ನೀಡಿದವರು ಯಾರು. 2019ರಲ್ಲಿ ಆಡಳಿತ ನಡೆಸುತ್ತಿದ್ದವರು ಕಾಮಗಾರಿಗೆ ಸೂಚನೆ ನೀಡಿದ್ದಾರೆಯೇ ಎಂದು ಪ್ರಶ್ನಿಸಿ, ಆದೇಶದ ಪ್ರತಿಯನ್ನು ಪ್ರದರ್ಶಿಸಿದರು.



ಪರಿಣಾಮಕಾರಿ ಚರ್ಚೆ ಹೊರತು ಅನಗತ್ಯ ಕಾಲಹರಣ...!

ಎಸ್‌ಬಿಎಂ ಮಂಜು ಅವರ ಹೇಳಿಕೆಗೆ ಜೆಡಿಎಸ್ ಸದಸ್ಯೆ ಪ್ರೇಮಾ ಶಂಕರೇಗೌಡ, ಪಕ್ಷೇತರ ಸದಸ್ಯ ಕೆ.ವಿ.ಶ್ರೀಧರ್ ಇನ್ನಿತರರು ದನಿಗೂಡಿಸಿದರು. ಈ ವೇಳೆ ವಿರೋಧಪಕ್ಷದ ನಾಯಕ ಅಯೂಬ್ ಖಾನ್ ಆಕ್ಷೇಪಿಸಿದರು. ಸಭೆಯಲ್ಲಿ ಮಹತ್ವದ ವಿಚಾರ ಚರ್ಚೆಯಾಗಬೇಕಿದೆ. ಮೇಯರ್ ಆಯ್ಕೆಯಾಗಿ ಮೂರು ತಿಂಗಳಾದರೂ ಸ್ಥಾಯಿ ಸಮಿತಿ ಚುನಾವಣೆ ನಡೆಸಿಲ್ಲ ಎಂದು ಆರೋಪಿಸಿದರು. ಈ ವೇಳೆ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ಕೆ.ವಿ.ಶ್ರೀಧರ್ ಇನ್ನಿತರರು ಅಯೂಬ್ ಖಾನ್ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿದರು.

ವಿಪಕ್ಷದವರಿಗೆ ಮಾತನಾಡಲು ಅವಕಾಶ ನೀಡದಿದ್ದರೆ ಸಭೆ ಬಹಿಷ್ಕರಿಸಿ ಹೊರ ನಡೆಯಬೇಕಾಗುತ್ತದೆ. ಮೊದಲು ಸಾಮಾನ್ಯ ಜನರ ವಿಚಾರಗಳ ಬಗ್ಗೆ ಚರ್ಚಿಸಬೇಕು ಎಂದು ಆಗ್ರಹಿಸಿದರು. ಈ ಹಂತದಲ್ಲಿ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಸದಸ್ಯರ ನಡುವೆ ವಾಗ್ವಾದ ಶುರುವಾಯಿತು. 10 ನಿಮಿಷಗಳಾದರೂ ವಾಗ್ವಾದ ಹೀಗೆ ಮುಂದುವರಿದಾಗ ಮೇಯರ್ ಶಿವಕುಮಾರ್ ಸಭೆ ಮುಂದೂಡಿದರು.

ಜೆಡಿಎಸ್-ಕಾಂಗ್ರೆಸ್ ಜಟಾಪಟಿ

ಕೌನ್ಸಿಲ್ ಸಭೆಯಲ್ಲಿ ಜೆಡಿಎಸ್ ಹಾಗೂ ಕಾಂಗ್ರೆಸ್ ನಡುವೆ ಮಾತಿನ ಚಕಮಕಿ ತಾರಕಕ್ಕೇರಿತ್ತು. ಚರ್ಚೆಯೇ ಇಲ್ಲದೆ ವಿಷಯಗಳನ್ನು ಅಂಗೀಕಾರ ಮಾಡಿದ್ದರೂ ಇದನ್ನು ಸಮರ್ಥಿಸಿಕೊಂಡು ಮಾತನಾಡುವ ಆಡಳಿತದ ಪಾಲುದಾರರಾದ ಜೆಡಿಎಸ್ ಸದಸ್ಯರಿಗೆ ನಾಚಿಕೆ ಆಗುವುದಿಲ್ಲವೇ ಎಂದು ಅಯೂಬ್ ಖಾನ್ ಹೇಳಿದ್ದು ಉಭಯ ಪಕ್ಷಗಳ ಜಟಾಪಟಿಗೆ ಕಾರಣವಾಯಿತು. ಜೆಡಿಎಸ್ ಸದಸ್ಯ ಎಸ್‌ಬಿಎಂ ಮಂಜು, ಅಯೂಬ್ ಖಾನ್ ಕ್ಷಮೆಯಾಚಿಸಬೇಕೆಂದು ಪಟ್ಟು ಹಿಡಿದರು. ಬಳಿಕ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ ಸೇರಿದಂತೆ ಜೆಡಿಎಸ್‌ನ ಎಲ್ಲಾ ಸದಸ್ಯರೂ ಸದನದ ಬಾವಿಗಿಳಿದು ಕ್ಷಮೆಗೆ ಒತ್ತಾಯಿಸಿದರು. ಈ ವೇಳೆ ಮಧ್ಯಪ್ರವೇಶಿಸಿದ ಕಾಂಗ್ರೆಸ್ ಬೆಂಬಲಿತ, ಪಕ್ಷೇತರ ಸದಸ್ಯ ಎಂ.ಶಿವಕುಮಾರ್, ನಗರದ ರಸ್ತೆಗಳು ಹಾಳಾಗಿವೆ. ಕೌನ್ಸಿಲ್ ಹಾಳಾಗಲು ನೀವೇ ಕಾರಣ. ಜನ ಛೀ....ಥೂ ಎಂದು ಉಗಿಯುತ್ತಿದ್ದಾರೆ ಎಂದರು. ಇದರಿಂದ ಜೆಡಿಎಸ್ ಸದಸ್ಯರು ಮತ್ತಷ್ಟು ಸಿಡಿದೆದ್ದರು. ಇಬ್ಬರೂ ಕ್ಷಮೆಯಾಚಿಸಲೇಬೇಕೆಂದು ಹಠ ಹಿಡಿದರು. ಈ ನಡುವೆ ಮೇಯರ್ ಆ ರೀತಿಯ ಪದಗಳನ್ನು ಕಡತದಿಂದ ತೆಗೆಯುವಂತೆ ಸೂಚಿಸಿದರು. ಆದರೆ ಕಾಂಗ್ರೆಸ್‌ನವರು ಕ್ಷಮೆ ಕೇಳುವ ಪ್ರಮೇಯವೇ ಇಲ್ಲ. ಕಡತದಿಂದ ತೆಗೆಯುವಂತಹ ಯಾವುದೇ ಪದ ಬಳಸಿಲ್ಲ ಎಂದರು. ಕ್ಷಮೆ ಕೇಳುವವರೆಗೂ ಅಯೂಬ್ ಖಾನ್ ಹಾಗೂ ಎಂ.ಶಿವಕುಮಾರ್ ಮಾತನಾಡಲು ಬಿಡುವುದಿಲ್ಲ ಎಂದರು. ಅದರಂತೆ ಅಯೂಬ್ ಖಾನ್ ಮಾತನಾಡಲು ನಿಂತಾಗಲೆಲ್ಲಾ ಆಕ್ಷೇಪ ವ್ಯಕ್ತಪಡಿಸಿದರು. ಈ ಗದ್ದಲದ ನಡುವೆಯೇ ಸಭೆ ಮುಗಿಯಿತು.

ಎಂಎಲ್‌ಸಿ ವಿಫಲ ಯತ್ನ: ಸಭೆಯಲ್ಲಿ ಭಾಗವಹಿಸಿದ್ದ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಈ ರೀತಿ ಗಲಾಟೆ ಮಾಡುವುದು ಯಾರಿಗೂ ಶೋಭೆ ತರುವುದಿಲ್ಲ ಎಂದು ಹೇಳಿ ಸದನದ ಬಾವಿಯಲ್ಲಿದ್ದ ಜೆಡಿಎಸ್ ಸದಸ್ಯರ ಮನವೊಲಿಸಿ ತಮ್ಮ ಆಸನದಲ್ಲಿ ಕೂರಿಸುವಲ್ಲಿ ಯಶಸ್ವಿಯಾದರು. ಆದರೆ ಕಾಂಗ್ರೆಸ್ ಸದಸ್ಯರು, ಆಯುಕ್ತರು ಸ್ಪಷ್ಟನೆ ನೀಡಲು ಅವಕಾಶ ನೀಡದೆ ತಮ್ಮ ಪಟ್ಟು ಮುಂದುವರೆಸಿದರು. ಮತ್ತೆ ಗಲಾಟೆ ಹೆಚ್ಚಾಗಿದ್ದರಿಂದ ಮಂಜೇಗೌಡರು ಅನಿವಾರ್ಯವಾಗಿ ಮೌನ ವಹಿಸಿದರು.

ಆಯುಕ್ತರ ಸ್ಪಷ್ಟನೆ: ಕಡೆಗೂ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್ ರೆಡ್ಡಿ, ಕರ್ನಾಟಕ ಮುನ್ಸಿಪಲ್ ಕಾಯ್ದೆಯ ನಿಯಮಾವಳಿಯನ್ನು ಓದಿ ಸ್ಪಷ್ಟನೆ ನೀಡಿದರು. ಮೇಯರ್ ಅಧಿಕಾರ ಅಂತಿಮವಾಗಿರುತ್ತದೆ. ಕೌನ್ಸಿಲ್‌ನಲ್ಲಿ ಸದಸ್ಯರ ಬಹುಮತದ ಒಪ್ಪಿಗೆ ಬಗ್ಗೆ ಆಕ್ಷೇಪಣೆ ಇದ್ದರೆ ಮತಕ್ಕೆ ಹಾಕಲು ಅವಕಾಶವಿದೆ. ಆದರೆ ಸದಸ್ಯರು ಸದನದ ಬಾವಿಯಲ್ಲಿರುವಾಗ ಕೌನ್ಸಿಲ್ ಒಪ್ಪಿಗೆ ಘೋಷಿಸುವುದು ಊರ್ಜಿತವೋ ಅಥವಾ ಅನೂರ್ಜಿತವೋ ಎಂಬುದರ ಬಗ್ಗೆ ಕಾಯ್ದೆಯಲ್ಲಿ ನಮೂದಿಸಿಲ್ಲ ಎಂದು ತಿಳಿಸಿದರು.

ಸಭೆ ಮುಂದೂಡಿಕೆ: ಮೇಯರ್, 1ರಿಂದ 5 ವಿಷಯಗಳ ಊರ್ಜಿತವಾಗಿದೆ, ಮುಂದಿನ ವಿಷಯಕ್ಕೆ ಹೋಗೋಣ ಎಂದು ಗದ್ದಲ ನಡುವೆಯೇ ಕಾರ್ಯಸೂಚಿಯಲ್ಲಿನ ವಿಷಯ ಪ್ರಕಟಿಸಿದರು. ಆದರೆ ಕಾಂಗ್ರೆಸ್ ಸದಸ್ಯರು ಮತ್ತೆ ಸದನದ ಬಾವಿಗಿಳಿದು ಪ್ರತಿಭಟಿಸಿದ್ದರಿಂದ 6 ವಿಷಯವನ್ನು ಸಹ ಒಪ್ಪಲಾಗಿದೆ ಎಂದು ಘೋಷಿಸಿ ಸಭೆಯನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಿದರು. ಉಪ ಮೇಯರ್ ಡಾ.ರೂಪಾ ಸಭೆಯಲ್ಲಿದ್ದರು.

ಮೈಸೂರಿನ ಹೊರವಲಯದಲ್ಲಿ ಅಪರೂಪದ 'ಕಾಡುಬೆಕ್ಕು' ಪ್ರತ್ಯಕ್ಷ

ಮೈಸೂರು, ಡಿ.8(ಎಂಟಿವೈ)- ಮೈಸೂರಿನ ಹೊರವಲಯದಲ್ಲಿ ಅಪರೂಪದ 'ಕಾಡುಬೆಕ್ಕು' ಪತ್ತೆಯಾಗಿದೆ. ವನ್ಯಜೀವಿ ಛಾಯಾಗ್ರಾಹಕ ಸಾಗರ್‌ಸುರೇಶ್ ಎರಡು ದಿನದ ಹಿಂದೆ ಮೈಸೂರಿನ ಹೊರವಲಯದಲ್ಲಿ ಹಾಡಹಗಲೇ ಕಾಡುಬೆಕ್ಕು ಸೆರೆ ಹಿಡಿದಿದ್ದಾರೆ. ಸಾಮಾನ್ಯ ಬೆಕ್ಕಿಗಿಂತ ನೀಳಕಾಯ ದೇಹ ಹೊಂದಿದ್ದು, ಎತ್ತರ ಹಾಗೂ ಉದ್ದವಾಗಿರುತ್ತದೆ. ಸಾಮಾನ್ಯವಾಗಿ ಈ ಹಿಂದೆ ಅರಣ್ಯ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತಿದ್ದ ಕಾಡುಬೆಕ್ಕು ತನ್ನ ವೈಶಿಷ್ಟ್ಯದಿಂದಲೇ ಜನರ ಗಮನ ಸೆಳೆಯಲಿದೆ. ಇತ್ತೀಚಿನ ದಿನಗಳಲ್ಲಿ ಅಪರೂಪದ ಪ್ರಾಣಿ ಪಟ್ಟಿಗೆ ಕಾಡುಬೆಕ್ಕು ಸೇರಿಸಲಾಗಿದೆ.



ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಛಾಯಾಗ್ರಾಹಕ ಸಾಗರ್ ಸುರೇಶ್ ಮಾತನಾಡಿ, ಪಕ್ಷಿ ವೀಕ್ಷಣೆಗೆಂದು ಮೈಸೂರಿನ ಹೊರವಲಯಕ್ಕೆ ಸ್ನೇಕ್ ಪ್ರದೀಪ್ ಅವರೊಂದಿಗೆ ತೆರಳಿದ್ದಾಗ ದೂರದಲ್ಲಿ ಬೆಕ್ಕು ಕುಳಿತಿರುವುದು ಕಂಡು ಬಂದಿದೆ. ಅದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದು ಅಪರೂಪದ ಕಾಡುಬೆಕ್ಕು ಎಂದು ತಿಳಿಯಿತು. ಐದಾರು ಫೋಟೋ ತೆಗೆಯುತ್ತಿದ್ದಂತೆ ಅದು ಮಿಂಚಿನ ವೇಗದಲ್ಲಿ ಕಣ್ಮರೆಯಾಯಿತು. 15-20 ವರ್ಷ ಜೀವಿತಾವಧಿ ಕಾಡುಬೆಕ್ಕಿನದ್ದಾಗಿದ್ದು, ಇಲಿ ಹಾಗೂ ಮೊಲವನ್ನು ಬೇಟೆಯಾಡುವ ಸಾಮರ್ಥ್ಯ ಹೊಂದಿದೆ. ವರ್ಷದಲ್ಲಿ 2 ಬಾರಿ ಮರಿಗಳಿಗೆ ಜನ್ಮ ನೀಡುತ್ತದೆ. ಹಗಲು, ರಾತ್ರಿ ಆಕ್ಟೀವ್ ಆಗಿರುವ ಪ್ರಾಣಿ ಇದಾಗಿದೆ. ಮೈಸೂರು ವಲಯದಲ್ಲೇ ಕಾಡುಬೆಕ್ಕು ಕಂಡು ಸಂತೋಷವಾಗಿದೆ ಎಂದರು.

ಮಹಾರಾಷ್ಟ್ರದ ಗಡಿ ತಂಟೆ ಖಂಡಿಸಿ ಮೈಸೂರಲ್ಲಿ ಕರವೇ ಪ್ರತಿಭಟನೆ



ಮೈಸೂರು,ಡಿ.8(ಎಂಟಿವೈ)-ಗಡಿ ವಿವಾದಕ್ಕೆ ಸಂಬಂಧಪಟ್ಟಂತೆ ಪುಂಡಾಟಿಕೆ ಮೆರೆಯುತ್ತಿರುವ ಮಹಾರಾಷ್ಟ್ರದ ನಡೆ ಖಂಡಿಸಿ, ಮೈಸೂರಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಕೋರ್ಟ್ ಮುಂಭಾಗವಿರುವ ಮಹಾತ್ಮಗಾಂಧಿ ಪುತ್ಥಳಿ ಮುಂದೆ ಗುರುವಾರ ಪ್ರತಿಭಟನೆ ನಡೆಸಿದ ಕರವೇ ಕಾರ್ಯಕರ್ತರು, ಮಹಾರಾಷ್ಟ್ರದ ಮುಖ್ಯಮಂತ್ರಿ ಹಾಗೂ ಶಿವಸೇನೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಪಟ್ಟಂತೆ ಶಿವಸೇನೆ, ಎಂಇಎಸ್ ಕಾರ್ಯಕರ್ತರು ಮಹಾರಾಷ್ಟ್ರದಲ್ಲಿ ಕರ್ನಾಟಕದ ವಾಹನಗಳ ಮೇಲೆ ಮಸಿ ಬಳಿದು, ಪುಂಡಾಟಿಕೆ ಪ್ರದರ್ಶಿಸಿದ್ದಾರೆ. ಇದನ್ನು ಕನ್ನಡಿಗರು ಸಹಿಸುವುದಿಲ್ಲ. ಮರಾಠಿಗರ ಪುಂಡಾಟಿಕೆಗೆ ಪ್ರತಿಯಾಗಿ ಕನ್ನಡಿಗರು ಪ್ರತ್ಯುತ್ತರ ನೀಡಬಹುದು. ಆದರೆ, ಸಾಮರಸ್ಯ ಕದಡಲು ಕನ್ನಡಿಗರು ಬಯಸುವುದಿಲ್ಲ. ಕೂಡಲೇ ಪುಂಡಾಟಿಕೆಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಪ್ರವೀಣ್‌ಕುಮಾರ್ ಮಾತನಾಡಿ, ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಮಹಾಜನ್ ವರದಿಯೇ ಅಂತಿಮ. ಈ ವರದಿಯನ್ನು ಕರ್ನಾಟಕ ಒಪ್ಪಿಕೊಂಡಿರುವಂತೆ ಮಹಾರಾಷ್ಟ್ರವೂ ಒಪ್ಪಿಕೊಳ್ಳಬೇಕು. ಪುಂಡಾಟಿಕೆ ಮುಂದುವರೆಸಿದರೆ, ತಕ್ಕ ಪಾಠ ಕಲಿಸಲು ಕನ್ನಡಿಗರು ಬದ್ಧರಾಗಿದ್ದಾರೆ. ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಮೇಲೆ ದೌರ್ಜನ್ಯ ನಿಲ್ಲಿಸಬೇಕು. ಈಗಾಗಲೇ ಸಾಂಕೇತಿಕವಾಗಿ ಮಹಾರಾಷ್ಟ್ರದ ಗಡಿಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಕರವೇ ಮೈಸೂರು ಜಿಲ್ಲಾ ಘಟಕದ ಸದಸ್ಯರಾದ ಜಿ.ಲೋಕೇಶ್ ಕುಮಾರ್, ಹೇಮಂತ್‌ಗೌಡ, ರಘು, ಗಣೇಶ್, ಸುನಂದ್, ಲಾಲು, ಅಸ್ಲಂ, ಮಂಜುನಾಥ, ಶಿವರಾಜು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಎಟಿಐ ಗೆಸ್ಟ್ ಹೌಸ್‌ನಿಂದ ಗೃಹೋಪಯೋಗಿ ವಸ್ತುಗಳ ಕಣ್ಮರೆ ಪ್ರಕರಣಕ್ಕೆ ಹೊಸ ತಿರುವು

ಎಟಿಐ ಅಧಿಕಾರಿಗಳಿಂದ ಮೈಸೂರು ಡಿಸಿಗೆ ಬರೆದ 4ರಲ್ಲಿ 3 ಪತ್ರಗಳು ನಾಪತ್ತೆ!

ಮೈಸೂರು, ಡಿ.8(ಆರ್‌ಕೆ)-ಮೈಸೂರಿನ ಲಲಿತ ಮಹಲ್ ರಸ್ತೆಯಲ್ಲಿರುವ ಆಡಳಿತ ತರಬೇತಿ ಸಂಸ್ಥೆ (ಎಟಿಐ)ಯ ಗೆಸ್ಟ್ ಹೌಸ್‌ನಿಂದ ಗೃಹೋಪಯೋಗಿ ವಸ್ತುಗಳು ಕಣ್ಮರೆಯಾಗಿವೆ ಎಂಬ ಪ್ರಕರಣವೀಗ ಹೊಸ ತಿರುವು ಪಡೆದುಕೊಂಡಿದೆ.

ಗೆಸ್ಟ್ ಹೌಸ್‌ನಲ್ಲಿದ್ದ ಕೆಲ ವಸ್ತುಗಳು ನಾಪತ್ತೆಯಾಗಿರುವ ಕುರಿತಂತೆ ಈ ಹಿಂದೆಯೇ ಮೂರು ಪತ್ರ ಬರೆದಿದ್ದರೂ, ಉತ್ತರ ಬಾರದ ಕಾರಣ 4ನೇ ಪತ್ರ ರವಾನಿಸುತ್ತಿದ್ದೇವೆ ಎಂದು ಇತ್ತೀಚೆಗೆ ಎಟಿಐ ಜಂಟಿ ನಿರ್ದೇಶಕರು ಮೈಸೂರು ಜಿಲ್ಲಾಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ನವೆಂಬರ್ 30ರಂದು ಆಡಳಿತ ತರಬೇತಿ ಸಂಸ್ಥೆ ಜಂಟಿ ನಿರ್ದೇಶಕಿ ಎಸ್.ಪೂವಿತ್ ಅವರು ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಿಗೆ ಸಂಸ್ಥೆಯ ಮಹಾ ನಿರ್ದೇಶಕರ ನಿರ್ದೇಶನದಂತೆ ಬರೆದಿರುವ 4ನೇ ಪತ್ರದಲ್ಲಿ 2020ರ ಅಕ್ಟೋಬರ್ 2ರಿಂದ ನವೆಂಬರ್ 14ರವರೆಗೆ ಅಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ಎಟಿಐ ಗೆಸ್ಟ್ ಹೌಸ್‌ನಲ್ಲಿ ವಾಸ್ತವ್ಯ ಹೂಡಿದ್ದರು ಎಂದು ತಿಳಿಸಿದ್ದಾರೆ.

20ರ ನವೆಂಬರ್ 14ರಂದು ಗೆಸ್ಟ್ ಹೌಸ್ ತೆರವು ಮಾಡಿದ ನಂತರ ಕೊಠಡಿಯಲ್ಲಿದ್ದ 20 ವಸ್ತುಗಳು ಕಣ್ಮರೆಯಾಗಿವೆ ಎಂದು ಜಂಟಿ ನಿರ್ದೇಶಕರು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ. ಈ ಕುರಿತು ಪ್ರತಿಕ್ರಿಯೆಗಾಗಿ ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರು, ಆ ಬಗ್ಗೆ ಎಟಿಐ ಜಂಟಿ ನಿರ್ದೇಶಕರು ಬರೆದಿರುವ ಪತ್ರ ನನಗೆ ತಲುಪಿದೆ. ಆದರೆ ಅವರು ಈ ಹಿಂದೆ ಬರೆದಿದ್ದ ಮೂರು ಪತ್ರಕ್ಕೆ ಉತ್ತರ ಬಾರದ ಕಾರಣ ಈಗ 4ನೇ ಪತ್ರ ಬರೆಯುತ್ತಿರುವುದಾಗಿ ತಿಳಿಸಿದ್ದಾರೆ ಎಂದರು.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಜಿಲ್ಲಾಧಿಕಾರಿಗಳ ನಿವಾಸಕ್ಕೆ ತಂದ ಹಾಗೂ ಕೊಂಡೊಯ್ದು ವಸ್ತುಗಳ ಬಗ್ಗೆ ಯಾವುದೇ ಇನ್‌ವೆಂಟರಿ (ದಾಖಲೆ) ನಿರ್ವಹಣೆ ಮಾಡಿಲ್ಲ. ಆದರೂ, ಪರಿಶೀಲಿಸಿ ಅವರು ಪತ್ರದಲ್ಲಿ ಹೇಳಿರುವ ವಸ್ತುಗಳು ನಿವಾಸದಲ್ಲಿದ್ದರೆ ಎಟಿಐಗೆ ಹಿಂದಿರುಗಿಸುತ್ತೇವೆ ಎಂದರು.

ನಾನು ಈ ವರ್ಷದ ಅಕ್ಟೋಬರ್‌ನಲ್ಲಷ್ಟೇ ಅಧಿಕಾರ ವಹಿಸಿಕೊಂಡಿದ್ದೇನೆ. ಆದ್ದರಿಂದ ಎಟಿಐ ಜಂಟಿ ನಿರ್ದೇಶಕರು ಈ ಹಿಂದೆ ಬರೆದಿದ್ದೇವೆ ಎಂದು ಹೇಳುತ್ತಿರುವ ಮೂರು ಪತ್ರಗಳ ಬಗ್ಗೆ ತಮ್ಮ ಕಚೇರಿಯಲ್ಲಿ ಯಾವುದೇ ಕಡತಗಳಿರುವುದು ಕಂಡು ಬಂದಿಲ್ಲ ಎಂದು ತಿಳಿಸಿದರು.

ಪತ್ರಗಳ ಬಗ್ಗೆ ಪ್ರತಿಕ್ರಿಯೆ ನೀಡಿದ ಈ ಹಿಂದಿನ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ನನ್ನ ಅವಧಿಯಲ್ಲಿ ಎಟಿಐ ಜಂಟಿ ನಿರ್ದೇಶಕರು ಬರೆದಿದ್ದಾರೆಂಬ ಮೂರು ಪತ್ರಗಳ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಯಾವ ಪತ್ರವನ್ನೂ ನಾನು ಸ್ವೀಕರಿಸಿರಲಿಲ್ಲ ಎಂದು ತಿಳಿಸಿದರು.

ಎಟಿಐ ಗೆಸ್ಟ್ ಹೌಸ್‌ನಲ್ಲಿ ಕೆಲ ಪದಾರ್ಥಗಳು ಕಣ್ಮರೆಯಾಗಿರುವ ಕುರಿತಂತೆ ಮಾಧ್ಯಮಗಳಲ್ಲಿ ವರದಿ ಬಂದಾಗಲೇ ನನಗೂ ತಿಳಿಯಿತು. ನಾನೂ ಒಂದೂವರೆ ವರ್ಷ ಮೈಸೂರಲ್ಲಿ ಡಿಸಿಯಾಗಿ ಕೆಲಸ ಮಾಡಿದೆ. ಆದರೆ ಈ ವಿಷಯ ಇಷ್ಟು ವರ್ಷದ ನಂತರ ಬೆಳಕಿಗೆ ಬಂದಿರುವುದು ನನಗೂ ಅಚ್ಚರಿ ಮೂಡಿಸಿದೆ ಎಂದು ಡಾ.ಬಗಾದಿ ಗೌತಮ್ ತಿಳಿಸಿದರು.

ಬೆಲೆಬಾಳುವ ರೋಸ್‌ವುಡ್ ಫರ್ನಿಚರ್ ಬಿಟ್ಟು ಚಿಲ್ಲರೆ ವಸ್ತು ಕೊಂಡೊಯ್ಯುವಷ್ಟು ಚಿಕ್ಕವಳಲ್ಲ...



ಮೈಸೂರು, ಡಿ.8(ಆರ್‌ಕೆ)-ಲಕ್ಷಾಂತರ ರೂ. ಬೆಲೆ ಬಾಳುವ ರೋಸ್‌ವುಡ್ ಫರ್ನೀಚರ್ ಬಿಟ್ಟು ಎಟಿಐ ಗೆಸ್ಟ್ ಹೌಸ್‌ನಿಂದ ಚಿಲ್ಲರೆ ವಸ್ತುಗಳ ಕೊಂಡೊಯ್ಯುವಷ್ಟು ಚಿಕ್ಕವಳಲ್ಲ ನಾನು. ಅದರ ಅವಶ್ಯಕತೆಯೂ ನನಗಿಲ್ಲ ಎಂದು ಮೈಸೂರಿನ ಮಾಜಿ ಜಿಲ್ಲಾಧಿಕಾರಿ, ಹಾಲಿ ಹಿಂದೂ ಧಾರ್ಮಿಕ ದತ್ತಿ ಇಲಾಖೆ ಆಯುಕ್ತೆ ರೋಹಿಣಿ ಸಿಂಧೂರಿ ತಿಳಿಸಿದ್ದಾರೆ.

ಎಟಿಐ ಗೆಸ್ಟ್ ಹೌಸ್‌ನಿಂದ 20 ಬಗೆಯ ಗೃಹೋಪಯೋಗಿ ವಸ್ತುಗಳು ಕಣ್ಮರೆಯಾಗಿರುವ ಬಗ್ಗೆ ಆ ಸಂಸ್ಥೆಯ ಜಂಟಿ ನಿರ್ದೇಶಕರು ಬರೆದಿದ್ದಾರೆನ್ನಲಾದ 3 ಪತ್ರಗಳ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ನಾನು ಮೈಸೂರು ಡಿಸಿಯಾಗಿದ್ದಾಗ ಶರತ್ ಅವರು ಡಿಸಿ ಅಧಿಕೃತ ನಿವಾಸ ಖಾಲಿ ಮಾಡಿರಲಿಲ್ಲ. ಹಾಗಾಗಿ ಎಟಿಐ ಗೆಸ್ಟ್‌ಹೌಸ್‌ನಲ್ಲಿ 2 ತಿಂಗಳು ನೆಲೆಸಿದ್ದೆ. ಗೆಸ್ಟ್ ಹೌಸ್ ಖಾಲಿ ಮಾಡಿದಾಗ ಅಲ್ಲಿದ್ದ ಚಿಕ್ಕಪುಟ್ಟ ವಸ್ತು ಕಳುವಾಗಿವೆ ಎಂದು ಈಗ ಹೇಳುತ್ತಿರುವುದು ಹಾಸ್ಯಾಸ್ಪದವಾಗಿದೆ ಎಂದರು. ಒಂದೂವರೆಯಿಂದ 2 ವರ್ಷ ನಾನೇ ಡಿಸಿಯಾಗಿದ್ದೆ. ಆ ಸಂದರ್ಭ ಎಟಿಐ ಜಂಟಿ ನಿರ್ದೇಶಕರು ಪತ್ರ ಬರೆದಿರುವುದು ನನಗೆ ಗೊತ್ತಿಲ್ಲ. ಹಾಗೊಂದು ವೇಳೆ ಕೊಂಡೊಯ್ಯಬೇಕೆಂದಿದ್ದರೆ ಎಟಿಐನಲ್ಲಿರುವ ಬೆಲೆಬಾಳುವ ರೋಸ್‌ವುಡ್ ಫರ್ನೀಚರ್‌ಗಳನ್ನೇ ಕೊಂಡೊಯ್ಯಬಹುದಿತ್ತಲ್ಲವೇ? ಎಂದು ಸಿಂಧೂರಿ ಪ್ರಶ್ನಿಸಿದರು.

ಈ ವಿಷಯ ಮಾಧ್ಯಮಗಳಲ್ಲಿ ಪ್ರಕಟವಾದಾಗಲೇ ನನಗೆ ತಿಳಿದದ್ದು. ಈ ಸಣ್ಣಪುಟ್ಟ ವಸ್ತುಗಳು ನಾಪತ್ತೆಯಾಗಿವೆ ಎಂಬ ವಿಚಾರದಲ್ಲಿ ಪ್ರತಿಕ್ರಿಯಿಸಲು ನನಗೆ ಇಷ್ಟವಾಗುತ್ತಿಲ್ಲ. ಏಕೆಂದರೆ ಇದು 'ಸಿಲ್ಲಿ' ವಿಷಯವಾಗಿದ್ದು, ಇದಕ್ಕಿಂತ ನನಗೆ ಮಾಡಲು ಬೇರೆ ಹಲವು ಪ್ರಮುಖ ಕೆಲಸಗಳಿವೆ. ಇಂತಹ ಸ್ಟುಪಿಡ್ ವಿಚಾರಗಳನ್ನು ಕೇಳಿ ನನಗೆ ಏನು ಹೇಳಬೇಕೆಂದೇ ತೋಚುತ್ತಿಲ್ಲ ಎಂದರು. ಈವರೆಗೆ ಎಟಿಐಗೆ ಪ್ರಭಾರ ಜಂಟಿ ನಿರ್ದೇಶಕರಿರುತ್ತಿದ್ದರು. ಇದೀಗ ಕಳೆದ 6 ತಿಂಗಳಿಂದ ಎಸ್.ಪೂವಿತ್ ಅವರು ಪೂರ್ಣಾವಧಿ ಜಂಟಿ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದು, ಹಳೇ ಕಡತಗಳನ್ನು ಪರಿಶೀಲಿಸಿದಾಗ ಗೆಸ್ಟ್ ಹೌಸ್‌ನಲ್ಲಿ 20 ವಸ್ತುಗಳು ನಾಪತ್ತೆಯಾಗಿರುವ ಬಗ್ಗೆ ತಿಳಿದಿದೆ ಎಂದು ಸಂಸ್ಥೆ ಮೂಲಗಳು ತಿಳಿಸಿವೆ. ಈ ಸಂಬಂಧ ಕಚೇರಿ ದೂರವಾಣಿ ಮೂಲಕ ಜಂಟಿ ನಿರ್ದೇಶಕರನ್ನು ಸಂಪರ್ಕಿಸಲು 'ಮೈಸೂರು ಮಿತ್ರ' ಪ್ರಯತ್ನಿಸಲಾಗಿ ಅವರು ಸಭೆಯಲ್ಲಿದ್ದಾರೆಂದು ಸಿಬ್ಬಂದಿ ತಿಳಿಸಿದರು. ಆದರೆ ಎಟಿಐ ಜಂಟಿ ನಿರ್ದೇಶಕರು ಈ ಹಿಂದೆ ಡಿಸಿಗೆ ಬರೆದಿದ್ದಾರೆನ್ನಲಾದ 3 ಪತ್ರಗಳು ಏನಾದವು? ಎಂಬುದರ ಬಗ್ಗೆ ಯಾರಿಗೂ ಮಾಹಿತಿ ಇಲ್ಲದಿರುವುದು ಕುತೂಹಲ ಮೂಡಿಸಿದೆ.

ಮೈಸೂರು ಮಿತ್ರ

ಒಂದನೇ ಪುಟದಿಂದ

ಬಿಜೆಪಿಗೆ ಭರ್ಜರಿ ಗೆಲುವು

ಇದೀಗ ಈ ದಾಖಲೆಯನ್ನು ಬಿಜೆಪಿ ಮುರಿದಿದೆ. ಗುಜರಾತ್‌ನಲ್ಲಿ ಮುಸ್ಲಿಂ ಪ್ರಾಬಲ್ಯವಿರುವ 19 ಕ್ಷೇತ್ರಗಳ ಪೈಕಿ 17ರಲ್ಲಿ ಗೆಲ್ಲುವ ಮೂಲಕ ಬಿಜೆಪಿ ಮುಸ್ಲಿಮರೂ ಕೂಡ ತಮ್ಮ ಮೇಲೆ ಒಲವು ಹೊಂದಿದ್ದಾರೆ ಎಂಬುದನ್ನು ಈ ಚುನಾವಣೆಯಲ್ಲಿ ತೋರಿಸಿದೆ. ಉಳಿದ ಎರಡು ಸ್ಥಾನಗಳು ಕಾಂಗ್ರೆಸ್ ಪಾಲಾದರೆ, ಮುಸ್ಲಿಂ ಪ್ರಾಬಲ್ಯವಿರುವ 19 ಕ್ಷೇತ್ರಗಳ ಪೈಕಿ 13ರಲ್ಲಿ ಸ್ಪರ್ಧಿಸಿದ್ದ ಅಸಾದುದ್ದೀನ್ ಓವೈಸಿ ನೇತೃತ್ವದ ಎಐಎಂಐಎಂ ಒಂದೇ ಒಂದು ಸ್ಥಾನವನ್ನೂ ಕೂಡ ಪಡೆಯುವಲ್ಲಿ ವಿಫಲವಾಗಿದೆ. ಲಿಂಬಾಯತ್ ಕ್ಷೇತ್ರದಲ್ಲಿ ಒಟ್ಟು 44 ಮಂದಿ ಸ್ಪರ್ಧಿಸಿದ್ದು, ಅವರಲ್ಲಿ 36 ಅಭ್ಯರ್ಥಿಗಳು ಮುಸ್ಲಿಮರಾಗಿದ್ದರು. ಈ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸಂಗೀತಾ ಬೆನ್ ರಾಜೇಂದ್ರ ಪಾಟೀಲ್ ಗೆಲುವು ಸಾಧಿಸುವ ಮೂಲಕ ಗಮನ ಸೆಳೆದಿದ್ದಾರೆ. ಗೋಧ್ರಾದಲ್ಲಿ ಬಿಜೆಪಿ ಅಭ್ಯರ್ಥಿ ಚಂದ್ರ ಸಿನ್ಹ ರಾಮುಲ್ಜಿ ಅವರು ಸತತ 6ನೇ ಬಾರಿ ಗೆಲುವು ಸಾಧಿಸುವ ಮೂಲಕ ದಾಖಲೆ ನಿರ್ಮಿಸಿದ್ದಾರೆ. ಗಾಂಧಿ ಧಾಮ ಕ್ಷೇತ್ರದಲ್ಲಿ ತಮ್ಮ ಸೋಲು ಖಚಿತವಾಗುತ್ತಿದ್ದಂತೆಯೇ ಕಾಂಗ್ರೆಸ್ ಅಭ್ಯರ್ಥಿ ಭರತ್ ಬೈ ವೆಲ್ಜಿಬೈ ಸೋಲಂಕಿ ಅವರು ಕತ್ತಿಗೆ ಕೇಸರಿ ಶಾಲನ್ನು ಬಿಗಿಯಾಗಿ ಸುತ್ತಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವಂತೆ ಹೈಡ್ರಾಮಾ ನಡೆಸಿದ ವಿಡಿಯೋ ವೈರಲ್ ಆಗಿದೆ. 2017ರಲ್ಲಿ ನಡೆದ ಚುನಾವಣೆಯಲ್ಲಿ 99 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿ ಅಧಿಕಾರ ಹಿಡಿದಿದ್ದ ಬಿಜೆಪಿ, ಈ ಬಾರಿ 156 ಸ್ಥಾನಗಳನ್ನು ಪಡೆದರೆ, ಆಗ 77 ಸ್ಥಾನ ಪಡೆದಿದ್ದ ಕಾಂಗ್ರೆಸ್ 17ಕ್ಕೆ ಕುಸಿದಿದೆ. ಅಧಿಕೃತ ವಿರೋಧ ಪಕ್ಷ ಸ್ಥಾನ ದೊರೆಯಬೇಕಾದರೆ, ಒಟ್ಟು ಕ್ಷೇತ್ರಗಳ ಪೈಕಿ ಕನಿಷ್ಠ ಶೇ.10ರಷ್ಟು ಸ್ಥಾನಗಳನ್ನು ಪಡೆದಿರಬೇಕು. ಗುಜರಾತ್‌ನಲ್ಲಿ ಒಟ್ಟು 182 ಸ್ಥಾನಗಳಿದ್ದು, ಕಾಂಗ್ರೆಸ್ ಕೇವಲ 17 ಸ್ಥಾನ ಮಾತ್ರ ಗಳಿಸಿರುವುದರಿಂದ ಅಧಿಕೃತ ವಿರೋಧ ಪಕ್ಷದ ಸ್ಥಾನ ಪಡೆಯಲೂ ಕಾಂಗ್ರೆಸ್ ವಿಫಲವಾಗಿದೆ.

ಡಿಸೆಂಬರ್ 12ಕ್ಕೆ ಪ್ರಮಾಣ

ಸ್ವೀಕರಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಗುಜರಾತ್ ಬಿಜೆಪಿ ಅಧ್ಯಕ್ಷ ಸಿ.ಆರ್.ಪಾಟೀಲ್ ತಿಳಿಸಿದ್ದಾರೆ. ಭೂಪೇಂದ್ರ ಪಟೇಲ್ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಅವರು ಕಳೆದ ವರ್ಷ ಸೆಪ್ಟೆಂಬರ್ 12ರಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಮೊದಲ ಬಾರಿಗೆ ಆಯ್ಕೆಯಾಗಿದ್ದರು. ಗುಜರಾತ್‌ನಲ್ಲಿ ಏಳನೇ ಬಾರಿಗೆ ಬಿಜೆಪಿ ಅಧಿಕಾರ ಹಿಡಿಯುತ್ತಿದ್ದು, ಭೂಪೇಂದ್ರ ಪಟೇಲ್ ಮತ್ತೆ ಮುಖ್ಯ ಮಂತ್ರಿಯಾಗಲಿದ್ದಾರೆ ಎಂದು ಸಿ.ಆರ್.ಪಾಟೀಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪುಸ್ತಕ ಮಾರಾಟ, ಹಂಚಿಕೆ ತಡೆಯಾಜ್ಞೆ ತೆರವು

ಸತ್ರ ನ್ಯಾಯಾಧೀಶರಾದ ಜೆ.ಆರ್.ಮೆಂಡೋನ್ಸಾ ನೇತೃತ್ವದ ಪೀಠ ಮಾನ್ಯ ಮಾಡಿದೆ. ಇದರೊಂದಿಗೆ ಕೃತಿಕಾರ ಅಡ್ಡಂಡ ಸಿ.ಕಾರ್ಯಪ್ಪ, ಪುಸ್ತಕ ಪ್ರಕಟಿಸಿರುವ ಅಯೋಧ್ಯಾ ಪ್ರಕಾಶನ, ಪುಸ್ತಕ ಮುದ್ರಿಸಿರುವ ರಾಷ್ಟ್ರೋತ್ಥಾನ ಮುದ್ರಣಾಲಯಕ್ಕೆ ಪುಸ್ತಕ ಹಂಚಿಕೆ ಮತ್ತು ಮಾರಾಟ ಮಾಡದಂತೆ ನ್ಯಾಯಾಲಯ ನೀಡಿದ್ದ ತಡೆ ಆದೇಶ ತೆರವುಗೊಂಡಿದ್ದು, ಈ ಸಂಬಂಧ ವಿಸ್ತೃತ ಆದೇಶ ಹೊರಬೀಳಬೇಕಿದೆ.

ಟಿಪ್ಪುವಿನ ನೈಜ ವ್ಯಕ್ತಿತ್ವವನ್ನು ಅನಾವರಣ ಮಾಡುವುದಾಗಿ ಹೇಳುತ್ತಾ, ಟಿಪ್ಪುವಿನ ಹಾಗೂ ಆ ಮೂಲಕ ಇಸ್ಲಾಂ ಸಮುದಾಯದ ಭಾವನೆಗಳಿಗೆ ಧಕ್ಕೆ ತರುವಂಥ ಬರಹಗಳನ್ನು ಪುಸ್ತಕದಲ್ಲಿ ನೀಡಲಾಗಿದೆ. ಇಂಥ ಕೃತಿಯು ಸಮಾಜದಲ್ಲಿ ಮತೀಯ ಭಾವನೆಗಳನ್ನು ಕದಡಿ, ಕೋಮು ಸೌಹಾರ್ದತೆಗೆ ಧಕ್ಕೆ ತರುವಂತಿದ್ದಾಗಿದೆ ಎಂದು ಆರೋಪಿಸಿ ಕೃತಿಯ ಮಾರಾಟ ಹಾಗೂ ಆ ಕೃತಿಯನ್ನು ಆಧರಿಸಿ ನಾಟಕದ ಪ್ರದರ್ಶನಗಳಿಗೆ ತಡೆ ನೀಡಬೇಕೆಂದು ಬಿ.ಎಸ್.ರಫಿಉಲ್ಲಾ ಅರ್ಜಿ ಸಲ್ಲಿಸಿದ್ದರು.

ನಾಟಕಕ್ಕೂ ತಡೆ ಕೋರಿ ಅರ್ಜಿ: 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಕ್ಕೆ ತಡೆ ಕೋರಿ ಮೈಸೂರಿನ ರಾಜೇಂದ್ರನಗರ ನಿವಾಸಿಯಾದ ಡಾ.ಬಿ.ಆರ್.ಅಂಬೇಡ್ಕರ್ ಸೌಹಾರ್ದ ಸಮಿತಿ ಉಪಾಧ್ಯಕ್ಷ ಮೊಹಮ್ಮದ್ ರಾಹಿಲ್ ಹಾಗೂ ಗಾಂಧಿನಗರ ನಿವಾಸಿಯಾದ ದಲಿತ ಮಹಾಸಭಾ ಉಪಾಧ್ಯಕ್ಷ ಎಸ್.ರಾಜೇಶ್ ಮೈಸೂರು ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯ ವಿಚಾರಣೆ ನ್ಯಾಯಾಲಯ ಅಂಗೀಕರಿಸಿದ್ದು, ನಾಳೆ(ಡಿ.9) ವಿಚಾರಣೆ ಇರುವುದಾಗಿ ಅರ್ಜಿದಾರ ಎಸ್.ರಾಜೇಶ್ ತಿಳಿಸಿದ್ದಾರೆ.

ಒಟ್ಟು 20 ಪ್ರದರ್ಶನ

ಸೇರಿ ಒಟ್ಟು 20 ನಾಟಕಗಳು ರಂಗೋತ್ಸವದಲ್ಲಿ ಪ್ರದರ್ಶನಗೊಳ್ಳಲಿವೆ ಎಂದರು.

ಡಿ.9ರಂದು ಸಂಜೆ 4.30ಕ್ಕೆ ಕರಕುಶಲ ಮಳಿಗೆಗಳನ್ನು ಮೈಲ್ಯಾಕ್ ಅಧ್ಯಕ್ಷ ರಘು ಆರ್.ಕೌಟಿಲ್ಯ ಉದ್ಘಾಟಿಸರೆ, ಚಿತ್ರಕಲಾ ಪ್ರದರ್ಶನಕ್ಕೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಚಾಲನೆ ನೀಡಲಿದ್ದಾರೆ. ಆಹಾರ, ತಿನಿಸು, ಕರಕುಶಲ ವಸ್ತುಗಳು, ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ 60 ಮಳಿಗೆ ನಿರ್ಮಿಸಲಾಗಿದೆ. ದೇಶದ ವಿವಿಧ ಭಾಗಗಳಿಂದ ಕರಕುಶಲ ಕರ್ಮಿಗಳು ಭಾಗವಹಿಸಲಿದ್ದಾರೆ. ಅದರಲ್ಲಿ ಕರಕುಶಲ ವಸ್ತುಗಳು ಮತ್ತು ಬಟ್ಟೆಗಳಿಗಾಗಿ 15 ಮಳಿಗೆ, ದೇಸೀ ಆಹಾರಕ್ಕಾಗಿ 15ಕ್ಕೂ ಹೆಚ್ಚಿನ ಮಳಿಗೆಗಳನ್ನು ಅಣಿಗೊಳಿಸಲಾಗಿದೆ. ಸಹಜ ಕೃಷಿ ಆಹಾರಗಳು, ಮೈಸೂರು ಶೈಲಿ, ಕೊಡಗು, ಕರಾವಳಿ, ಮಲೆನಾಡು, ಉತ್ತರ ಕರ್ನಾಟಕದ ಬಗೆ ಬಗೆಯ ವಿಶೇಷ ಆಹಾರ ಪದಾರ್ಥಗಳ ಕಲ್ಪಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು. ಡಿ.15 ರವರೆಗೆ ನಡೆಯುವ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ' ರಂಗಾಸಕ್ತರ ಹಬ್ಬವಾಗಿ ಮಾರ್ಪಡಲಿದೆ. ಸಮಾಜಕ್ಕೆ ಕನ್ನಡಿ ಹಿಡಿಯುವ ವಸ್ತು ವಿಷಯದ ಆಧಾರದಲ್ಲಿ ನಡೆಯುತ್ತದೆ. 'ಭಾರತೀಯತೆ' ಶೀರ್ಷಿಕೆಯಡಿ ನಡೆಯುತ್ತಿರುವ ಬಹುರೂಪಿಯಲ್ಲಿ ಭಾರತವೆಂದರೆ ಇದು ಕೇವಲ ನೆಲವೊಂದೇ ಅಲ್ಲ, ಇದನ್ನು 'ಮಾತೆ' ಎಂದು ಪೂಜಿಸುವುದನ್ನು ಮನವರಿಕೆ ಮಾಡಿಕೊಡುವ ಮಹತ್ತರ ಕಾರ್ಯಕ್ರಮವೂ ಮೂಡಿ ಬರಲಿದೆ. ಅನೇಕ ಭಾಷೆ, ಧರ್ಮ, ಜಾತಿ ಜನಾಂಗಗಳ ಏಕ ಸಮೂಹವೇ ಭಾರತ. ಹಾಗಾಗಿ ಬಹುರೂಪಿಗೆ 'ಭಾರತೀಯತೆ' ಎಂದು ಶೀರ್ಷಿಕೆ ಇಡಲಾಗಿದೆ ಎಂದು ತಿಳಿಸಿದರು.

ಡಿ.10ರಂದು ಬೆಳಗ್ಗೆ 10.30ಕ್ಕೆ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಬಹುರೂಪಿ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಚಿಂತಕ ಜಿ.ಎಸ್.ಆರ್.ಲೀಲಾ ಉದ್ಘಾಟಿಸಲಿದ್ದಾರೆ. ಎರಡು ದಿನಗಳ ಕಾಲ ಪ್ರಾಚೀನ ಸಂಸ್ಕೃತಿ ಮತ್ತು ಭಾರತೀಯತೆ, ಭವಿಷ್ಯದಲ್ಲಿ ಭಾರತೀಯ ಸಂಸ್ಕೃತಿ, ವೈವಿಧ್ಯತೆಯಲ್ಲಿ ಭಾರತೀಯತೆ ಹಾಗೂ ಪ್ರಾಚೀನ ರಂಗಭೂಮಿ ಮತ್ತು ಭಾರತೀಯತೆ ವಿಚಾರ ಕುರಿತು ಗೋಷ್ಠಿ ನಡೆಯಲಿದೆ ಎಂದರು.

ಡಿ.10ರಂದು ಸಂಜೆ 5.30ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ನಟ ರಮೇಶ್ ಅರವಿಂದ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನಿಲ್‌ಕುಮಾರ್, ಮೇಯರ್ ಶಿವಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು. ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ಬಹುರೂಪಿ ಸಂಚಾಲಕ ಜಗದೀಶ್ ಮನವಾರ್ತೆ ಇದ್ದರು.

ದರ ಕಡಿತಕ್ಕೆ ಸಂಪುಟ ಸಭೆ ಸಮ್ಮತಿ

ರಾಷ್ಟ್ರೋತ್ಥಾನ ಪರಿಷತ್‌ಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಆರು ಎಕರೆ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ನೀಡಲು ಸಂಪುಟ ಸಮ್ಮತಿಸಿದೆ. ಕೇಂದ್ರ ಸರ್ಕಾರದ ಯೋಜನೆಯಡಿ 921 ಹವಾನಿಯಂತ್ರಣರಹಿತ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ರಾಜ್ಯ ಸರ್ಕಾರ ತನ್ನ ಪಾಲಿನ ಅನುದಾನ ನೀಡಲು ಒಪ್ಪಿಗೆ ನೀಡಿದೆ. ವಿಕಲಚೇತನರ ಕಲ್ಯಾಣ ಮತ್ತು ಹಿರಿಯ ನಾಗರಿಕರ ಸೇವೆಗಳಿಗೆ ಮೈಸೂರಿನ ರಾಜ್ಯ ಪುನರ್ವಸತಿ ಕೇಂದ್ರದ ನೌಕರರ ವಿಲೀನಾತಿ ನಿಯಮ 2022ಕ್ಕೆ ಅನುಮೋದನೆ ನೀಡಿದೆ. ಕುರಿಗಾಹಿಗಳ ಘಟಕ ಸ್ಥಾಪಿಸಲು 354.50 ಕೋಟಿ ರೂ. ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ ಅನುಷ್ಠಾನಕ್ಕೆ ಸಮ್ಮತಿ ನೀಡಿದೆ. ಯೋಜನೆಯಡಿ 20 ಸಾವಿರ ಕುರಿಗಾಹಿಗಳಿಗೆ 1.75 ಲಕ್ಷ ರೂ. ವೆಚ್ಚದಲ್ಲಿ 20 ಕುರಿ ಇಲ್ಲವೇ ಮೇಕೆ ಖರೀದಿಸಲು ಅನುಮತಿಸಲಾಗಿದೆ. ಕರ್ನಾಟಕ ಯುವ ನೀತಿ 2022ಕ್ಕೆ ಅನುಮೋದನೆ ನೀಡಲಾಗಿದೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಗುಜರಾತ್ ಮಾದರಿ ಅನುಸರಣೆ

ನಾಯಕರನ್ನು ಸೆಳೆದು ಅವರಿಗೆ ಮಣೆ ಹಾಕಲು ಮುಂದಾಗಿದೆ. ರಾಜ್ಯ ವಿಧಾನಸಭೆಗೆ ಸಂಬಂಧಿಸಿದಂತೆ ಬಿಜೆಪಿ ವರಿಷ್ಠರು ಈಗಾಗಲೇ ಮೂರು ಚುನಾವಣಾ ಪೂರ್ವಭಾವಿ ಸಮೀಕ್ಷೆ ನಡೆಸಿ ವರದಿ ಪಡೆದುಕೊಂಡಿದ್ದಾರೆ. ಈ ವರದಿಗಳ ಆಧಾರದ ಮೇಲೆ ಯಾವ ಕಡೆಯಿಂದ ಶಕ್ತಿ ನೀಡಿದರೂ ಅವರ ಎದುರಾಳಿಗಳ ಗೆಲ್ಲುವ ಸಾಧ್ಯತೆ ಹೆಚ್ಚು. ಹೀಗಾಗಿ ಅಂತಹವರಿಗೆ ಟಿಕೆಟ್ ನಿರಾಕರಿಸಲಾಗುತ್ತದೆ. ಮುಂದಿನ ಚುನಾವಣೆಯಲ್ಲಿ ಗೆಲ್ಲುವವರು, ಸ್ವಲ್ಪ ಪುಷ್ಟಿ ತುಂಬಿದರೂ ಗೆಲ್ಲುವವರು ಮತ್ತು ಯಾವ ಕಾರಣಕ್ಕೂ ಗೆಲ್ಲದವರು ಎಂಬ ಮೂರು ವಿಭಾಗಗಳನ್ನು ಈ ಸರ್ವೆ ತಂಡಗಳು ಮಾಡಿಕೊಂಡಿದ್ದು, ಸೋಲು ಅನುಭವಿಸುವವರು ಯಾರು ಎಂಬ ವಿವರವನ್ನು ನೀಡಿದೆ. ಗುಜರಾತ್ ವಿಧಾನಸಭಾ ಚುನಾವಣೆಗೂ ಮುನ್ನ ವರಿಷ್ಠರು ರವಾನಿಸಿದ್ದ ಸರ್ವೆ ತಂಡಗಳು,ಹಾಲಿ ಶಾಸಕರ ಪೈಕಿ ನಲವತ್ತಕ್ಕೂ ಹೆಚ್ಚು ಮಂದಿ ಗೆಲ್ಲುವುದಿಲ್ಲ ಎಂದು ವರದಿ ನೀಡಿದ್ದವು. ಮತ್ತು ಈ ವರದಿಯ ಆಧಾರದ ಮೇಲೆ ನಲವತ್ತು ಮಂದಿ ಶಾಸಕರಿಗೆ ಪಕ್ಷ ಚುನಾವಣೆಯ ಟಿಕೆಟ್ ನಿರಾಕರಿಸಿತ್ತು. ಅದೇ ರೀತಿ ಉತ್ತರ ಪ್ರದೇಶದಲ್ಲಿ ನೂರಕ್ಕೂ ಹೆಚ್ಚು ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಿಸಿ ಹೊಸ ಮುಖಗಳಿಗೆ ಅವಕಾಶ ಮಾಡಿಕೊಡಲಾಗಿತ್ತು. ಗುಜರಾತ್‌ನಲ್ಲಿ ಟಿಕೆಟ್ ಕೈ ತಪ್ಪಿದವರ ಪೈಕಿ ಏಳು ಮಂದಿ ಸ್ವತಃ ಅಮಿತ್ ಶಾ ಅವರ ಪರಮಾಪ್ತರು.ಆದರೆ ಗೆಲುವಿನ ಸಾಧ್ಯತೆ ಇಲ್ಲ ಎಂಬುದು ಮನವರಿಕೆಯಾದ ಕೂಡಲೇ ಅವರ ಸೇರಿದಂತೆ ನಲವತ್ತು ಮಂದಿ ಹಾಲಿ ಶಾಸಕರಿಗೆ ಬಿಜೆಪಿ ವರಿಷ್ಠರು ಟಿಕೆಟ್ ನಿರಾಕರಿಸಿದ್ದರು.

ಅದು ಯಶಸ್ವಿಯಾಗಿರುವುದರ ಹಿನ್ನೆಲೆಯಲ್ಲಿ ವರಿಷ್ಠರು ಕರ್ನಾಟಕದಲ್ಲೂ ಇದೇ ಸೂತ್ರವನ್ನು ಅನುಸರಿಸಲು ಮುಂದಾಗುತ್ತಾರೆ ಎಂಬ ವಿಶ್ಲೇಷಣೆ ಬಿಜೆಪಿ ಪಾಳೆಯದಲ್ಲಿ ಕೇಳಿ ಬಂದಿದ್ದು,ಈ ಬೆಳವಣಿಗೆ ವ್ಯಾಪಕ ಕುತೂಹಲಕ್ಕೆ ಕಾರಣವಾಗಿದೆ.

ವಾರಣಾಸಿ ಮಾದರಿಯ ಬಯೋಚಾರ್ ಘಟಕ ಸ್ಥಾಪನೆಗೆ ಚಿಂತನೆ

ಮೇಯರ್ ಶಿವಕುಮಾರ್ ಮಾಹಿತಿ



ಮೈಸೂರು, ಡಿ.8(ಆರ್‌ಕೆ)–ಉತ್ತರ ಪ್ರದೇಶದ ವಾರಣಾಸಿ ನಗರದಲ್ಲಿರುವಂತೆ ಮೈಸೂರು ಮಹಾನಗರ ಪಾಲಿಕೆಯು ತ್ಯಾಜ್ಯ ಇದ್ದಿಲು (ಬಯೋ ಚಾರ್) ಘಟಕ ಸ್ಥಾಪಿಸಲು ಚಿಂತನೆ ನಡೆಸಲಾಗಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಕಚೇರಿಯಲ್ಲಿ ಇಂದು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕಸದ ಸಮಸ್ಯೆಗೆ ಇತಿಶ್ರೀ ಹಾಡಿ ಘನ ತ್ಯಾಜ್ಯವನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಲು ವಾರಣಾಸಿಯಲ್ಲಿರುವಂತೆ ಮೈಸೂರಲ್ಲೂ ತ್ಯಾಜ್ಯ ಇದ್ದಿಲು ಘಟಕ ಸ್ಥಾಪಿಸುವ ಸಂಬಂಧ ಚರ್ಚೆ ನಡೆಸುತ್ತಿದ್ದೇವೆ ಎಂದರು.

35 ಕಾರ್ಪೊರೇಟರ್‌ಗಳು ಹಾಗೂ ಮೂವರು ಅಧಿಕಾರಿಗಳೊಂದಿಗೆ ವಾರಣಾಸಿ ಮತ್ತು ಮುಂಬೈನಲ್ಲಿ ಅಧ್ಯಯನ ಪ್ರವಾಸ ಕೈಗೊಂಡಿದ್ದಾಗ ವಾರಣಾಸಿ ಮಹಾನಗರ ಪಾಲಿಕೆಯು ಘನ ತ್ಯಾಜ್ಯ ನಿರ್ವಹಣೆಗೆ ಅಳವಡಿಸಿರುವ ತಂತ್ರಜ್ಞಾನವನ್ನು ಮೈಸೂರಲ್ಲೂ ಅನುಸರಿಸುವುದು ಸೂಕ್ತ ಎಂದು ಅಭಿಪ್ರಾಯಿಸಲಾಗಿದೆ. ತ್ಯಾಜ್ಯದಿಂದ ಇದ್ದಿಲು ತಯಾರಿಸುವ ಯೋಜನೆ ಜಾರಿಗೆ ತರಲು ಚಿಂತನೆ ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಹಸಿ ಕಸವನ್ನು ಇದ್ದಿಲಾಗಿ ಪರಿವರ್ತಿಸಲು ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್ ನೆರವಿನಿಂದ ವಾರಣಾಸಿಯಲ್ಲಿ ಈ ಘಟಕ ಸ್ಥಾಪಿಸಲಾಗಿದ್ದು, ಪ್ರತೀದಿನ 600 ಟನ್ ಕಸವನ್ನು ಕಲ್ಲಿದ್ದಲಾಗಿ ಪರಿವರ್ತಿಸಲಾಗುತ್ತಿದೆ. ಮೈಸೂರಲ್ಲೂ ಪ್ರತೀ ದಿನ 400 ರಿಂದ 500 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಅದನ್ನು ಕಾಂಪೋಸ್ಟ್ ಮಾಡಲು 45 ದಿನಗಳು ಬೇಕು. ಇದರಿಂದ ವಿಷಾನಿಲ ಉತ್ಪತ್ತಿಯಾಗುವ ಕಾರಣ ಪರಿಸರ ಹಾನಿಯಾಗುತ್ತದೆ ಎಂದು ಅವರು ತಿಳಿಸಿದರು.

ವಾರಣಾಸಿ ಮಾದರಿ ಅನುಸರಿಸಿದ್ದಲ್ಲಿ ಆಯಾ ದಿನದ ಕಸವನ್ನು ಅಂದೇ ವಿಲೇವಾರಿ ಮಾಡಬಹುದಾಗಿದೆ. ಅದಕ್ಕಾಗಿ ಸೂಕ್ತ ಜಾಗ ಗುರ್ತಿಸಿ, ಘಟಕ ಸ್ಥಾಪಿಸುವ ಬಗ್ಗೆ ಕೌನ್ಸಿಲ್ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು. ಅದೇ ರೀತಿ ಮಳೆ ನೀರು ಹರಿದು ಹೋಗಲು ಮುಂಬೈನಲ್ಲಿರುವಂತೆ ವಿಶೇಷ ಚೇಂಬರ್‌ಗಳನ್ನು ನಿರ್ಮಿಸಲು ಪ್ರಸ್ತಾಪಿಸಲಾಗಿದೆ ಎಂದು ಮೇಯರ್ ತಿಳಿಸಿದರು.

ಪಾರಂಪರಿಕ ಕಟ್ಟಡಗಳ ಸಂರಕ್ಷಿಸಲು ಪ್ರತ್ಯೇಕ ವಿಂಗ್ ರಚಿಸಿ ಉತ್ತಮವಾಗಿ ನಿರ್ವಹಿಸುವ ವ್ಯವಸ್ಥೆ ವಾರಣಾಸಿ ಮತ್ತು ಮುಂಬೈನಲ್ಲಿದೆ. ನೂರಾರು ಪಾರಂಪರಿಕ ಕಟ್ಟಡಗಳಿರುವ ಪಾರಂಪರಿಕ ನಗರಿ ಎಂದೇ ಖ್ಯಾತಿಯಾಗಿರುವ ಮೈಸೂರಲ್ಲೂ ಪ್ರತ್ಯೇಕ ವಿಭಾಗ ರಚಿಸುವುದು ಸೂಕ್ತ ಎಂಬ ಅಭಿಪ್ರಾಯ ಬಂದಿದೆ ಎಂದು ಅವರು ನುಡಿದರು.

ಇಷ್ಟರಲ್ಲೇ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಪಾರಂಪರಿಕ ಕಟ್ಟಡಗಳ ನಿರ್ವಹಣೆಗೆಂದೇ ಬಜೆಟ್‌ನಲ್ಲಿ ಪ್ರತ್ಯೇಕ ಅನುದಾನ ಮೀಸಲಿರಿಸುವಂತೆ ಕೋರಲಾಗುವುದು. ರಸ್ತೆಗಳ ಗುಂಡಿ ಮುಚ್ಚಲು ಮುಂಬೈ ಮಹಾನಗರ ಪಾಲಿಕೆಯಲ್ಲಿ ವಿಶೇಷ ಸಿಮೆಂಟ್ ಬಳಸಲಾಗುತ್ತಿದೆ. ಈ ರ್‍ಯಾಪಿಡ್ ಹಾರ್ಡ್‌ನಿಂಗ್ ಸಿಮೆಂಟ್‌ನಿಂದ ಕಾಂಕ್ರೀಟ್ ಹಾಕಿದ ಕೆಲ ನಿಮಿಷಗಳಲ್ಲೇ ಅದರ ಮೇಲೆ ವಾಹನಗಳು ಓಡಾಡಬಹುದಾಗಿದೆ. ಇದರಿಂದ ಮಳೆಗಾಲದಲ್ಲೂ ಗುಂಡಿಗಳು ಹಾಳಾಗದೇ ರಸ್ತೆ ಸುದೀರ್ಘ ಕಾಲ ಬಾಳಿಕೆ ಬರುತ್ತದೆ ಎಂದು ಶಿವಕುಮಾರ್ ಇದೇ ವೇಳೆ ನುಡಿದರು.

ಉಪ ಮೇಯರ್ ಡಾ. ಜಿ.ರೂಪಾ, ಕಾರ್ಪೊರೇಟರ್‌ಗಳಾದ ಪ್ರೇಮಾ ಶಂಕರೇಗೌಡ, ಎಂ.ಎಸ್.ಶೋಭಾ, ಬಿ.ವಿ.ಮಂಜುನಾಥ್, ಅಶ್ವಿನಿ ಅನಂತು, ಪಾಲಿಕೆ ಕಮೀಷ್ನರ್ ಜಿ.ಲಕ್ಷ್ಮೀಕಾಂತ ರೆಡ್ಡಿ, ಹಿರಿಯ ಆರೋಗ್ಯಾಧಿಕಾರಿ ಡಾ. ಡಿ.ಜಿ.ನಾಗರಾಜು ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬೆಂಬಲ ಬೆಲೆ ಯೋಜನೆಯಡಿ ಭತ್ತ, ರಾಗಿ ಖರೀದಿಗೆ ಡಿ.15ರಿಂದ ನೋಂದಣಿ

ಡಿಸಿ ಕೆ.ವಿ.ರಾಜೇಂದ್ರ ಮಾಹಿತಿ



ಮೈಸೂರು, ಡಿ.8(ಎಸ್‌ಬಿಡಿ)– ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಮತ್ತು ರಾಗಿ ಖರೀದಿಗೆ ಡಿ.15ರಿಂದ ರೈತರ ನೋಂದಣಿ ಆರಂಭವಾಗಲಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗುರುವಾರ ನಡೆದ 2022–23ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಬೆಂಬಲ ಬೆಲೆಯಡಿ ಭತ್ತ ಮತ್ತು ರಾಗಿ ಖರೀದಿಸಲು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯನ್ನು ಖರೀದಿ ಏಜೆನ್ಸಿಯನ್ನಾಗಿ ಸರ್ಕಾರ ನೇಮಕ ಮಾಡಿದೆ. ಡಿ.15ರಿಂದ ರೈತರ ನೋಂದಣಿ ಕಾರ್ಯ ಆರಂಭವಾಗಲಿದ್ದು, 2023ರ ಜನವರಿ 1ರಿಂದ ಮಾರ್ಚ್ 31ರವರೆಗೆ ಭತ್ತ ಖರೀದಿ ಪ್ರಕ್ರಿಯೆ ನಡೆಯಲಿದೆ ಎಂದರು.

ಪ್ರತಿ ಎಕರೆಗೆ 25 ಕ್ವಿಂಟಾಲ್‌ನಂತೆ ಓರ್ವ ಬೆಳಗಾರರಿಂದ ಗರಿಷ್ಠ 40 ಕ್ವಿಂಟಾಲ್ ಭತ್ತ ಹಾಗೂ ರಾಗಿ ಕನಿಷ್ಠ 10ರಿಂದ ಗರಿಷ್ಠ 20 ಕ್ವಿಂಟಾಲ್ ಖರೀದಿಸಲಾಗುವುದು. ಪ್ರತಿ ಕ್ವಿಂಟಾಲ್ ಸಾಮಾನ್ಯ ಭತ್ತಕ್ಕೆ 2040 ರೂ. ಹಾಗೂ ರಾಗಿಗೆ 3578 ರೂ ನಿಗದಿಪಡಿಸಲಾಗಿದೆ. ರೈತರಿಗೆ ಅನುಕೂಲವಾಗುವಂತೆ ಮೈಸೂರಿನ ಎಪಿಎಂಸಿ ಆವರಣ, ಬಂಡಿಪಾಳ್ಯ ನಂಜನಗೂಡಿನ ಎಪಿಎಂಸಿ ಆವರಣ, ಬಿಳಿಗೆರೆ ಖರೀದಿ ಕೇಂದ್ರ, ತಿ.ನರಸೀಪುರದ ಎಪಿಎಂಸಿ, ಬನ್ನೂರು ಎಪಿಎಂಸಿ, ಹುಣಸೂರು, ರತ್ನಪುರಿ ಎಂಪಿಎಂಸಿ, ಕೆ.ಆರ್.ನಗರದ ಚುಂಚನಕಟ್ಟೆ ಪ್ರವಾಸಿ ಮಂದಿರ (ಶ್ರೀರಾಮ ದೇವಸ್ಥಾನದ ಹತ್ತಿರ), ಸಾಲಿಗ್ರಾಮ, ಎಚ್.ಡಿ.ಕೋಟೆ ಎಪಿಎಂಸಿ, ಸರಗೂರು ಮತ್ತು ಪಿರಿಯಾಪಟ್ಟಣ, ಬೆಟ್ಟದಪುರ ಎಪಿಎಂಸಿ ಆವರಣ ಸೇರಿದಂತೆ ಜಿಲ್ಲೆಯಾದ್ಯಂತ 14 ಕಡೆಗಳಲ್ಲಿ ಖರೀದಿ ಕೇಂದ್ರ ತೆರೆಯಲಾಗುವುದು ಎಂದು ಹೇಳಿದರು.

ಭತ್ತವನ್ನು ಮಾರಾಟ ಮಾಡಬೇಕಾದ ರೈತರು ಈಗಾಗಲೇ ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿಯಾಗಿರಬೇಕು. ಇಲ್ಲವಾದರೆ ಈಗಲಾದರೂ ನೋಂದಣಿ ಮಾಡಿಕೊಂಡು ತಾವು ಬೆಳೆದ ಭತ್ತವನ್ನು ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡಬಹುದು. ಖರೀದಿ ಮಾಡಿದ ಭತ್ತದ ಮೊತ್ತವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು. ಹಾಗಾಗಿ ನೊಂದಣಿ ಕೇಂದ್ರದಲ್ಲಿ ರೈತರು ಫ್ರೂಟ್ ಐಡಿ, ಆಧಾರ್ ಸಂಖ್ಯೆಗೆ ಜೋಡಣೆಯಾದ ತಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ನೀಡಬೇಕು ಎಂದು ಸಲಹೆ ನೀಡಿದರು.

ಬೇಡಿಕೆ ಹೆಚ್ಚಾದಲ್ಲಿ ಅಗ್ಯತ್ಯಕ್ಕೆ ತಕ್ಕಂತೆ ಹೆಚ್ಚುವರಿ ಕೇಂದ್ರ ತೆರೆಯಬೇಕು. ಭತ್ತ ಖರೀದಿ ಕೇಂದ್ರಗಳಲ್ಲಿ ಧಾನ್ಯ ಗುಣಮಟ್ಟ ಪರೀಕ್ಷಿಸಲು ಗ್ರೇಡರ್‌ಗಳ ನಿಯೋಜನೆ, ಖರೀದಿಸಿದ ಭತ್ತಕ್ಕೆ ಸೂಕ್ತ ರೀತಿಯ ದಾಸ್ತಾನು ಕೇಂದ್ರಗಳನ್ನು ಗುರುತಿಸಬೇಕು. ರೈತ ಮುಖಂಡರು ಹಾಗೂ ರೈತ ಸಂಪರ್ಕ ಕೇಂದ್ರಗಳ ಮೂಲಕ ನೋಂದಣಿ, ಖರೀದಿ ಕೇಂದ್ರಗಳ ಬಗ್ಗೆ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಇದೇ ವೇಳೆ ಸೂಚನೆ ನೀಡಿದರು.

ಸಭೆಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕಿ ಕುಮುದಾ ಶರತ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಪ್ರಧಾನ ವ್ಯವಸ್ಥಾಪಕರಾದ ಪುಷ್ಪ ಮತ್ತಿತರರ ಅಧಿಕಾರಿಗಳು ಭಾಗವಹಿಸಿದ್ದರು.

ಡಿ.10ರಂದು ಹಳೇ ಪಿಂಚಣಿ ಯೋಜನೆ ಜಾರಿಗೆ ಒತ್ತಾಯಿಸಿ ಪಾದಯಾತ್ರೆ



ಮೈಸೂರು,ಡಿ.8(ಪಿಎಂ)– ನೂತನ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಗೊಳಿಸಿ, ಹಳೇ ಪಿಂಚಣಿ ಯೋಜನೆ (ಓಪಿಎಸ್) ಜಾರಿಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ವತಿಯಿಂದ ಡಿ.10ರಂದು ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರಿನಿಂದ ಹುಣಸೂರು ರಸ್ತೆಯ ಜಲದರ್ಶಿನಿ ಅತಿಥಿಗೃಹದವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಎಸ್.ಆರ್.ಮಂಜುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎನ್‌ಪಿಎಸ್ ವಿರುದ್ಧ ರಾಜ್ಯ ಸರ್ಕಾರಿ ನೌಕರರು ಸಂಘಟಿತರಾಗಿ ನಿರಂತರವಾಗಿ ಹೋರಾಟ ಮಾಡುತ್ತಿದ್ದೇವೆ. 2006ರ ಏ.1ರಿಂದ ರಾಜ್ಯ ಸರ್ಕಾರಿ ಸೇವೆಗೆ ಸೇರಿದ ನೌಕರರಿಗೆ ಈ ಎನ್‌ಪಿಎಸ್ ಜಾರಿಗೊಳಿಸಲಾಗಿದೆ. ಇದು ನೌಕರರ ಸಂಧ್ಯಾಕಾಲದ ಮರಣ ಶಾಸನವೇ ಆಗಿದೆ. ಕಳೆದ 16 ವರ್ಷಗಳಲ್ಲಿ ನಿವೃತ್ತರಾದ ನೌಕರರಿಗೆ ಕೇವಲ 900ರಿಂದ 2 ಸಾವಿರ ರೂ.ಗಳವರೆಗೆ ಪಿಂಚಣಿ ದೊರೆಯುತ್ತಿದ್ದು, ಮರಣ ಹೊಂದಿದ ನೌಕರರ ಕುಟುಂಬಸ್ಥರಿಗೆ ಸೂಕ್ತ ಕುಟುಂಬ ಪಿಂಚಣಿ ಇಲ್ಲದೆ, ತೀರಾ ಸಂಕಷ್ಟ ಅನುಭವಿಸುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಅಂದು ಬೆಳಗ್ಗೆ 11ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಆರಂಭವಾಗುವ ಪಾದಯಾತ್ರೆಯು, ಕೆಆರ್ ವೃತ್ತ ಸೇರಿದಂತೆ ಇನ್ನಿತರ ರಸ್ತೆಗಳಲ್ಲಿ ಸಂಚರಿಸಿ ಜಲದರ್ಶಿನಿ ತಲುಪಲಿದೆ. ಬಳಿಕ ಅಲ್ಲಿರುವ ಜನಪ್ರತಿನಿಧಿಗಳ ಕಚೇರಿಯಲ್ಲಿ ಮನವಿ ಸಲ್ಲಿಸಲಾಗುವುದು. ಜಿಲ್ಲೆಯಲ್ಲಿ 12,500 ಎನ್‌ಪಿಎಸ್ ನೌಕರರು ಇದ್ದು, ಅಂದಿನ ಪಾದಯಾತ್ರೆಯಲ್ಲಿ ಮೂರು ಸಾವಿರ ಮಂದಿ ಭಾಗವಹಿಸಲಿದ್ದಾರೆ. ಜೊತೆಗೆ ಡಿ.19ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲು ಉದ್ದೇಶಿಸಲಾಗಿದೆ ಎಂದರು. ಸಂಘದ ಪದಾಧಿಕಾರಿಗಳಾದ ಶಿವಕುಮಾರ್, ಯಶ್ವಂತ್, ಶ್ರೀಧರ್, ಮುರಳೀಕೃಷ್ಣ, ರೇವಣ್ಣ, ಮಹದೇವ್ ಗೋಷ್ಠಿಯಲ್ಲಿದ್ದರು.

ಡಿ.17ರಂದು ರಾಜ್ಯಾದ್ಯಂತ ಕಾಲೇಜು ಬಂದ್‌ಗೆ ಎನ್‌ಎಸ್‌ಯುಐ ಕರೆ



ಮೈಸೂರು,ಡಿ.8(ಪಿಎಂ)– ಪದವಿಪೂರ್ವ ಮತ್ತು ಪದವಿ ಕಾಲೇಜು ವಿದ್ಯಾರ್ಥಿಗಳ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ (ಎನ್‌ಎಸ್‌ಯುಐ) ಕರ್ನಾಟಕ ವತಿಯಿಂದ ಡಿ.17ರಂದು ರಾಜ್ಯಾದ್ಯಂತ ಕಾಲೇಜುಗಳ ಬಂದ್‌ಗೆ ಕರೆ ನೀಡಲಾಗಿದೆ ಎಂದು ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ಆರ್.ಬಾಲರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಬಿಜೆಪಿ ಸರ್ಕಾರ ಕಾಲೇಜು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಫಲವಾಗಿದೆ. ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ತಾಂಡವವಾಡುತ್ತಿದ್ದು, ಪ್ರವೇಶ ಶುಲ್ಕ ದುಬಾರಿ ಮಾಡಲಾಗಿದೆ. ಪದವಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಬಿಡುಗಡೆ ಮಾಡುವಲ್ಲಿ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ದೂರಿದರು.

ಪರೀಕ್ಷೆಗಳ ಫಲಿತಾಂಶ ನಿಗದಿತ ಸಮಯಕ್ಕೆ ನೀಡದೇ ವಿಳಂಬ ಮಾಡಲಾಗುತ್ತಿದೆ. ನಿಗದಿತ ಸಮಯಕ್ಕೆ ಸರಿಯಾಗಿ ಫಲಿತಾಂಶ ಪ್ರಕಟಿಸಬೇಕು. ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯ ನೀಡಬೇಕು ಎಂದು ಒತ್ತಾಯಿಸಿದರು. ಒಕ್ಕೂಟದ ಪದಾಧಿಕಾರಿಗಳಾದ ಮಜೀದ್, ಗೌತಮ್, ಪೂಜಾಶ್ರೀ, ಮಹದೇವಸ್ವಾಮಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ವಿಶೇಷ ಕೈಮಗ್ಗ ಮೇಳಕ್ಕೆ ಚಾಲನೆ



ಮೈಸೂರು, ಡಿ.8(ಎಂಕೆ)– ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆ, ಜವಳಿ ಮಂತ್ರಾಲಯ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ಸಹಕಾರದೊಂದಿಗೆ 'ಸಂಸ್ಕೃತಿ–2022 ನನ್ನ ಕೈಮಗ್ಗ ನನ್ನ ಹೆಮ್ಮೆ' ಶೀರ್ಷಿಕೆಯಡಿ ಆಯೋಜಿಸಿರುವ 'ವಿಶೇಷ ಕೈಮಗ್ಗ ಮೇಳ'ಕ್ಕೆ ಗುರುವಾರ ಚಾಲನೆ ನೀಡಲಾಯಿತು.

ಡಿ.25ರವರೆಗೆ ನಡೆಯುವ ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಆಯೋಜಿಸಿರುವ ಕೈಮಗ್ಗ ಮೇಳ ವಿಶೇಷವಾಗಿದೆ. ಹತ್ತು–ಹಲವು ವೈಶಿಷ್ಟ್ಯತೆಯುಳ್ಳ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮಾಡಲಾಗುತ್ತಿದ್ದು, ಮೈಸೂರಿಗರು ಹಾಗೂ ಪ್ರವಾಸಿಗರು ಇದರ ಸದುಪಯೋಗಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರಲ್ಲದೆ ಮಾಗಿ ಉತ್ಸವ ಆಯೋಜನೆಗೆ ಚಿಂತನೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ನಿವೃತ್ತ ಐಎಎಸ್ ಅಧಿಕಾರಿ ಎಂ.ಬಿ.ದ್ಯಾಬೇರಿ, ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ, ಕೈಮಗ್ಗ ಮತ್ತು ಜವಳಿ ಇಲಾಖೆ ಉಪ ನಿರ್ದೇಶಕ ಲಕ್ಷ್ಮಣ ತಳವಾರ್, ಕಾವೇರಿ ಹ್ಯಾಂಡ್‌ಲೂಮ್ಸ್ ವ್ಯವಸ್ಥಾಪಕ ನಿರ್ದೇಶಕ ಜೆ.ಪಿ.ಶ್ರೀನಿವಾಸ ಮೂರ್ತಿ, ಜೆಎಸ್‌ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಲೆಕ್ಕ ಪರಿಶೋಧನೆ ವಿಭಾಗದ ನಿರ್ದೇಶಕ ಕೆ.ಆರ್.ಸಂತಾನಂ, ಹಣಕಾಸು ವಿಭಾಗದ ನಿರ್ದೇಶಕ ಎಸ್.ಪುಟ್ಟಸುಬ್ಬಪ್ಪ, ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ.ಹೆಚ್.ಆರ್.ಮಹದೇವಸ್ವಾಮಿ, ಸಂಯೋಜಕ ಎಂ.ಶಿವನಂಜಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಆಕರ್ಷಣೀಯ ವಿಶೇಷ ಕೈಮಗ್ಗ ಮೇಳ..


ವಿಶೇಷ ಕೈಮಗ್ಗ ಮೇಳದಲ್ಲಿ 60ಕ್ಕೂ ಹೆಚ್ಚು ನೇಕಾರರು ಹಾಗೂ ನೇಕಾರರ ಸಹಕಾರ ಸಂಘಗಳು ಭಾಗವಹಿಸಿವೆ. ಮಧ್ಯಪ್ರದೇಶ, ಉತ್ತರ ಪ್ರದೇಶ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ರಾಜ್ಯದ ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಸೇರಿದಂತೆ ವಿವಿಧ ಜಿಲ್ಲೆಗಳ ನೇಕಾರರು ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ. ರೇಷ್ಮೆ, ಹತ್ತಿ ಮತ್ತು ಉಣ್ಣೆ ಹಾಗೂ ವಿವಿಧ ಮಿಶ್ರಿತ ನೂಲುಗಳಿಂದ ತಯಾರಿಸಲಾದ ಕೈಮಗ್ಗ ಉತ್ಪನ್ನಗಳು ಲಭ್ಯವಿವೆ.

ಶೇ.20ರಷ್ಟು ರಿಯಾಯಿತಿ: ಕೈಮಗ್ಗದ ಉತ್ಪನ್ನಗಳನ್ನು ಶೇ.20 ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ರೇಷ್ಮೇ ಸೀರೆ, ಮೊಳಕಾಲ್ಮೂರು ಸೀರೆ, ಇಳಕಲ್ ಸೀರೆ, ಕಸೂತಿ ಸೀರೆ, ತಮಿಳುನಾಡಿನ ಕಾಂಚಿಪುರಂ ಸೀರೆ, ಬಿಹಾರದ ತಸರ್ ಸೀರೆ, ಕಾಂತ ಸೀರೆ, ಬಲಚುರಿ ಸೀರೆ, ಬುಟಿಕ್ ಸೀರೆ, ಪಶ್ಚಿಮಬಂಗಾಳದ ಬೆಂಗಾಲಿ ಕಾಟನ್ ಸೀರೆ, ಉತ್ತರಪ್ರದೇಶದ ಬನಾರಸ್ ಸೀರೆ, ಚಿಕನ್ ಎಂಬ್ರಾಯ್ಡರಿ ಸೀರೆ, ಮಧ್ಯಪ್ರದೇಶದ ಚುಂದೇರಿ, ಮಹೇಶ್ವರಿ ಸೀರೆ ಲಭ್ಯವಿರಲಿವೆ ಜೊತೆಗೆ ಡ್ರೆಸ್ ಮೆಟೀರಿಯಲ್, ಕಸೂತಿ ವಸ್ತ್ರ ಟವಲ್, ಮೇಲುಹಾಸು ಮತ್ತು ಹೊದಿಕೆಗಳು, ನೆಲಹಾಸು ಮತ್ತು ಇತರೆ ಕೈಮಗ್ಗ ಉತ್ಪನ್ನಗಳು ಅತ್ಯಾಕರ್ಷಣೀಯವಾಗಿವೆ



ಮೈಸೂರಿನ ಕಲ್ಯಾಣಗಿರಿಯಲ್ಲಿರುವ ಶ್ರೀ ಕಲ್ಯಾಣ ಲಕ್ಷ್ಮಿವೆಂಕಟರಮಣ ಸ್ವಾಮಿ ದೇವಾಲಯದ ಆವರಣದಲ್ಲಿ ಗುರುವಾರ ಸಂಜೆ ಲಕ್ಷದೀಪೋತ್ಸವ ಆಯೋಜಿಸಲಾಗಿತ್ತು. ಈ ವೇಳೆ ದೀಪ ಬೆಳಗುವುದರ ಮೂಲಕ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಚಾಲನೆ ನೀಡಿದರು.

ಜೆಡಿಎಸ್‌ಗೆ ನೇಮಕ



ಮೈಸೂರು, ಡಿ.8– ಮೈಸೂರು ನಗರ ಚಾಮರಾಜ ವಿಧಾನಸಭಾ ಕ್ಷೇತ್ರದ ಜಾತ್ಯಾತೀತ ಜನತಾದಳ ವಾರ್ಡ್ ನಂ.4ರ ಅಧ್ಯಕ್ಷರನ್ನಾಗಿ ದೇವೇಗೌಡರನ್ನು ನೇಮಕ ಮಾಡಲಾಗಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ನಾಳೆಯಿಂದ ಬಸವ ಬಳಗಗಳ ಒಕ್ಕೂಟದ 'ಬೆಳ್ಳಿಬೆಳಗು' ರಜತ ಮಹೋತ್ಸವ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಉದ್ಘಾಟನೆ ● ಸುತ್ತೂರು, ಸಿದ್ಧಗಂಗಾ ಶ್ರೀಗಳ ಸಾನ್ನಿಧ್ಯ



ಮೈಸೂರು,ಡಿ.8(ಪಿಎಂ)– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳ ವತಿಯಿಂದ ಮೈಸೂರು ಬಸವ ಬಳಗಗಳ ಒಕ್ಕೂಟದ 25ನೇ ವರ್ಷದ ರಜತ ಮಹೋತ್ಸವ ಡಿ.10 ಮತ್ತು 11ರಂದು ನಡೆಯಲಿದೆ ಎಂದು ಒಕ್ಕೂಟದ ಗೌರವಾಧ್ಯಕ್ಷ ಹಿನಕಲ್ ಬಸವರಾಜು ತಿಳಿಸಿದರು.

ಮೈಸೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ 1998ರಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ದೂರದೃಷ್ಟಿ ಮತ್ತು ಸದಾಶಯಗಳಿಂದ ಒಕ್ಕೂಟ ರೂಪುಗೊಂಡಿತು. ಒಕ್ಕೂಟ ಸ್ಥಾಪನೆಗೊಂಡಾಗಿನಿಂದ ಯಶಸ್ವಿಯಾಗಿ ತನ್ನ ಆಶಯಕ್ಕೆ ಅನುಗುಣವಾಗಿ ಮುನ್ನಡೆಯುತ್ತಿದೆ ಎಂದರು.

ಚಾಮುಂಡಿಬೆಟ್ಟದ ತಪ್ಪಲಿನ ಶ್ರೀ ಸುತ್ತೂರು ಶಾಖಾ ಮಠದ ಆವರಣದಲ್ಲಿ ಒಕ್ಕೂಟದ ರಜತ ಮಹೋತ್ಸವ ನಡೆಯಲಿದೆ. ಡಿ.10ರಂದು ಮಧ್ಯಾಹ್ನ 2.30ಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರು ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ಬೆಳ್ಳಿಬೆಳಗು' ಶೀರ್ಷಿಕೆಯ ರಜತ ಮಹೋತ್ಸವ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಈಶ್ವರ ಖಂಡ್ರೆ, ಮಾಜಿ ಸಚಿವ ಶತಾಯುಷಿ ಭೀಮಣ್ಣ ಖಂಡ್ರೆ ಮತ್ತು ಮಾಜಿ ಶಾಸಕ ಅಶೋಕ್‌ಕುಮಾರ್ ಖೇಣಿ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ಅತಿಥಿಗಳಾಗಿ ಸಚಿವರಾದ ಸಿ.ಸಿ.ಪಾಟೀಲ್, ಮುನೇನಕೊಪ್ಪ ಶಂಕರ ಬಿ.ಪಾಟೀಲ್, ಶಶಿಕಲಾ ಎಸ್.ಜೊಲ್ಲೆ, ಶಾಸಕರಾದ ಸಿ.ಎಸ್.ನಿರಂಜನ್‌ಕುಮಾರ್, ಲಿಂಗೇಶ್ ಪಾಲ್ಗೊಳ್ಳಲಿದ್ದಾರೆ. ಸಂಜೆ 5ಕ್ಕೆ ಶರಣ ತತ್ವ ಹಾಗೂ ಮಠಗಳು ಕುರಿತು ವಿಚಾರಗೋಷ್ಠಿ ನಡೆಯಲಿದೆ ಎಂದರು.

ಡಿ.11ರಂದು ಬೆಳಗ್ಗೆ 11ಕ್ಕೆ ಯುವ ಸಂಕಲ್ಪ ಕಾರ್ಯಕ್ರಮ ನಡೆಯಲಿದ್ದು, ಗದಗದ ಶ್ರೀ ಶಿವಾನಂದ ಮಹಾಸಂಸ್ಥಾನ ಮಠದ ಶ್ರೀ ಕೈವಲ್ಯಾನಂದಾ ಸ್ವಾಮೀಜಿ, ಮೈಸೂರಿನ ಶ್ರೀ ಕುಂದೂರು ಮಠದ ಶ್ರೀ ಡಾ.ಶರತ್‌ಚಂದ್ರ ಸ್ವಾಮೀಜಿ, ವಿಭೂತಿಪುರದ ಶ್ರೀ ವೀರಸಿಂಹಾಸನ ಸಂಸ್ಥಾನ ಮಠದ ಶ್ರೀ ಡಾ.ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಕನಕಪುರ ದೇಗುಲ ಮಠದ ಕಿರಿಯ ಶ್ರೀಗಳಾದ ಶ್ರೀ ಚನ್ನಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಉದ್ಯಮಿ ಆನಂದ ಸಂಕೇಶ್ವರ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷ ಮಹಾಂತೇಶ್ ಪಾಟೀಲ್, ರಾಜ್ಯ ಯುವ ಘಟಕದ ಅಧ್ಯಕ್ಷ ಮನೋಹರ್ ಬಿ.ಅಬ್ಬಿಗೆರೆ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಂಜೆ 4ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಸಚಿವ ವಿ.ಸೋಮಣ್ಣ ಸಮಾರೋಪ ಭಾಷಣ ಮಾಡಲಿದ್ದಾರೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ನಂಜನಗೂಡಿನ ಶ್ರೀ ಕ್ಷೇತ್ರ ದೇವನೂರು ಮಠದ ಶ್ರೀ ಮಹಾಂತ ಸ್ವಾಮೀಜಿ, ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಲಿದೆ. ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಎನ್.ತಿಪ್ಪಣ್ಣ, ಸಚಿವರಾದ ಜೆ.ಸಿ.ಮಾಧುಸ್ವಾಮಿ, ಮುರುಗೇಶ್ ನಿರಾಣಿ, ಹಾಲಪ್ಪ ಆಚಾರ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ನಗರಾಧ್ಯಕ್ಷ ಚಂದ್ರಶೇಖರ್, ತಾಲೂಕು ಅಧ್ಯಕ್ಷ ಪಿ.ಕೆ.ನಾಗರಾಜು, ಒಕ್ಕೂಟದ ಅಧ್ಯಕ್ಷ ಎಲ್.ಎಸ್.ಮಹದೇಸ್ವಾಮಿ ಲಲಿತಾದ್ರಿಪುರ (ಸಕ್ಕಳ್ಳಿ), ಕೋಶಾಧ್ಯಕ್ಷ ಕೆ.ಕೆ.ಖಂಡೇಶ್, ಮುಖಂಡ ದೂರು ಶಿವಕುಮಾರ್ ಗೋಷ್ಠಿಯಲ್ಲಿದ್ದರು.

ವಿಜೃಂಭಣೆಯ ಶ್ರೀಕಂಠೇಶ್ವರಸ್ವಾಮಿ ಚಿಕ್ಕಜಾತ್ರೆ



ನಂಜನಗೂಡು, ಡಿ.8– ದಕ್ಷಿಣಕಾಶಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ಚಿಕ್ಕಜಾತ್ರಾ ಮಹೋತ್ಸವ ಗುರುವಾರ ಸಾವಿರಾರು ಭಕ್ತರ ಉದ್ಘೋಷ, ಜಯಘೋಷ ಹಾಗೂ ಜೈಕಾರದ ನಡುವೆ ವಿಜೃಂಭಣೆಯಿಂದ ನಡೆಯಿತು.

ಜಾತ್ರಾ ಮಹೋತ್ಸವ ಅಂಗವಾಗಿ 3 ರಥಗಳನ್ನು ಬಣ್ಣ ಬಣ್ಣದ ಬಾವುಟ ಹಾಗೂ ಬಗೆ ಬಗೆಯ ಹೂಗಳಿಂದ ಅಲಂಕರಿಸಲಾಗಿತ್ತು. ಸಾವಿರಾರು ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡು ಭಕ್ತಿಯಿಂದ ಹಣ್ಣು ಧವನ ಎಸೆದು ಹರಕೆ ತೀರಿಸಿದರು. ಚಿಕ್ಕಜಾತ್ರೆ ಅಂಗವಾಗಿ ಬೆಳಗ್ಗೆ 4 ರಿಂದಲೇ ದೇವಾಲಯದಲ್ಲಿ ಪಾರ್ವತಿ ಸಮೇತ ಶ್ರೀಕಂಠೇಶ್ವರಸ್ವಾಮಿಗೆ ಕ್ಷೀರಾಭಿಷೇಕ, ಫಲ ಪಂಚಾಮೃತಾಭಿಷೇಕ ಹಾಗೂ ಮಹಾನ್ಯಾಸ ಪೂರ್ವಕವಾಗಿ ರುದ್ರಾಭಿಷೇಕ ನೆರವೇರಿಸಲಾಯಿತು. ನಂತರ ಪ್ರಾತಃಕಾಲ ಪೂಜೆ, ನಿತ್ಯೋತ್ಸವ ಹಾಗೂ ಸಂಗಮ ಕಾಲ ಪೂಜೆ, ಮಧ್ಯಾಹ್ನ ಕಾಲ ಪೂಜೆಯೊಂದಿಗೆ ಮಹಾಮಂಗಳಾರತಿ ನೆರವೇರಿಸಿದ ಬಳಿಕ ಮೂಲದೇವತಾ ಪ್ರಾರ್ಥನೆ ಗಣಪತಿ ಪೂಜೆ, ನವಗ್ರಹ ಪೂಜೆ, ನೆರವೇರಿಸಲಾಯಿತು. ನಂತರ ದೇವಾಲಯದ ಹೊರಾವರಣದ ಸುತ್ತ ಸ್ವಾಮಿಯವರ ಉತ್ಸವ ನೆರವೇರಿಸಲಾಯಿತು.

ನಂತರ ದೇವಾಲಯದ ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್ ನೇತೃತ್ವದಲ್ಲಿ ಯಾತ್ರಾಧಾನ ಮಂಗಳಾರ್ಚಕ ಪಠಣ ಸೇರಿದಂತೆ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿದ ನಂತರ ಬೆಳಗ್ಗೆ 9.40 ರಿಂದ 10.40ರ ವೇಳೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ರಥದಲ್ಲಿ ದೇವರಮೂರ್ತಿ ಪ್ರತಿಷ್ಠಾಪಿಸಲಾಯಿತು. ಮಹಾಮಂಗಳಾರತಿ ನೆರವೇರಿಸುವುದರೊಂದಿಗೆ ಅಪರ ಜಿಲ್ಲಾಧಿಕಾರಿ ಮಂಜುನಾಥ್ 9.45ರ ವೇಳೆಗೆ ಈಡುಗಾಯಿ ಒಡೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.


ಮೊದಲಿಗೆ ಗಣಪತಿ ಮತ್ತು ಚಂಡಿಕೇಶ್ವರ ರಥ, ಶ್ರೀಕಂಠೇಶ್ವರ ರಥ, ಕೊನೆಯದಾಗಿ ಮನೋನ್ಮಣಿ ಅಮ್ಮನವರ(ಪಾರ್ವತಿ ದೇವಿ) ರಥಗಳನ್ನು ರಥದ ಬೀದಿಯಲ್ಲಿ ಎಳೆಯಲಾಯಿತು. ಈ ವೇಳೆ ಭಕ್ತರು ಶ್ರದ್ಧಾಭಕ್ತಿಯಿಂದ ದೇವರ ದರ್ಶನ ಪಡೆದು, ಹಣ್ಣು ಧವನ ಎಸೆದು, ಹರಕೆ ತೀರಿಸಿ, ಇಷ್ಟಾರ್ಥಗಳನ್ನು ನೆರವೇರಿಸುವಂತೆ ಕೋರಿ ಭಕ್ತಿ ಮೆರೆದರು.

ಮೂರೂ ರಥಗಳು ಯಾವುದೇ ಅಡ್ಡಿ ಆತಂಕವಿಲ್ಲದೆ ಬೆಳಗ್ಗೆ 11ಕ್ಕೆ ಸ್ವಸ್ಥಾನ ತಲುಪಿದವು. ನಂತರ ಹಂಸವಾಹನ ಉತ್ಸವ ನೆರವೇರಿಸಲಾಯಿತು. ಸಂಜೆ ನಟೇಶ ಉತ್ಸವಗಳು ಜರುಗಿ ರಥೋತ್ಸವ ಯಶಸ್ವಿಯಾಯಿತು. ಡಿ.10ರಂದು ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ನಂತರ ಶಯನೋತ್ಸವ ಜರುಗುವುದರೊಂದಿಗೆ ಚಿಕ್ಕ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಈ ಬಾರಿ ಹುಣ್ಣಿಮೆ ದಿನದಂದೇ ಚಿಕ್ಕಜಾತ್ರಾ ಮಹೋತ್ಸವ ಜರುಗುತ್ತಿರುವ ಕಾರಣ ರಾಜ್ಯದ ವಿವಿಧ ಮೂಲೆಗಳಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಭಕ್ತರಿಗಾಗಿ ದಾಸೋಹ ಭವನದಲ್ಲಿ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಜಾತ್ರಾ ಮಹೋತ್ಸವದ ಅಂಗವಾಗಿ ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಈ ವೇಳೆ ದೇವಾಲಯದ ಆಡಳಿತಾಧಿಕಾರಿ ಡಾ.ಬಿ.ಎಸ್.ಮಂಜುನಾಥ್, ದೇವಾಲಯದ ಇಓ ಜಗದೀಶ್ ಕುಮಾರ್, ಎಇಓ ವೆಂಕಟೇಶ್ ಪ್ರಸಾದ್, ಮುಖಂಡರಾದ ಶ್ರೀಧರ್, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ ಸೇರಿದಂತೆ ದೇವಾಲಯದ ಅರ್ಚಕ ವೃಂದದವರು, ಪ್ರಮುಖರು ಇದ್ದರು.

ನೀರು ಬಳಕೆದಾರರ ಮಹಾಮಂಡಳಕ್ಕೆ ಮಹದೇವಪ್ಪ ಜಿಲ್ಲಾಧ್ಯಕ್ಷ



ತಿ.ನರಸೀಪುರ, ಡಿ.8– ಕಬಿನಿ ಯೋಜನಾ ಮಟ್ಟದ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾ ಮಂಡಳದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾಧ್ಯಕ್ಷರಾಗಿ ಚೌಹಳ್ಳಿ ಎಸ್.ಮಹದೇವಪ್ಪ ಆಯ್ಕೆಯಾಗಿದ್ದಾರೆ. ಪಟ್ಟಣದ ಕಾವೇರಿ ಭವನದಲ್ಲಿರುವ ನೀರು ಬಳಕೆದಾರರ ಸಹಕಾರ ಸಂಘದ ಕಚೇರಿಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಗುಂಡೇಗಾಲ ಮಹದೇವಪ್ಪ ಹಾಗೂ ಚೌಹಳ್ಳಿ ಎಸ್.ಮಹದೇವಪ್ಪ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಚೌಹಳ್ಳಿ ಮಹದೇವಪ್ಪ 10 ಮತ ಪಡೆದು ಅಧ್ಯಕ್ಷರಾದರೇ, ಗುಂಡೇಗಾಲ ಮಹದೇವಪ್ಪ 4 ಮತ ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿ ಸಹಕಾರ ಇಲಾಖೆಯ ಪ್ರಕಾಶ್ ರಾವ್ ನೂತನ ಅಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು.

ಸಹಕಾರ ಸಂಘದ 14 ನಿರ್ದೇಶಕರ ಪೈಕಿ ಎಂ.ಎಸ್.ಶಿವಮೂರ್ತಿ, ಶಿವಕುಮಾರ ಸ್ವಾಮಿ, ಆರ್.ಮಹದೇವಸ್ವಾಮಿ, ಕೆ.ಮುನಿಯಯ್ಯ, ದೊಡ್ಡಸ್ವಾಮಿ, ಮಹದೇವ, ಬಿ.ಸಿ.ಬಸಪ್ಪ, ಹೆಚ್.ಡಿ.ಕೋಟೆಯ ಮಲ್ಲಿಕಾರ್ಜುನಸ್ವಾಮಿ ಚುನಾವಣೆಯಲ್ಲಿ ಹಾಜರಿದ್ದು ನೂತನ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ ಮಹದೇವಪ್ಪ ಮಾತನಾಡಿ, ಸಂಘದ ಅಭಿವೃದ್ಧಿಗೆ ಸದಸ್ಯರು ಸಹಕಾರ ನೀಡುವಂತೆ ಮನವಿ ಮಾಡಿದರು. ಅಲ್ಲದೇ ತಮ್ಮ ಆಯ್ಕೆಗೆ ಕಾರಣರಾದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕರಾದ ಯತೀಂದ್ರ, ಅನಿಲ್ ಚಿಕ್ಕಮಾದು, ಜಿಪಂ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಮುಖಂಡ ಸುನೀಲ್ ಬೋಸ್ ಅವರಿಗೆ ಅಭಿನಂದನೆ ಸಲ್ಲಿಸಿದರು. ಮುಖಂಡರಾದ ಉಪ್ಪನಹಳ್ಳಿ ಶಿವಣ್ಣ, ಹಾರೋಪುರ ಶಿವಣ್ಣ, ಎನ್.ಲಿಂಗಪ್ಪಾಜಿ, ಗುತ್ತಿಗೆದಾರ ನಾಗರಾಜು, ಚಿನ್ನಸ್ವಾಮಿ, ಮಲ್ಲಪ್ಪ ಹಾಜರಿದ್ದರು.

ಸಾಗುವಳಿ ಪತ್ರಕ್ಕೆ ಒತ್ತಾಯಿಸಿ ಪ್ರತಿಭಟನೆ



ನಂಜನಗೂಡು, ಡಿ.8– ತುರ್ತಾಗಿ ಭೂ ಮಂಜೂರಾತಿ ಸಮಿತಿ ಸಭೆ ಕರೆದು ಸಾಗುವಳಿಗೆ ಅರ್ಜಿ ಹಾಕಿರುವ ರೈತರಿಗೆ ಸಾಗುವಳಿ ಪತ್ರ ನೀಡಬೇಕು ಎಂದು ಆಗ್ರಹಿಸಿ ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘಟನೆ ಕಾರ್ಯಕರ್ತರು ನಗರದ ತಹಸೀಲ್ದಾರ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸಂಘಟನೆ ರಾಜ್ಯ ಉಪಾಧ್ಯಕ್ಷ ಹೆಚ್.ಪಿ.ಶಿವಪ್ರಕಾಶ್ ಮಾತನಾಡಿ, ಸಾಗುವಳಿದಾರರಿಗೆ ಖಾತೆ ಮಾಡಿಕೊಡಲು ಸತಾಯಿಸುತ್ತಿರುವ ಸರ್ಕಾರಗಳು, ಬಂಡವಾಳಶಾಹಿಗಳಿಗೆ ಲಕ್ಷಾಂತರ ಎಕರೆ ಭೂಮಿ ಧಾರೆ ಎರೆಯುತ್ತಿವೆ. ಇಂತಹ ನೀತಿ ವಿರೋಧಿಸಿ ರೈತರು ಪ್ರಬಲ ಹೋರಾಟ ಮಾಡಬೇಕು ಎಂದರು.

ತಾಲೂಕಿನ ಹಲವು ಗ್ರಾಮಗಳಲ್ಲಿ ಜಮೀನುಗಳನ್ನು ಒಟ್ಟುಗೂಡಿಸಿ ಒಂದೇ ಸರ್ವೇ ನಂಬರ್‌ಗೆ ಸೇರಿಸಲಾಗಿದೆ. ಆ ಜಮೀನುಗಳನ್ನು ಸರ್ವೇ ಮಾಡಿ ದುರಸ್ತಿ/ಪೋಡ್ ಮಾಡಿಸಿ ರೈತರಿಗೆ ಖಾಯಂ ಸಾಗುವಳಿ ಪತ್ರ ನೀಡಬೇಕು. ತಾಲೂಕಿನ ಕಸಬಾ ಹೋಬಳಿ ಹರತಲೆ, ಹೆಗ್ಗಡಹಳ್ಳಿ, ಬ್ಯಾಳಾರು ಗ್ರಾಮದ ರೈತರು 70–80ರ ದಶಕಗಳಿಂದ ಸಾಗುವಳಿ ಮಾಡುತ್ತಿದ್ದು, ಅವರಿಗೆ ಸಾಗುವಳಿ ಹಕ್ಕುಪತ್ರ ನೀಡಬೇಕು ಎಂದು ಆಗ್ರಹಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ಶಿವಮೂರ್ತಿ, ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 79 ರೈತರಿಗೆ ಹಾಗೂ ವರುಣಾ ಕ್ಷೇತ್ರ ವ್ಯಾಪ್ತಿಯ 75 ರೈತರಿಗೆ ಸಾಗುವಳಿ ಪತ್ರ ನೀಡಲು ಪಟ್ಟಿ ತಯಾರಿಸಲಾಗಿದೆ. ಇನ್ನು 15 ದಿನದಲ್ಲಿ ಸಾಗುವಳಿ ಪತ್ರ ನೀಡಲಾಗುವುದು ಎಂದರು. ಪ್ರತಿಭಟನೆಯಲ್ಲಿ ಎಐಕೆಕೆಎಂಎಸ್ ಜಿಲ್ಲಾ ಸಂಚಾಲಕ ಬಸವರಾಜು, ಎಚ್.ಎಂ.ವಸಂತ ಕುಮಾರಿ, ಶಿವಣ್ಣ, ಮಹದೇವ, ಹಸರಣ್ಣ, ಮರಮ್ಮ ಉಪಸ್ಥಿತರಿದ್ದರು.

ಕಿರಂಗೂರು ಗ್ರಾಮದಲ್ಲಿ ಬಿಎಂಸಿ ಕೇಂದ್ರಕ್ಕೆ ಗುದ್ದಲಿ ಪೂಜೆ



ಹುಣಸೂರು, ಡಿ.8– ಗ್ರಾಹಕರಿಗೆ ಗುಣಮಟ್ಟದ ಹಾಲು ವಿತರಿಸಲು ಹಾಗೂ ಹಾಲು ಉತ್ಪಾದಕರನ್ನು ಪ್ರೋತ್ಸಾಹಿಸಲು ಬಿಎಂಸಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ಕಿರಂಗೂರು ಗ್ರಾಮದಲ್ಲಿ ಬಿಎಂಸಿ ಕೇಂದ್ರಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈಗಾಗಲೇ ಹಲವು ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಬಿಎಂಸಿ ಕೇಂದ್ರ ಕಾಮಗಾರಿ ಪ್ರಗತಿಯಲ್ಲಿದೆ. ಅಲ್ಲದೇ ಇನ್ನೂ ಹಲವು ಕಡೆ ಸ್ಥಾಪನೆ ಮಾಡುವ ಉದ್ದೇಶವನ್ನು ಒಕ್ಕೂಟ ಹೊಂದಿದೆ ಎಂದರು.

ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ನೆರವಿನಿಂದ ಹಾಲಿ ಬಿಎಂಸಿ ಕೇಂದ್ರ ನಿರ್ಮಾಣವಾಗುತ್ತಿದೆ. ಇನ್ನೂ 8 ಕೇಂದ್ರಗಳಿಗೆ ನ್ಯಾಷನಲ್ ಕೋ–ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ನೆರವು ನೀಡಲಿದ್ದು, ಉದ್ದೇಶಿತ ಬಿಎಂಸಿ ಕೇಂದ್ರಗಳನ್ನು ಹಲವು ಗ್ರಾಮಗಳಲ್ಲಿ ಆರಂಭಿಸಲಾಗುವುದು ಎಂದರು.

ಸ್ಥಾಪನೆಗೊಂಡ ಕೆಲವೇ ವರ್ಷದಲ್ಲಿ ಡೈರಿ ಹೆಚ್ಚಿನ ಪ್ರಗತಿ ಹೊಂದಿದ್ದು, 8 ಲಕ್ಷ ಉಳಿತಾಯ ಮಾಡಿ ಸ್ವಂತ ಕಟ್ಟಡಕ್ಕೆ ಗುದ್ದಲಿಪೂಜೆ ನೆರವೇರಿಸುತ್ತಿರುವುದು ಸಂತಸ ತಂದಿದೆ. ಒಕ್ಕೂಟದಿಂದ ಸಹಾಯಧನ ನೀಡಲು ನಿರ್ದೇಶಕ ಕೆ.ಎಸ್. ಕುಮಾರ್ ಅವರಿಗೆ ತಿಳಿಸಲಾಗುವುದು. ಡೈರಿ ಇನ್ನೂ ಹೆಚ್ಚಿನ ರೀತಿ ಪ್ರಗತಿ ಹೊಂದಿ ಗುಣಮಟ್ಟದ ಉತ್ಪನ್ನ ದೊರೆಯುವಂತಾಗಬೇಕು ಎಂದರು.

ಮೈಮುಲ್ ನಿರ್ದೇಶಕಿ ಶಿವಗಾಮಿ ಮಾತನಾಡಿದರು. ಸಮಾರಂಭದಲ್ಲಿ ಉಪ ವ್ಯವಸ್ಥಾಪಕ ಸಣ್ಣತಮ್ಮೇಗೌಡ, ಕರಿಬಸವಯ್ಯ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜ್, ಡೈರಿ ಅಧ್ಯಕ್ಷ ಮಾದೇಗೌಡ, ಒಕ್ಕೂಟದ ವಿಸ್ತರಣಾಧಿಕಾರಿ ಗೌತಮ್, ಸಂತೋಷ್, ಡೈರಿ ಕಾರ್ಯದರ್ಶಿ ಶಿವು, ನಿರ್ದೇಶಕರು, ಗ್ರಾಮಸ್ಥರು ಹಾಜರಿದ್ದರು.

ಕೆ.ಆರ್.ನಗರ ಅಭಿವೃದ್ಧಿಯಲ್ಲಿ ಸಾಲಿಗ್ರಾಮ ಕೊಡುಗೆ ಅಪಾರ



ಭೇರ್ಯ, ಡಿ.8– ಕೆ.ಆರ್.ನಗರ ಅಭಿವೃದ್ಧಿಯಲ್ಲಿ ಸಾಲಿಗ್ರಾಮ ಕೊಡುಗೆ ಅಪಾರವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ತಿಳಿಸಿದರು.

ಪಟ್ಟಣದಲ್ಲಿ ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ಸ್ವಾಮೀಜಿಗಳಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಹಾವನೂರು ವರದಿಯಿಂದ ಇಂದು ಅನೇಕರು ಅಧಿಕಾರ ಪಡೆಯಲು ಸಾಧ್ಯವಾಗಿದೆ. ಯಾವುದೇ ಭಾಷೆ, ಧರ್ಮ, ಜಾತಿಯವರಿಗೆ ರಾಜಕೀಯದ ಅಧಿಕಾರ ಬೇಕು. ಇಲ್ಲದಿದ್ದರೆ ಸಮಾಜದಲ್ಲಿ ಮೇಲೆ ಬರಲು ಸಾಧ್ಯವಿಲ್ಲ ಎಂದು ಡಾ.ಅಂಬೇಡ್ಕರ್ ಈ ಹಿಂದೆಯೇ ಹೇಳಿದ್ದಾರೆ ಎಂದ ಅವರು, ರಾಜನಹಳ್ಳಿಯಲ್ಲಿ ಶ್ರೀವಾಲ್ಮೀಕಿ ಪೀಠ ಸ್ಥಾಪನೆ ಹಾಗೂ ಮಾಜಿ ಶಾಸಕ ದಿ.ಚಿಕ್ಕಮಾದು ಸಮಾಜದ ಪರ ಹೋರಾಡಿದ ದಿನಗಳನ್ನು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಸಾ.ರಾ.ಮಹೇಶ್, ಸ್ವಾಮೀಜಿಯವರ ಹೋರಾಟದ ಪ್ರತಿಫಲವಾಗಿ ಇಂದು ಸಮಾಜದ ಮೀಸಲಾತಿ ಹೆಚ್ಚಳವಾಗಿದೆ. ಅವರು ಹೋರಾಡದಿದ್ದರೆ ಮೀಸಲಾತಿ ಹೆಚ್ಚಳವಾಗುತ್ತಿರಲಿಲ್ಲ ಎಂದರು.

ಕೆ.ಆರ್.ನಗರದ ಹಲವು ಗ್ರಾಮಗಳ ನಾಯಕ ಸಮುದಾಯದ ಸಮುದಾಯ ಭವನಗಳಿಗೆ ಅನುದಾನ ನೀಡಲಾಗಿದೆ. ಕ್ಷೇತ್ರದಲ್ಲಿ ಜಾತ್ಯತೀತ, ಪಕ್ಷಾತೀತವಾಗಿ ಕ್ಷೇತ್ರದ ಅಭಿವೃದ್ಧಿ ಮಾಡುವುದೇ ನನ್ನ ಕನಸು ಎಂದರು.

ಸಮಾಜದ ಬಂಧುಗಳು ಸ್ವಾಮೀಜಿ ಅವರಿಗೆ ಕೇವಲ ನಮಸ್ಕಾರ ಮಾಡಿದರೆ ಸಾಲದು, ದಕ್ಷಿಣೆ ಹಾಕುವ ಮೂಲಕ ಆರ್ಥಿಕ ಶಕ್ತಿ ತುಂಬುವ ಕೆಲಸ ಮಾಡಿ ಮಠಗಳನ್ನು ಬೆಳೆಸಬೇಕೆಂದು ಕರೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ರಾಜನಹಳ್ಳಿ ವಾಲ್ಮೀಕಿ ಮಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, ಯಾರಿಗೂ ಅನ್ಯಾಯವಾಗದಂತೆ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬ ಹಾದಿಯಲ್ಲಿ ಸಾಗುವ ಮೂಲಕ ನಮಗೆ ಸಿಗಬೇಕಾದ ಹಕ್ಕುಗಳನ್ನು ಪಡೆಯೋಣ ಎಂದರು.

ಶ್ರೀಮಹರ್ಷಿ ವಾಲ್ಮೀಕಿ ಅವರ ಇತಿಹಾಸವನ್ನು ಹುಣಸೂರಿನ ಸರ್ಕಾರಿ ಮಹಿಳಾ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ನಂಜುಂಡ ಸ್ವಾಮಿ ಭಾಷಣದಲ್ಲಿ ತಿಳಿಸಿದರು.

ಉರಿಲಿಂಗ ಪೆದ್ದಿ ಮಠದ ಶ್ರೀಜ್ಞಾನ ಪ್ರಕಾಶ ಸ್ವಾಮೀಜಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀಸಿದ್ದರಾಮೇಶ್ವರ ಸ್ವಾಮೀಜಿ, ಜಿಪಂ ಮಾಜಿ ಸದಸ್ಯರಾದ ಡಿ.ರವಿಶಂಕರ್, ಅಚ್ಚುತಾನಂದ, ಮೇಯರ್ ಶಿವಕುಮಾರ್, ಎಂಎಲ್‌ಸಿ ಆಪ್ತ ಕಾರ್ಯದರ್ಶಿ ಶ್ರೀಧರ್ ನಾಯಕ್, ಹಾರಂಗಿ ಇಲಾಖೆ ಎಇಇ ಈರಣ್ಣ ನಾಯಕ, ಗ್ರಾಪಂ ಅಧ್ಯಕ್ಷೆ ಲಕ್ಷ್ಮಿ, ಉಪಾಧ್ಯಕ್ಷೆ ನೀಲಮ್ಮ, ಹುಣಸೂರು ನಾಯಕ ಸಂಘದ ಅಧ್ಯಕ್ಷ ಅಣ್ಣಯ್ಯ ನಾಯ್ಕ, ಪಿರಿಯಾಪಟ್ಟಣ ನಾಯಕ ಸಂಘದ ಅಧ್ಯಕ್ಷ ಹರೀಶ್, ಮುಖಂಡರಾದ ದೇವರಾಜ ಒಡೆಯರ್, ದೇವರಾಜ್, ರಾಜಣ್ಣ, ಕುಮಾರ್, ಜಿಲ್ಲಾ ಯುವ ಜೆಡಿಎಸ್ ಉಪಾಧ್ಯಕ್ಷ ಕುಚೇಲ, ಕೆ.ಆರ್.ನಗರ ಹಾಗೂ ಸಾಲಿಗ್ರಾಮ ತಾಲೂಕು ನಾಯಕ ಸಂಘ ಅಧ್ಯಕ್ಷರಾದ ನರಸಿಂಹನಾಯಕ, ಮಹದೇವನಾಯಕ ಇತರರಿದ್ದರು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಿಂದ ಬೆಳ್ಳಿ ಪಲ್ಲಕ್ಕಿಯಲ್ಲಿ ಶ್ರೀಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರ ಪ್ರತಿಷ್ಠಾಪಿಸಿ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ವೇದಿಕೆಗೆ ಕರೆತರಲಾಯಿತು. ಮೆರವಣಿಗೆಗೆ ಜಿಪಂ ಮಾಜಿ ಸದಸ್ಯ ಸಾ.ರಾ.ನಂದೀಶ್ ಚಾಲನೆ ನೀಡಿದರು. ಈ ವೇಳೆ ಇನ್ನಿತರರಿದ್ದರು.

ಬಂಕವಾಡಿಯಲ್ಲಿ ಅದ್ಧೂರಿ ಹನುಮ ಜಯಂತಿ



ಸರಗೂರು, ಡಿ.8– ತಾಲೂಕಿನ ಬಂಕವಾಡಿಯಲ್ಲಿ ಅದ್ಧೂರಿಯಾಗಿ ಹನುಮ ಜಯಂತಿ ಆಚರಿಸಲಾಯಿತು. ಮುಂಜಾನೆಯಿಂದಲೇ ಗ್ರಾಮದ ಆಂಜನೇಯಸ್ವಾಮಿ ದೇವಾಲಯದಲ್ಲಿ ಅಭಿಷೇಕ ಸೇರಿದಂತೆ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ನಂತರ ನದಿಗೆ ತೆರಳಿ ಗಂಗೆಪೂಜೆ ನಡೆಸಿ, ವಿವಿಧ ಹೂಗಳಿಂದ ದೇವರನ್ನು ಅಲಂಕರಿಸಿ, ವಿಶೇಷ ಪೂಜೆ ನಡೆಸಿ, ಮಹಾಮಂಗಳಾರತಿ ಮಾಡಿ ಮಹಾಪ್ರಸಾದ ವಿನಿಯೋಗ ಮಾಡಲಾಯಿತು. ಬಳಿಕ ಹನುಮ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಗ್ರಾಮದ ಚಿಕ್ಕಸ್ವಾಮಪ್ಪ, ಮುಖಂಡರಾದ ಸುರೇಶ್, ಪದ್ಮರಾಜು ಸೇರಿದಂತೆ ಇನ್ನಿತರರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ



ಭೇರ್ಯ, ಡಿ.8– ಭೇರ್ಯ 66/11 ಕೆವಿ ವಿದ್ಯುತ್ ವಿತರಣಾ ಉಪಕೇಂದ್ರದಲ್ಲಿ ತ್ರೈಮಾಸಿಕ ತುರ್ತು ಕಾರ್ಯ ನಿಮಿತ್ತ ಡಿ.10 ರಂದು ಬೆಳಗ್ಗೆ 10 ರಿಂದ ಸಂಜೆ 5ರವರೆಗೆ ಭೇರ್ಯ, ಹೊಸಅಗ್ರಹಾರ, ಮುಂಜನಹಳ್ಳಿ ಹಾಗೂ ಮೇಲೂರು ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮಾಜಿ ಸಿಎಂ ಸಿದ್ದರಾಮಯ್ಯ ವರುಣಾದಿಂದಲೇ ಸ್ಪರ್ಧಿಸಲಿ


ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್ ಒತ್ತಾಯ

ತಿ.ನರಸೀಪುರ, ಡಿ.8– ಮಾಜಿ ಮುಖ್ಯಮಂತ್ರಿ ಮತ್ತು ಸಾಮಾಜಿಕ ನ್ಯಾಯದ ಹರಿಕಾರ ಸಿದ್ದರಾಮಯ್ಯನವರು ವರುಣಾ ಕ್ಷೇತ್ರದಿಂದಲೇ ಸ್ಪರ್ಧಿಸುವಂತೆ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್ ಒತ್ತಾಯಿಸಿದ್ದಾರೆ.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕ್ಷೇತ್ರ ಹುಡುಕಾಟ ನಿಲ್ಲಿಸಿ ಕಾಂಗ್ರೆಸ್ ಭದ್ರಕೋಟೆ, ತಮ್ಮ ಸ್ವಕ್ಷೇತ್ರ ವರುಣಾದಿಂದಲೇ ಸ್ಪರ್ಧಿಸಲು ನಿರ್ಧಾರ ಕೈಗೊಳ್ಳಬೇಕು ಎಂದರು.

ಇತ್ತೀಚಿನ ವಿದ್ಯಮಾನಗಳ ಪ್ರಕಾರ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಹಣಿಯಲು ಇನ್ನಿಲ್ಲದ ಕಸರತ್ತು ನಡೆಸಿವೆ. ಅವರು ಸ್ಪರ್ಧಿಸುವ ಕ್ಷೇತ್ರದಲ್ಲಿ ರಾಜಕೀಯ ತಂತ್ರಗಾರಿಕೆ ನಡೆಸಲು ರಹಸ್ಯ ಸಭೆ ನಡೆಸಲಾಗುತ್ತಿದೆ. ಹಾಗಾಗಿ ವರುಣಾ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅವರನ್ನು ಹಣಿಯಲು ಸಾಧ್ಯವಿಲ್ಲ. ಈ ಕ್ಷೇತ್ರದ ಪ್ರತಿಯೊಬ್ಬ ಕಾರ್ಯಕರ್ತರ ಮನಸ್ಸು, ಮನೆಯಲ್ಲೂ ಸಿದ್ದರಾಮಯ್ಯರಿದ್ದು, ಅವರ ಗೆಲುವು ಶತಸಿದ್ಧ ಎಂದರು.

ಕಳೆದ ಚುನಾವಣೆಯಲ್ಲಿ ವರುಣಾದಿಂದ ಡಾ.ಯತೀಂದ್ರ ಸಿದ್ದರಾಮಯ್ಯ 60 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದಿದ್ದಾರೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯನವರು ವರುಣಾ ಕ್ಷೇತ್ರದಿಂದ ಸ್ಪರ್ಧಿಸಿದ್ದೇ ಆದಲ್ಲಿ ಕಾರ್ಯಕರ್ತರು ಸೈನಿಕರಂತೆ ಕೆಲಸ ಮಾಡಿ 80 ಸಾವಿರಕ್ಕೂ ಹೆಚ್ಚು ಮತಗಳಿಂದ ಗೆಲ್ಲಿಸುತ್ತೇವೆ ಎಂದರು.



ವರುಣಾದಲ್ಲಿ ಬಿಜೆಪಿ ರಾಜಕೀಯ, ಹಣದ ಪ್ರಭಾವ, ತಂತ್ರಗಾರಿಕೆ ಮತ್ತು ಇನ್ನಿತರೆ ಯಾವುದೇ ಷಡ್ಯಂತ್ರ ನಡೆಯಲ್ಲ. ಇಲ್ಲಿನ ಮತದಾರರು ಪ್ರಜ್ಞಾವಂತರು ಮತ್ತು ಪ್ರಬುದ್ಧರಾಗಿದ್ದು, ಸಿದ್ದರಾಮಯ್ಯರ ಅಧಿಕಾರಾವಧಿಯಲ್ಲಿ ಜಾರಿಗೆ ತಂದಿರುವ ಜನಪ್ರಿಯ ಯೋಜನೆಗಳು, ಅವರ ಸಾಮಾಜಿಕ ನ್ಯಾಯ ಇವೆಲ್ಲವನ್ನು ಗಮನಿಸಿ ಅವರನ್ನು ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಲಿದ್ದಾರೆ ಎಂದು ಭರವಸೆ ವ್ಯಕ್ತಪಡಿಸಿದರು.

ವರುಣಾ ಕ್ಷೇತ್ರ ಸಿದ್ದರಾಮಯ್ಯರಿಗೆ ಅದೃಷ್ಟದ ಕ್ಷೇತ್ರ. 2008ರಲ್ಲಿ ವರುಣಾದಿಂದ ಆಯ್ಕೆಯಾಗಿದ್ದ ಅವರು ಮುಖ್ಯಮಂತ್ರಿಯಾದರು. ಒಮ್ಮೆ ವಿಪಕ್ಷ ನಾಯಕರಾದರು. ಹಾಗಾಗಿ ಮತ್ತೆ ವರುಣಾದಿಂದಲೇ ಸ್ಪರ್ಧೆ ಮಾಡಿದಲ್ಲಿ ಪ್ರಚಂಡ ಬಹುಮತದೊಂದಿಗೆ ಆಯ್ಕೆಗೊಂಡು ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಭವಿಷ್ಯ ನುಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಜವಾಬ್ದಾರಿ ವಿಪಕ್ಷ ನಾಯಕ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೆಗಲ ಮೇಲಿರುವುದರಿಂದ ಸಿದ್ದರಾಮಯ್ಯರನ್ನು ವರುಣಾದಿಂದಲೇ ಸ್ಪರ್ಧಿಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರದ ಮೂಲಕ ಮನವಿ ಮಾಡಲಾಗಿದೆ ಎಂದರು.

ಕಾಂಗ್ರೆಸ್ ಜಿಲ್ಲಾ ಗ್ರಾಮಾಂತರ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ.ಪ್ರದೀಪ್ ಮಾತನಾಡಿ, ಸಿದ್ದರಾಮಯ್ಯ ಎಲ್ಲಾ ವರ್ಗಗಳ, ಜಾತಿಗಳ, ಸಮುದಾಯದ ಮೆಚ್ಚಿನ ನಾಯಕರಾಗಿದ್ದು, ಕ್ಷೇತ್ರ ಬದಲಾವಣೆ ಮಾಡುವುದು ಬೇಡ. ಇತ್ತೀಚಿನ ದಿನಗಳಲ್ಲಿ ಅವರಿಗೆ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿರುವುದರಿಂದ ದೂರದ ಕ್ಷೇತ್ರಗಳಿಗೆ ಹೋದಲ್ಲಿ ಓಡಾಟ ಕಷ್ಟಕರವಾಗಲಿದೆ. ಹಾಗಾಗಿ ಸಿದ್ದರಾಮಯ್ಯ ವರುಣಾ ಕ್ಷೇತ್ರದಿಂದಲೇ ಸ್ಪರ್ಧಿಸಬೇಕು. ಈ ಬಾರಿ ಕ್ಷೇತ್ರದ ಮತದಾರ ಅವರನ್ನು ಅತ್ಯಧಿಕ ಮತಗಳ ಅಂತರದಿಂದ ಗೆಲ್ಲಿಸಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಬಿಳಿಗೆರೆಹುಂಡಿ ಡೈರಿ ಮಾಜಿ ಅಧ್ಯಕ್ಷ ಮಹದೇವ್, ಕಾಂಗ್ರೆಸ್ ಹಿರಿಯ ಮುಖಂಡ ಸೋಮಣ್ಣ, ನಿವೃತ್ತ ಎಸ್‌ಐ ಸಿದ್ದಬಸವೇಗೌಡ, ಗೋವಿಂದರಾಜು, ಹೆಮ್ಮರಹುಂಡಿ ನಾಗೇಂದ್ರ ಬಸಪ್ಪ ರೇವಣ್ಣ ಕನಕ ಪ್ರೆಸ್ ಮಹದೇವ, ಸಿದ್ದರಾಜು, ಅರ್ಜುನ್, ರವಿ, ರಾಜೇಂದ್ರ, ಪ್ರಕಾಶ್, ರಘು ಇತರರಿದ್ದರು.

ಯುವಕ ಅನುಮಾನಾಸ್ಪದ ಸಾವು: ಕೊಲೆ ಶಂಕೆ

ತಿ.ನರಸೀಪುರ, ಡಿ.8– ಯುವಕನೋರ್ವ ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ತಾಲೂಕಿನಲ್ಲಿ ನಡೆದಿದೆ. ತಾಲೂಕಿನ ನಿಂಗೇಗೌಡನಹುಂಡಿ ಗ್ರಾಮದ ನಿವಾಸಿ



ಶ್ರೀನಿವಾಸ ಎಂಬುವರ ಪುತ್ರ ಕಿರಣ್(26) ಸಾವನ್ನಪ್ಪಿದವರಾಗಿದ್ದು, ದುಷ್ಕರ್ಮಿಗಳು ನನ್ನ ಮಗನನ್ನು ಕೊಲೆ ಮಾಡಿದ್ದಾರೆ ಎಂದು ಆರೋಪಿಸಿ ಕಿರಣ್ ತಂದೆ ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಅವಿವಾಹಿತನಾಗಿದ್ದ ಕಿರಣ್ ಕಳೆದ 2 ವರ್ಷಗಳಿಂದ ಯಡದೊರೆ ಟೋಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದ. ಮಂಗಳವಾರ ಬೆಳಗ್ಗೆ 8 ಗಂಟೆಗೆ ಕೆಲಸದಿಂದ ಬಂದ ಕಿರಣ್ ಮತ್ತೆ 2 ಗಂಟೆಗೆ ಮನೆಯಿಂದ ಹೊರ ಹೋಗಿದ್ದಾನೆ. ಬಳಿಕ ಆತನ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಮನೆಯವರು ರಾತ್ರಿ ಪಾಳಿ ಕೆಲಸಕ್ಕೆ ಹೋಗಿರಬಹುದೆಂದು ಸುಮ್ಮನಾಗಿದ್ದಾರೆ. ಆದರೆ ಬುಧವಾರವೂ ಆತ ಮನೆಗೆ ಬಾರದ ಹಿನ್ನೆಲೆಯಲ್ಲಿ ಮನೆಯವರು ಗಾಬರಿಗೊಂಡು ಹುಡುಕಾಡಿದ್ದಾರೆ. ಈ ನಡುವೆ ಶ್ರೀನಿವಾಸ ಅವರ ಸಹೋದರ ರಾಮದಾನಿ ಹಾಗೂ ಅವರ ಪುತ್ರ ಮನು, ಹುಡುಕಲಾಗಿ ಕೆಂಪಯ್ಯನಹುಂಡಿ ಗ್ರಾಮದ ವರುಣಾ ನಾಲೆ ಬಳಿ ಕಿರಣ್ ಶವವಾಗಿ ಪತ್ತೆಯಾಗಿದ್ದಾನೆ.

ಕಿರಣ್ ತಲೆ ಮೇಲೆ ಸಿಮೆಂಟ್ ಮತ್ತು ಜಲ್ಲಿ ದಿಂಡನ್ನು ಎತ್ತಿಹಾಕಿ ಕೊಲೆ ಮಾಡಲಾಗಿದೆ ಎಂದು ಶಂಕಿಸಲಾಗಿದ್ದು, ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಎಸ್‌ಐ ತಿರುಮಲ್ಲೇಶ್ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಭೂಮಿ ಪೂಜೆ



ಪಿರಿಯಾಪಟ್ಟಣ, ಡಿ.8– ತಾಲೂಕಿನ ಗೊರಹಳ್ಳಿಯಲ್ಲಿ ಕಾಂಕ್ರಿಟ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಚುನಾವಣೆ ಸಮೀಪಿಸುತ್ತಿದ್ದಂತೆ ಕಾಂಗ್ರೆಸ್ ಮುಖಂಡರು ನಾನು ಕ್ಷೇತ್ರ ವ್ಯಾಪ್ತಿಯ ಹಳ್ಳಿಗಳಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯ ಸಹಿಸದೆ ನನ್ನ ಹಾಗೂ ನನ್ನ ಮಗನ ಮೇಲೆ ಇಲ್ಲಸಲ್ಲದ ಆರೋಪ ಮಾಡುವ ಮೂಲಕ ತಾಲೂಕಿನ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ನನ್ನ ಅಭಿವೃದ್ಧಿ ಕಾಮಗಾರಿಗಳಿಗೆ ಜನರಿಂದ ಪ್ರಶಂಸೆ ಸಿಕ್ಕಿದೆ. ನೀವು ಮಾಡಿರುವ ಕೆಲಸಗಳನ್ನು ಸಾರ್ವಜನಿಕರ ಮುಂದಿಟ್ಟು ಮತ ಕೇಳಬೇಕೆ ಹೊರತು ಮತ್ತೊಬ್ಬರನ್ನು ಟೀಕಿಸಬಾರದು ಎಂದರು.


ಈ ವೇಳೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೆಚ್ಚುವರಿ ಕೊಠಡಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮುಖಂಡ ರವಿ ವಿದ್ಯಾಶಂಕರ್, ಪಟೇಲ್, ನಟೇಶ್, ವಸಂತ್, ಪುನೀತ್, ಹರೀಶ್, ಮುನಫ್, ಅತ್ತರ್ ಮತಿನ್, ಸ್ವಾಮಿ, ಸುರೇಶ್, ಧರಣೇಶ್ ಇತರರಿದ್ದರು.

ಕಾರಿನ ಕಿಟಕಿ ಗಾಜು ಒಡೆದು 2 ಲಕ್ಷ ನಗದು ಕಳವು

ಮೈಸೂರು, ಡಿ.8–ಕಾರಿನ ಗಾಜು ಒಡೆದು 2 ಲಕ್ಷ ರೂ. ನಗದು ಕಳವು ಮಾಡಿರುವ ಘಟನೆ ಮೈಸೂರಿನ ಅರವಿಂದನಗರದ ಜನನಿ ಜನ್ಮ ಭೂಮಿ ಚಕ್ರದ ಮುಂಭಾಗ ನಡೆದಿದೆ. ಹೆಚ್.ಡಿ.ಕೋಟೆ ತಾಲೂಕು ಜಿ.ಎಂ.ಹಳ್ಳಿ ಗ್ರಾಮದ ರೈತ ಕೆ.ಆರ್.ಶಂಕರೇಗೌಡ(60) ಹಣ ಕಳೆದುಕೊಂಡವರಾಗಿದ್ದು, ಬೆಂಗಳೂರಿನಲ್ಲಿರುವ ಇವರ ಅಣ್ಣನ ಮಗಳು ಮೈಸೂರಿನ ಬಂಡಿಪಾಳ್ಯದ ಬಳಿ ನಿವೇಶನ ಖರೀದಿಸಿದ್ದು, ರಿಜಿಸ್ಟ್ರೇಷನ್‌ಗಾಗಿ ಅವರಿಗೆ ಕೊಡಲು ಶಂಕರೇಗೌಡರು 2 ಲಕ್ಷ ರೂ.ಗಳನ್ನು ತಮ್ಮ ಸ್ವಿಫ್ಟ್ ಡಿಸೈರ್ ಕಾರಿನ (ಕೆಎ 51 ಎಂಎ 9975) ಮುಂಭಾಗದ ಎಡ ಸೀಟಿನ ಕೆಳಗೆ ಇಟ್ಟುಕೊಂಡು ಮೈಸೂರಿಗೆ ಡಿ.6ರಂದು ಬಂದಿದ್ದರು. ಅಂದು ಜನನಿ ಜನ್ಮ ಭೂಮಿ ಛತ್ರದಲ್ಲಿ ನಡೆಯುತ್ತಿದ್ದ ಸಂಬಂಧಿಕರ ಮದುವೆಗೆ ಮಧ್ಯಾಹ್ನ 1.30ಕ್ಕೆ ಹೋಗಿ ಸಂಜೆ 4 ಗಂಟೆಗೆ ಹಿಂತಿರುಗಿದಾಗ ಛತ್ರದ ಮುಂಭಾಗ ನಿಲ್ಲಿಸಿದ್ದ ಅವರ ಕಾರಿನ ಹಿಂಬದಿ ಡೋರ್‌ನ ಗಾಜು ಒಡೆದು ಹಣ ಕಳವು ಮಾಡಲಾಗಿದೆ. ಈ ಸಂಬಂಧ ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು, ನಾಳೆ ಹಲವೆಡೆ ನೀರು ವ್ಯತ್ಯಯ

ಮೈಸೂರು,ಡಿ.8–ಕಬಿನಿ ನೀರು ಸರಬರಾಜು ಯೋಜನೆಯ ಮೂಲ ಸ್ಥಾವರದಲ್ಲಿ



ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಡಿ.9 ಮತ್ತು 10ರಂದು ವಾರ್ಡ್ ನಂ. 45ರಿಂದ 55 (ಶಾರದಾದೇವಿನಗರ, ದಟ್ಟಗಳ್ಳಿ, ಕುವೆಂಪು ನಗರ, ಜಯನಗರ, ಲಕ್ಷ್ಮೀಪುರಂ, ಅಗ್ರಹಾರ), ವಾರ್ಡ್ ನಂ. 54ರಿಂದ 65 (ಗುಂಡೂರಾವ್‌ನಗರ, ಚಾಮುಂಡಿಪುರಂ, ಕೃಷ್ಣಮೂರ್ತಿಪುರಂ, ಕುವೆಂಪುನಗರ ಸಿಐಟಿಬಿ, ರಾಮಕೃಷ್ಣನಗರ, ಕುವೆಂಪುನಗರ ಎಂ–ಬ್ಲಾಕ್, ಅಶೋಕಪುರಂ, ವಿದ್ಯಾರಣ್ಯಪುರಂ ಭಾಗಶಃ ವಿಶ್ವೇಶ್ವರನಗರ, ಜೆ.ಪಿ.ನಗರ, ಅರವಿಂದನಗರ, ಶ್ರೀರಾಂಪುರ) ಪ್ರದೇಶಗಳಲ್ಲಿ ನೀರಿನ ಸರಬರಾಜಲ್ಲಿ ವ್ಯತ್ಯಯ ಉಂಟಾಗಲಿದೆ.

CHANGE OF NAME

I, Manikantan.S.N S/o Late Nagaraja Shettyar Residing at No.172, Ganapathi Temple Road, 3rd Cross, Lokanayaka Nagara, Mysuru - 570016. I have changed my name to M.N.Paul Solomon on my own free will in front of Notary C.Mangala on date 08-12-2022 In future, I will be known called as M.N.Paul Solomon.

Sd/- M.N.Paul Solomon

IN THE COURT OF XI ADDL. CIVIL JUDGE & JMFC AT MYSURU

P & SC.NO. 31 /2022

Petitioners: 1. Padma R W/o Late Ashwathanarayana N.S Aged about 78 years, Residing at No. 300, 9th Cross, Bogadi, Mysuru-570026

2. Hemalatha N.A., D/o Late Ashwathnarayana N.S., Aged about 42 years, Residing at -Srinidhi Kote Road, Opposite to DTI, Shimoga-577202

3. Chethana Nagamangala Aswathanarayana, D/o Late Ashwathnarayana N.S., Aged about 40 years Residing at No. 544, 53rd Cross, 3rd Block, Near Ram Mandir, Rajajinagar, Bengaluru-560010

4. Mohan N.A, S/o Late Ashwathnarayana N.S., Aged about 37 years, Residing at No. 381, Ganesh Bhandar Road, Janathanagar, Saraswathipuram, Mysuru-570009

-V/S-

Respondent: Nil

PUBLIC NOTICE

The Petitioner's have filed the above petition under section 372 of Indian Succession Act for grant of Succession Certificate in respect of the schedule property.

If any person having any claim, interest or objections in granting Succession Certificate in favour of the Petitioner No.4, may appear before this Hon'ble Court on 06-01-2023 at 11.00 AM. Either in person or through Counsel duly instructed. Failing which, the matter will be heard and decided in accordance with law.

SCHEDULE

KIRLOSKAR OIL ENGINES LIMITED, CIN: L29120PN2009PLC133351 Regd. Office: Laxmanrao Kirloskar Road, Khadki, Pune-411 003 (India) and also any other companies share/s wherever invested by Late Ashwathnarayana N.S.

Folio No.	Warrant Nos.	Cert.Nos	No. of shares
0002464	11123	011134	2137
0002464	4170	004177	142

Given under my hand and seal of this Hon'ble court on this the 7th day of December 2022.

Sd/- Srilatha Dixit, Advocate
(KAR1196/2015) No. 1458/A, N.S. Road, Mysuru.

By order of the court
Chief Administrative Officer
Civil Judge(junior), Mysuru.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು